ಕರ್ನಾಟಕ ಸರ್ಕಾರ ಸಾರ್ವಜನಿಕ ಶಿಕ್ಷಣ ಇಲಾಖೆ

# ಶಿಕ್ಷಣ ವಾರ್ತೆ

ಎಲ್ಲರೂ ಕಲಿಯೋಣ
ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಬೆಳೆಯೋಣ

ಸಂಪುಟ – 7 ಸಂಚಿಕೆ – 2 ಜುಲೈ – 2007 ಆಂತರಿಕ ಪ್ರಸಾರ

## ಗದಗ ಜಿಲ್ಲಾ ಶೈಕ್ಷಣಿಕ ವರದಿ ........







ಕುಮಾರ ವ್ಯಾಸನ
ನಾಡಿನಲಿ ಅಕ್ಷರದ ಸುಗ್ಗಿ
ಅಕ್ಷರ ದಾಸೋಹದೊಡಗೂಡಿ
ನಿರಂತರ ಬೆಳೆದಿದೆ ಹಿಗ್ಗಿ

# ಚಿತ್ರಸುದ್ದಿ



ಶಾಲಾವಾರ್ಷಿಕೋತ್ಸವ ಹಾಗೂ ಪರಿಸರ ಜಾಗೃತಿ ಕಾರ್ಯಕ್ರಮ ಹಿ.ಪ್ರಾ. ಶಾಲೆ, ಹುಲ್ಲೇಹಾಳ್, ಚಿತ್ರದುರ್ಗ ತಾಲ್ಲೂಕು, ಜಿಲ್ಲೆ ಇಲ್ಲಿ ಸ್ಕೌಟ್ ಟ್ರೂಪ್‌ನ ವತಿಯಿಂದ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಶಾಲಾವಾರ್ಷಿಕೋತ್ಸವ ಹಾಗೂ ಪರಿಸರ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಶಾಲಾವಾರ್ಷಿಕೋತ್ಸವ ಕಾರ್ಯಕ್ರಮವನ್ನು ಬಳ್ಳಿಕಟ್ಟೆಯ ವಿ.ಎಸ್.ಎಸ್. ಸದಸ್ಯ ಪುರಸ್ಕೃತರಾದ ಜಿ.ಎಸ್. ಎಸ್. ಮೂರ್ತಿಯವರು ಶಾಲಾವರಣದಲ್ಲಿ ಸಸಿಯನ್ನು ನೆಡುವುದರ ಮೂಲಕ ಉದ್ಘಾಟಿಸಿದರು.

–ಮಹೇಶ ಟಿ.ಎಸ್.
ಹುಲ್ಲೇಹಾಳ, ಚಿತ್ರದುರ್ಗ ಜಿಲ್ಲೆ



ಬಾಗಲಕೋಟೆ ಜಿಲ್ಲೆ / ತಾಲ್ಲೂಕು ಕಲಾದಗಿಯಲ್ಲಿ ಪ್ರಸಕ್ತ ವರ್ಷದ ಮಕ್ಕಳ ಗಣತಿಕಾರ್ಯ ಪ್ರಚಾರವನ್ನು ವಿಶೇಷ ರೀತಿಯ ಪ್ರಚಾರ ಕೈಗೊಳ್ಳಲಾಯಿತು. ಸಮೂಹ ಸಂಪನ್ಮೂಲ ಕೇಂದ್ರ ವ್ಯಾಪ್ತಿಯ ಎಲ್ಲ ಶಾಲೆಗಳಲ್ಲಿ ಒಂದುವಾರ ಮೊದಲು ವಿದ್ಯಾರ್ಥಿ ಗಣತಿ ಗ್ರಾಮಸ್ಥಳಕ ಪ್ರಚಾರ ಆಂದೋಲನ ನಡೆದು ಸಾರ್ವಜನಿಕರಲ್ಲಿ ಜಾಗೃತಿಯುಂಟಾಗುವ ಸನ್ನಿವೇಶ ನಿರ್ಮಾಣವಾಗಿತ್ತು.

–ದೊಡ್ಡಪ್ಪ ಗದ್ದನಕೇರಿ
ಸಮೂಹ ಸಂಪನ್ಮೂಲ ವ್ಯಕ್ತಿ



## ಮಕ್ಕಳ ಜೀವ ರಕ್ಷಣೆಗೆ ಮಾದರಿ ಕಟ್ಟಡ

ಮಕ್ಕಳು ಮಹಡಿಯಿಂದ ಬೀಳುವ ಅಪಘಾತವನ್ನು ತಪ್ಪಿಸಲು ಎಷ್ಟು ಕಾಳಜಿವಹಿಸಿದ್ದಾರೆ ಈ ಶಾಲೆಯಲ್ಲಿ ! ಬನಶಂಕರಿಯ ಕದಿರೇನಹಳ್ಳಿ (ಬೆಂಗಳೂರುದಕ್ಷಿಣ ವಲಯ – 1 )ಯ ಸ.ಹಿ. ಪ್ರಾ.ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಮುನಿಚಂದ್ರ ರವರು ಶಾಲೆಗಾಗಿ 20 ಲಕ್ಷ ಬೆಲೆಯ ನಿವೇಶನ ನೀಡಿದ್ದಲ್ಲದೆ, ದಾನಿಗಳ ಸಹಕಾರ ಪಡೆದು ಭವ್ಯ ಕಟ್ಟಡ ನಿರ್ಮಿಸಿದ್ದಾರೆ. ರಾಜ್ಯ ಸರ್ಕಾರದ ಸಚಿವಾಲಯದಲ್ಲಿ ಸೇವೆಸಲ್ಲಿಸುತ್ತಿರುವ ಮುನಿಚಂದ್ರರವರು ಶಾಲೆಯ ಎಲ್ಲ ಆಗು ಹೋಗುಗಳಲ್ಲಿ ಉತ್ಸಾಹದ ಪಾತ್ರ ವಹಿಸಿದ್ದಾರೆ. ಶಾಲಾ ಶಿಕ್ಷಕಿಯರಾದ ಗಾಯತ್ರಿ ಪಟ್ಟಾರ್, ವಿದ್ಯಾಧರೆ, ಸುಮಿತ್ರ ಮುಂತಾದವರ ಸಹಕಾರದಲ್ಲಿ ಸುಮಾರು 400 ಮಕ್ಕಳು ಪ್ರಾಥಮಿಕ ಶಿಕ್ಷಣ ಪಡೆಯುತ್ತಿದ್ದಾರೆ.

ಮುನಿಚಂದ್ರರವರಿಗೆ ಅಭಿನಂದನೆಗಳು. ಶಾಲೆಯನ್ನು ನಿರ್ಮಿಸಿದಾಗ ಮಕ್ಕಳಿಗೆ ಒದಗ ಬಹುದಾದ ಗಂಡಾಂತರಬಗ್ಗೆ ಚಿಂತಿಸಿ ಇಡೀ ಶಾಲೆಗೆ ಕಬ್ಬಿಣದ ಜಾಲರಿಯನ್ನು ತೊಡಿಸುವ ವ್ಯವಸ್ಥೆ ಮಾಡಿದರು. ಈ ಎಚ್ಚರವನ್ನು ಎಲ್ಲಶಾಲೆಗಳು ವಹಿಸಿದ್ದಲ್ಲಿ ಇತ್ತೀಚೆಗೆಶಾಲೆಯ ಮಹಡಿಯಿಂದ ಬಿದ್ದು ಪ್ರಾಣವನ್ನಪ್ಪಿದ ಮಲ್ಲೇಶ್ವರಿ ಯು.ಕೆ.ಜಿ. ಮಗು ಜೋಷಿಯಾಸಿಂಗ್‌ಳ ಮರಣ ಸಂಭವಿಸುತ್ತಿರಲಿಲ್ಲ ಅಲ್ಲವೆ ? ಶಾಲಾ ಕಟ್ಟಡ ನಿರ್ಮಾಣಕ್ಕೆ ವಹಿಸಬೇಕಾದ ಮುಂಜಾಗ್ರತೆಗೆ ಈ ಶಾಲೆ ಮಾದರಿಯಾಗಿದೆ.

–ಟಿ.ಶ್ರೀನಿವಾಸ ಮೂರ್ತಿ
ಮು.ಶಿ.



**ಪ್ರಧಾನ ಸಂಪಾದಕರು**

**ಜಿ.ಕುಮಾರ ನಾಯಕ,** ಆಯುಕ್ತರು, ಸಾ.ಶಿ.ಇ.

**ಕಾರ್ಯನಿರ್ವಾಹಕ ಸಂಪಾದಕರು**

**ಎಲ್. ಕೆ. ಅತೀಕ್,** ರಾಜ್ಯಯೋಜನಾ ನಿರ್ದೇಶಕರು, ಸ.ಶಿ.ಅ.

**ಎ.ಕೆ.ಮೋನಪ್ಪ,** ಅಪರ ಆಯುಕ್ತರು, ಧಾರವಾಡ.

**ಜಿ.ಎಲ್.ಚಂದ್ರಶೇಖರಯ್ಯ,** ಅಪರ ಆಯುಕ್ತರು, ಗುಲ್ಬರ್ಗಾ.

**ಸದಸ್ಯರು**

**ಡಿ.ಎಸ್.ರಾಜಣ್ಣ,** ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾಮಂಡಳಿ

**ಟಿ. ಎಂ. ಕುಮಾರ್,** ನಿರ್ದೇಶಕರು ಪ್ರಾಥಮಿಕ ಶಿಕ್ಷಣ

**ಚಿದ್ರೆ ಶಂಕರಯ್ಯಸ್ವಾಮಿ,** ನಿರ್ದೇಶಕರು, ಪ್ರೌಢಶಿಕ್ಷಣ

**ಮೀರ್ ಒಬೇದುಲ್ಲಾ,** ನಿರ್ದೇಶಕರು, ಈಶಾನ್ಯವಲಯ

**ಹಫೀಜುಲ್ಲಾ ಷರೀಫ್,** ನಿರ್ದೇಶಕರು, ಅಪರ ಆಯುಕ್ತರ ಕಚೇರಿ ಧಾರವಾಡ

**ಉಷಾದೇವಿ,** ನಿರ್ದೇಶಕರು, ಇತರೆ ಪರೀಕ್ಷೆಗಳು

**ಈಶ್ವರಭಟ್,** ನಿರ್ದೇಶಕರು, ಸ.ಶಿ.ಅ.

**ಎಸ್.ನಜಾಫುಲ್ಲಾ ಬೇಗ್,** ನಿರ್ದೇಶಕರು, ಡಿ.ಎಸ್.ಇ.ಆರ್.ಟಿ.

**ಎ.ಎ.ಕುಟಿನೋ,** ನಿರ್ದೇಶಕರು, ಅಲ್ಪ ಸಂಖ್ಯಾತ ಭಾಷೆಗಳು.

**ಬಿ. ನಂಜುಂಡೇಶ್ವರ,** ಸಹನಿರ್ದೇಶಕರು, ಆಡಳಿತ, ಸಾ.ಶಿ.ಇ.

**ಎನ್. ವಿ. ಸುಬ್ಬಣ್ಣ,** ಮುಖ್ಯಲೆಕ್ಕಾಧಿಕಾರಿ, ಸ.ಶಿ.ಅ.

**ನಿತ್ಯಾನಂದಾರಾಧ್ಯ,** ಸ.ಕಾ.ಅ., ಸ.ಶಿ.ಅ.

**ಅಧ್ಯಕ್ಷರು,** ಕ.ರಾ.ಪ್ರಾ.ಶಾ.ಶಿ. ಸಂಘ

**ಅಧ್ಯಕ್ಷರು,** ಕ.ರಾ.ಪ್ರೌ.ಶಾ.ಸ.ಶಿ. ಸಂಘ

**ಅಧ್ಯಕ್ಷರು,** ಕ.ರಾ.ಮಾ.ಶಿ.ಸಂಘ

**ಅಧ್ಯಕ್ಷರು,** ಕ.ರಾ.ಪ್ರೌ.ಶಾ.ಮು.: ಮ.ಪೂ.ಕಾ.ಪ್ರಾಂ. ಸಂಘ

**ಸಲಹಾ ಸಮಿತಿ**

**ಡಾ॥ ಎಸ್. ಶ್ರೀಕಂಠಸ್ವಾಮಿ,** ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು.

**ಡಾ॥ ನಿರಂಜನಾರಾಧ್ಯ,** ಸಂಶೋಧನಾಧಿಕಾರಿಗಳು, ಎನ್.ಎಲ್.ಎಸ್.ಐ.ಯು.,ಬೆಂಗಳೂರು

**ಪ್ರೊ॥ ಗಣೇಶ್‌ಭಟ್,** ಎಂ.ಇ.ಎಸ್. ಮಹಾವಿದ್ಯಾಲಯ, ಬೆಂಗಳೂರು.

**ಡಾ॥ ಸಿ. ಜಿ. ವೆಂಕಟೇಶ್‌ಮೂರ್ತಿ,** ಆರ್.ಐ.ಇ.,ಮೈಸೂರು

**ಪ್ರೊ॥ ಎ.ವಿ. ಗೋವಿಂದರಾವ್,** (ನಿವೃತ್ತ ಪ್ರಾಂಶುಪಾಲರು), ಮೈಸೂರು.

**ಹೆಚ್. ಕುಮಾರಸ್ವಾಮಿ,** ಡಯಟ್, ಮಂಗಳೂರು.

**ಸಹಸಂಪಾದಕರು**

**ಕೆ.ಜಿ. ಕಲಾವತಿ**

**ಕಲಾವಿದ : ಜಿ.ಕೆ. ಶಿವಣ್ಣ**

**ತಾಂತ್ರಿಕ ಬಳಗ : ಸಿ. ಬೋರಯ್ಯ, ಸರಸ್ವತಿ**

ಆತ್ಮೀಯ ಶಿಕ್ಷಕರೆ,

ಇದು ಶಿಕ್ಷಣ ವಾರ್ತೆಯಲ್ಲಿ ನನ್ನ ಮೊದಲಮಾತು. ಶಾಲೆಗಳು ಇಡೀ ದೇಶದ ಅಭ್ಯುದಯದ ಸಸಿಗಳ ಮಡಿ. ಇಲ್ಲಿ ನಾವು ಏನನ್ನು ಬಿತ್ತಿರುತ್ತೇವೋ ಅದನ್ನೇ 'ನಾಟಿ' ಮಾಡಲು ವಿತರಿಸುತ್ತೇವೆ. ಇಡೀ ದೇಶದಲ್ಲಿ ನಾವು ಕೊಟ್ಟ ಗಿಡಗಳೇ ಫಲ ನೀಡುವ ವೃಕ್ಷಗಳಾಗುತ್ತವೆ. ಫಲ ಹುಳಿಯಾದರೆ, ಕಹಿಯಾದರೆ, ನಾವೇ ಹೊಣೆಗಾರರೆಂದು ಬೇರೆ ಹೇಳಬೇಕಿಲ್ಲ. ಇಂದು ದೇಶದಲ್ಲಿ ತುಂಬಿರುವ ಭ್ರಷ್ಟಾಚಾರ, ಲಂಚಪ್ರಕರಣಗಳು, ವಿಧ್ವಂಸಕ ಕೃತ್ಯಗಳು, ದರೋಡೆ, ಡಕಾಯಿತಿ, ಲೈಂಗಿಕ ಹಗರಣಗಳು, ಅಪ್ರಾಮಾಣಿಕತೆ, ಅಸಭ್ಯ ನಡವಳಿಕೆಗಳಿಗೆ ಸಾರ್ವಜನಿಕರು ಮತ್ತು ಚಿಂತಕರು ಶಿಕ್ಷಣ ವ್ಯವಸ್ಥೆಯತ್ತ ಬೆರಳುಮಾಡಿ ತೋರಿಸುತ್ತಿದ್ದಾರೆ ಇವುಗಳಿಗೆ ನಮ್ಮ ಶಿಕ್ಷಕರೂ ಹೊಣೆಯನ್ನು ಹೊರಬೇಕಾಗುತ್ತದೆ. ಬರೀ ಬೋಧನೆಯಷ್ಟೇ ಅಲ್ಲ, ವಿದ್ಯಾರ್ಥಿಗಳಿಗೆ 'ರೋಲ್ ಮಾಡೆಲ್' ಆಗಿ ಶಿಕ್ಷಕ ತನ್ನ ಜೀವನ ಶೈಲಿಯನ್ನು ಬದಲಿಸಿಕೊಳ್ಳಬೇಕಾಗುತ್ತದೆ. ಸರಳ ನಡೆನುಡಿ, ಉಡುಪು, ಬೋಧನೆಯಲ್ಲಿ ಪ್ರಾವೀಣ್ಯತೆ, ವಿದ್ಯಾರ್ಥಿಗಳಿಂದ ಯಾವ ಪ್ರತಿಫಲವನ್ನೂ ಅಪೇಕ್ಷಿಸದ ನಿರಪೇಕ್ಷಾ ಮನೋಭಾವ ಇವೆಲ್ಲ ಮಕ್ಕಳ ಮೇಲೆ ಬೀರುವ ಪ್ರಭಾವ ನಮ್ಮ ಪಠ್ಯಪುಸ್ತಕಗಳನ್ನೂ ಮೀರಿದ್ದು. ಶಿಕ್ಷಕರು ಮಾಡುವ ಕಳ್ಳತನ, ಸುಳ್ಳು, ಭ್ರಷ್ಟಾಚಾರ, ಲಂಚ–ಇವೆಲ್ಲ ಮೊದಲು ಬೆಳಕಿಗೆ ಬರುವುದೇ ಮಕ್ಕಳಿಂದ ! ಮಕ್ಕಳು ಸಹಸ್ರಾಕ್ಷರಾಗಿ ನಮ್ಮನ್ನು ವೀಕ್ಷಿಸುತ್ತಿರುತ್ತಾರೆ. ಕುತೂಹಲ ಬುದ್ಧಿ ಅವರಿಗೆ ಸತ್ಯದರ್ಶನ ಮಾಡಿಸುತ್ತದೆ. ತಾವು ನಂಬಿದ ಶಿಕ್ಷಕರು ತಮ್ಮ ಕಲ್ಪನೆಯಂತಿಲ್ಲ ಎಂದು ಮಕ್ಕಳಿಗೆ ತಿಳಿದಾಗ ಅವರಿಗಾಗುವ ನಿರಾಸೆ ಅಸದಳ. ಅಷ್ಟೇ ಅಲ್ಲ, ಅವರನ್ನೂ ತಪ್ಪು ದಾರಿಗೆ ಪ್ರಚೋದಿಸುತ್ತದೆ. ನಮ್ಮ ಶಿಕ್ಷಕರು ಆದರ್ಶವ್ಯಕ್ತಿಗಳನ್ನು ರೂಪಿಸುವ ಸಾಮರ್ಥ್ಯವುಳ್ಳವರಾಗಬೇಕೇ ವಿನಹ ಸಮಾಜಕಂಟಕರನ್ನು ರೂಪಿಸುವವರಾಗಬಾರದು. ಸಮಾಜದ ಓರೆ ಕೋರೆಗಳ ಬಗ್ಗೆ ಮಕ್ಕಳಲ್ಲಿ ಅಸಹ್ಯ ಮೂಡಿಸಬೇಕು. ಆರೋಗ್ಯವಂತ ಸಮಾಜ ನಿರ್ಮಾಣ ಕಾರ್ಯದಲ್ಲಿ ಶಿಕ್ಷಕರದು ಬಹುದೊಡ್ಡ ಪಾತ್ರ. ಈ ಜವಾಬ್ದಾರಿ ಶೈಕ್ಷಣಿಕ ಬೋಧನೆಯಷ್ಟೇ ಗುರುತರವಾಗಿದೆ.

ಈ ನಿಟ್ಟಿನಲ್ಲಿ ನಮ್ಮ ಅಧಿಕಾರಿಗಳ ಪಾತ್ರವೂ ಇದೆ. ಅಧಿಕಾರಿಗಳು ಸ್ವತಃ ಪ್ರಾಮಾಣಿಕರಾಗಿರಬೇಕು. ಭ್ರಷ್ಟಾಚಾರ ನಿರ್ಮೂಲನದಲ್ಲಿ ನೆರೆರಾಜ್ಯಗಳಾದ ಚೀನಾ, ಜಪಾನ್, ರಷ್ಯಾ ಮುಂತಾದ ದೇಶಗಳ ಸಾಧನೆ ನಮಗೆ ಅಸಾಧ್ಯವೇನಲ್ಲ. ಬಾಹ್ಯವಾಗಿ ಉಗ್ರಗಾಮಿಗಳು, ವಿಧ್ವಂಸಕರು, ಆಂತರಿಕವಾಗಿ ಭ್ರಷ್ಟಾಚಾರ, ಲಂಚ, ಇತ್ಯಾದಿಗಳು ಇಡೀ ದೇಶದ ಸುಭದ್ರತೆಯನ್ನು ಅಲುಗಾಡಿಸುತ್ತಿದೆ. ಸಾರ್ವಜನಿಕ ಕ್ಷೇತ್ರದ ಎಲ್ಲ ಇಲಾಖೆಗಳ ಪಾವಿತ್ರ್ಯ ಶಿಕ್ಷಣ ಇಲಾಖೆಯನ್ನು ಅವಲಂಬಿಸಿದೆ. ಅತ್ಯಂತ ಕೆಳಗಿನ ಹಂತವಾದ ಶಾಲೆಗಳಿಂದ ಹಿಡಿದು ಅತ್ಯುನ್ನತ ಅಧಿಕಾರಿಗಳವರೆಗೆ ಈ ಪಾವಿತ್ರ್ಯ ಉಳಿಯಲು ಎಲ್ಲರೂ ಮನಸ್ಸು ಮಾಡಬೇಕು. ಉತ್ತಮ ಉದಾಹರಣೆಗಳಿಂದ ಪ್ರೇರಣೆ ಪಡೆಯಬೇಕು. ಇಂತಹ ರೋಲ್‌ಮಾಡೆಲ್‌ಗಳು ನಮಗೆ ಎಲ್ಲೆಡೆ ಸಿಗುತ್ತಾರೆ. ಇದೇ ಶಿಕ್ಷಣವಾರ್ತೆಯಲ್ಲಿ ಪ್ರಕಟವಾದ ಹಿಮಾಚಲಮ್ಮ ಒಬ್ಬ ಸಹಾಯಕಿ ಆದರೂ, ತನ್ನ ದಾನಗುಣದಿಂದ, ಸರಳತೆಯಿಂದ, ಸೌಜನ್ಯಶೀಲ ವ್ಯಕ್ತಿತ್ವದಿಂದ. ನಮ್ಮ ಮುಂದೆ ಆದರ್ಶಳಾಗಿ ನಿಲ್ಲುತ್ತಾಳೆ, ಎಲೆಮರೆಯ ಕಾಯಿಯಂತಿರುವ ಎಷ್ಟೋ ಶಿಕ್ಷಕರು ಸಮಾಜ ಸಲ್ಲಿಸುವ ಗೌರವಕ್ಕೆ ನಿಜಕ್ಕೂ ಅರ್ಹರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಷ್ಟೇ ಪ್ರಾಮಾಣಿಕರಾದ ಅಧಿಕಾರಿಗಳೂ ನಮ್ಮೊಂದಿಗೆ ಇದ್ದಾರೆ ಎಂಬುದೇ ನಮ್ಮ ಹೆಮ್ಮೆ. ಈ ಎಲ್ಲ ವ್ಯಕ್ತಿಗಳ ಪ್ರಭಾವ ಉಳಿದವರಿಗೆ ಪ್ರೇರಣೆಯಾಗಲಿ.

2007–08ರ ಶೈಕ್ಷಣಿಕ ವರ್ಷ ಎಲ್ಲರನ್ನೂ ಉತ್ತೇಜಿಸಲಿ, ಮಕ್ಕಳು–ಶಿಕ್ಷಕರು–ಅಧಿಕಾರಿಗಳು ಪ್ರಭಾವಲಯವಾಗಿ ಬೆಳಗಲಿ ಎಂದು ಆಶಿಸುತ್ತೇನೆ.

ಆಯುಕ್ತರು

# ಸ್ವಾಗತ : ಬೀಳ್ಕೊಡುಗೆ



ಪ್ರಾಥಮಿಕ ಶಿಕ್ಷಣ ರಾಷ್ಟ್ರದ ಭದ್ರ ಬುನಾದಿಯಾಗಿದ್ದು, ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರು ಹೆಚ್ಚಿನ ಗಮನ ಹರಿಸಬೇಕೆಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ನೂತನ ಆಯುಕ್ತ ಜಿ.ಕುಮಾರನಾಯಕ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಶಿಕ್ಷಣ ಇಲಾಖೆಯ ಆಯಕ್ತರಾಗಿ ಕಾರ್ಯನಿರ್ವಹಿಸಿ ವರ್ಗಾವಣೆಗೊಂಡ ಈ ಹಿಂದಿನ ಆಯುಕ್ತ ಎಂ.ಮದನ ಗೋಪಾಲ್‌ರವರು ಮಾತನಾಡುತ್ತಾ ಪ್ರಾಥಮಿಕ ಶಾಲಾ ಶಿಕ್ಷಕರ ಶಿಕ್ಷಕರ ಸಂಘವು ರಾಜ್ಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ಶಿಕ್ಷಕರ ಹಕ್ಕು ಬಾಧ್ಯತೆಗಳ ಜೊತೆಗೆ ಶಿಕ್ಷಣದ ಪ್ರಗತಿಗಾಗಿ ಶ್ರಮಿಸುತ್ತಿದೆ ಎಂದು ಹೇಳಿದರು. ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ನಿರ್ದೇಶಕ ಜಿ.ಚಂದ್ರಶೇಖರ್ ಹಾಗೂ ಸತ್ಯನಾರಾಯಣರೆಡ್ಡಿ, ಉಪನಿರ್ದೇಶಕರಾಗಿ ಬಡ್ತಿ ಪಡೆದ ಬೆಳ್ಳಶೆಟ್ಟಿರವರನ್ನು ಸನ್ಮಾನಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ರಾಜ್ಯ ಸಂಘದ ಅಧ್ಯಕ್ಷರಾದ ಬಸವರಾಜ ಗುರಿಕಾರ ರವರು ಇಲಾಖೆಯ ಅಧಿಕಾರಿಗಳ ಸಹಕರದೊಂದಿಗೆ ಗುಣಾತ್ಮಕ ಶಿಕ್ಷಣದ ಪ್ರಗತಿಗಾಗಿ ಪ್ರತಿ ತಾಲ್ಲೂಕು ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಹಲವಾರು ಕಾರ್ಯಕ್ರಮ ಏರ್ಪಡಿಸಿ ಯಶಸ್ವಿಗೊಳಿಸುತ್ತಾ ಬಂದಿದೆ ಎಂದರು. ಪ್ರಾರಂಭದಲ್ಲಿ ಸಂಘದ ಉಪಾಧ್ಯಕ್ಷ ಅರುಣ ಪ್ರತಾಪರೆಡ್ಡಿ ಎಲ್ಲರನ್ನು ಸ್ವಾಗತಿಸಿದರು. ಖಜಾಂಜಿ ಎಸ್.ಡಿ.ಗಂಗಣ್ಣ ರವರು ಕಾರ್ಯಕ್ರಮವನ್ನು ನಿರೂಪಿಸಿದರು. ರಾಜ್ಯ ಸಂಘದ ಸಹ ಕಾರ್ಯದರ್ಶಿ ಶ್ರೀಲಕ್ಷ್ಮಿ ಹಾಗೂ ಇನ್ನಿತರೆ ಪದಾಧಿಕಾರಿಗಳು, ಜಿಲ್ಲಾ ಸಂಘದ ಅಧ್ಯಕ್ಷರು ಮತ್ತು ಸಮಾರಂಭದಲ್ಲಿ ಭಾಗವಹಿಸಿದ್ದರು.

**ಬಸವರಾಜ ಗುರಿಕಾರ**
ಅಧ್ಯಕ್ಷರು.

---

ಸಾರ್ವಜನಿಕ ಶಿಕ್ಷಣ ಇಲಾಖೆ **ಆಯುಕ್ತರ ಕಚೇರಿಯ ಲಿಪಿಕ ನೌಕರರ ಸಂಘ ಹಾಗೂ ಅಧಿಕಾರಿಗಳ ಸಂಘ**ಗಳ ವತಿಯಿಂದ ಆಯುಕ್ತರಾಗಿ ಸೇವೆಸಲ್ಲಿಸಿ ವರ್ಗಾವಣೆಯಾದ ಮಾನ್ಯ **ಎಂ.ಮದನಗೋಪಾಲ್,** ಐ.ಎ.ಎಸ್. ಹಾಗೂ ಹೊಸದಾಗಿ ಆಯುಕ್ತರಾಗಿ ಅಧಿಕಾರಿವಹಿಸಿಕೊಂಡ ಮಾನ್ಯ **ಜಿ.ಕುಮಾರನಾಯಕ** ರವರಿಗೆ ಬೀಳ್ಕೊಡುಗೆ ಹಾಗೂ ಸ್ವಾಗತ ಸಮಾರಂಭವನ್ನು ದಿನಾಂಕ:4–8–2007 ರಂದು ಸರ್ವಶಿಕ್ಷಣ ಅಭಿಯಾನ ಕೇಂದ್ರ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯ ಯೋಜನಾ ನಿರ್ದೇಶಕರಾದ ಎಲ್.ಕೆ.ಅತೀಕ್‌ರವರು ವಹಿಸಿಕೊಂಡಿದ್ದರು.

ಇದೇ ಜೂನ್ 30 ನಿವೃತ್ತರಾದ ಶ್ರೀ ಜಿ.ಚಂದ್ರಶೇಖರ್, ಪ್ರಾಥಮಿಕ ಶಿಕ್ಷಣ ನಿರ್ದೇಶಕರು, ಶ್ರೀ ಸತ್ಯನಾರಾಯಣರೆಡ್ಡಿ, ನಿರ್ದೇಶಕರು ಪಠ್ಯಪುಸ್ತಕ, ಶ್ರೀ ಎಂ. ಚಂದ್ರಶೇಖರಯ್ಯ ಇವರುಗಳಲ್ಲದೆ, ಇಲಾಖೆಯ ಎಲ್ಲ ನಿರ್ದೇಶಕರುಗಳು ಭಾಗವಹಿಸಿದ್ದರು. ಶ್ರೀ ಕೆ.ಗಂಗಪ್ಪಗೌಡ, ಸಹನಿರ್ದೇಶಕರು, ಬೆಂಗಳೂರು ವಿಭಾಗ ಇವರು ಕಾರ್ಯಕ್ರಮ ನಿರೂಪಿಸಿದರು.

ಶ್ರೀ ಮದನ್‌ಗೋಪಾಲ್‌ರವರು ಇಲಾಖೆಯಲ್ಲಿ ಸಲ್ಲಿಸಿದ ಅವಧಿಯಲ್ಲಿನ ಸಾಧನೆಯ ವಿವರಗಳನ್ನು ಅಧಿಕಾರಿಗಳು ನೀಡಿದರು. ಶ್ರೀ ಮದನ್‌ಗೋಪಾಲ್‌ರವರು ಮಾತನಾಡಿ, ಗ್ರಾಮಾಂತರ ಪ್ರದೇಶಗಳ ಶಿಕ್ಷಕರಿಗೆ ತಾವೆಂದೂ ನೆರವು ನೀಡಲು ಹಿಂದೆಗೆಯಲಿಲ್ಲವೆಂದೂ, ಶೇ.95 ಭಾಗ ಉತ್ತಮ ಶಿಕ್ಷಕರಿದ್ದು, ಅವರ ಉತ್ತಮ ಸೇವೆಯನ್ನು ತಾವು ಸ್ಮರಿಸುವುದಾಗಿ ತಿಳಿಸಿದರು. ಕಾರ್ಯಸಾಫಲ್ಯಕ್ಕಾಗಿ ಎಂದೂ ಆಶಾವಾದಿಗಳಾಗಿರಬೇಕೆಂದೂ, ಅವಕಾಶ ಸಿಕ್ಕಿದಾಗ ಉತ್ತಮ ಕೆಲಸ ಮಾಡಿ ಎಂದೂ ಅಧಿಕಾರಿಗಳಿಗೆ ಕರೆ ನೀಡಿದರು.

ಶ್ರೀ ಜಿ.ಕುಮಾರ ನಾಯಕ, ಐ.ಎ.ಎಸ್. ನೂತನ ಆಯುಕ್ತರು ಮಾತನಾಡುತ್ತಾ ಸಮಾಜ, ಸರ್ಕಾರ ನಮ್ಮಿಂದ ಬಹಳ ನಿರೀಕ್ಷೆ ಮಾಡುತ್ತದೆ. ಈ ನಿರೀಕ್ಷೆಗೆ ಸ್ಪಂದಿಸಿ ಕರ್ತವ್ಯ ನಿರ್ವಹಿಸುವುದು ಅಧಿಕಾರಿಗಳ ಆದ್ಯತೆಯಾಗಬೇಕು ಎಂದು ತಿಳಿಸಿದರು. ಸಭೆಯ ಅಧ್ಯಕ್ಷತೆವಹಿಸಿದ್ದ ಶ್ರೀ ಎಲ್.ಕೆ.ಅತೀಕ್‌ರವರು ಮದನ್‌ಗೋಪಾಲ್‌ರವರನ್ನು ಸಭೆಯ ಪರವಾಗಿ ಗೌರವಿಸಿದರು.

– ಸಂ



## ಯೋಗಾಸನಗಳು

ಸಿ.ರಾಮಸ್ವಾಮಿ, ಎಂ.ಎ.ಬಿ.ಪಿ.ಎಡ್. ಯೋಗನಿರ್ದೇಶಕರು
ಶ್ರೀ ವಾಣಿಬಾಲಕಿಯರ ಪ್ರೌಢಶಾಲೆ, ರಾಜಾಜಿನಗರ, ಬೆಂಗಳೂರು–10
ಮೊ: 9448245699

**1) ಸುಪ್ತ ವೀರಾಸನ :**




**ಸ್ಥಿತಿ :** ಬೆನ್ನು ನೇರ ಮಾಡಿ ಕಾಲುಗಳನ್ನು ಮುಂದೆ ಚಾಚಿ ಕೂರಬೇಕು

1) ಬಲಗಾಲ ಮಂಡಿ ಮಡಿಸಿ ಬಲಪಕ್ಕಕ್ಕೆ ಇಡಬೇಕು. 2) ಎಡಗಾಲ ಮಂಡಿ ಮಡಿಸಿ ಮುಂಗಾಲನ್ನು ಎಡಪಕ್ಕಕ್ಕೆ ಇಡಬೇಕು. 3) ನಿಧಾನವಾಗಿ ಬೆನ್ನನ್ನು ನೆಲಕ್ಕೆ ಹಾಕಿ ಮಲಗಬೇಕು. ಕೈಗಳು ಪಕ್ಕದಲ್ಲಿರಬೇಕು. 4) ಎರಡೂ ತೋಳುಗಳನ್ನು ನೇರವಾಗಿ ಚಾಚಿ ಮೇಲೆತ್ತಿ ತಲೆಯ ಕಡೆ ನೆಲಕ್ಕಿಡಬೇಕು. ಹಸ್ತಗಳು ಮೇಲ್ಮುಖವಾಗಿರಬೇಕು.

**ಪರಿಣಾಮ :** ಪಾದ, ಮೀನಖಂಡ, ಮಂಡಿ, ತೊಡೆ ಹಾಗೂ ಸೊಂಟದಲ್ಲಿನ ನೋವನ್ನು ನಿವಾರಿಸಿ ಹೊಸ ಶಕ್ತಿಯನ್ನು ನೀಡುತ್ತದೆ.

**2) ಸೇತುಬಂಧಾಸನ :**




1) ಕಾಲುಗಳನ್ನು ಜೋಡಿಸಿ ಬೆನ್ನನ್ನು ನೆಲಕ್ಕೆ ಹಾಕಿ ಮಲಗಬೇಕು, ಕೈಗಳೆರಡು ಅಕ್ಕಪಕ್ಕದಲ್ಲಿರಬೇಕು. 2) ಎರಡೂ ಕಾಲುಗಳ ಮಂಡಿ ಯನ್ನು ಮೇಲ್ಮುಖವಾಗಿ ಮಡಿಸಿ ಹಿಮ್ಮಡಿಯು ತೊಡೆಗೆ ತಾಗುವಂತಿರಬೇಕು. 3) ಎರಡೂ ಕೈ ಬೆರಳುಗಳಿಂದ ಕ್ರಮವಾಗಿ ಎರಡೂ ಕಾಲುಗಳ ಹಿಮ್ಮಡಿಯ ಮೇಲ್ಭಾಗವನ್ನು ಹಿಡಿಯಬೇಕು. 4) ಕೈ ಬೆರಳಿನ ಹಿಡಿತವನ್ನು ಬಿಗಿಗೊಳಿಸಿ ಸೊಂಟವನ್ನು ಮೇಲೆತ್ತಬೇಕು. ನಂತರ ಕ್ರಮವಾಗಿ ಹಿಂದಿರುಗಿ ಸ್ಥಿತಿಗೆ ಬರಬೇಕು.

**ಪರಿಣಾಮ** : ಬೆನ್ನು ಹಾಗೂ ಸೊಂಟದ, ನೋವಿನ ಪರಿಹಾರ ಮಾಡುತ್ತದೆ.

**3) ತೋಲಾಸನ** : ತಕ್ಕಡಿಯಂತೆ ತೂಗುವ ಆಕಾರ

1) ಬಲಗಾಲ ಮಂಡಿಯನ್ನು ಮಡಿಸಿ ಬಲಪಾದವನ್ನು ಎಡತೊಡೆಯ ಮೇಲಿರಿಸಬೇಕು. 2) ಎಡಗಾಲ ಮಂಡಿಯನ್ನು ಮಡಿಸಿ ಎಡಪಾದವನ್ನು ಬಲತೊಡೆಯ ಮೇಲಿರಿಸಬೇಕು. 3)ಎರಡೂ ಹಸ್ತಗಳನ್ನು ಅಕ್ಕಪಕ್ಕದಲ್ಲಿ ನೆಲಕ್ಕೆ ಒತ್ತಿ ಇಡಬೇಕು. 4)ಪೂರಕ ಮಾಡಿ ದೇಹದ ಭಾರವನ್ನು ಮೇಲೆತ್ತಬೇಕು. ನಂತರ ಕ್ರಮವಾಗಿ ಹಿಂದಿರುಗಿ ಸ್ಥಿತಿಗೆ ಬರಬೇಕು.



**ಪರಿಣಾಮ :** ಬೆರಳು, ಹಸ್ತ, ಮೊಳಕೈ ಭುಜಗಳ ನೋವನ್ನು ನಿವಾರಿಸಿ ಶಕ್ತಿಯನ್ನು ಒದಗಿಸುತ್ತದೆ. ಮಂಡಿ ಪಾದ ತೊಡೆಗಳಲ್ಲಿ ರಕ್ತ ಸಂಚಾರವಾಗಿ ಆರೋಗ್ಯವನ್ನು ಸುಸ್ಥಿತಿಯಲ್ಲಿಡುತ್ತದೆ. ಕಿಬ್ಬೊಟ್ಟೆಗೆ ಹೆಚ್ಚು ಕ್ರಿಯೆಗಳನ್ನು ನೀಡಿಬೊಜ್ಜನ್ನು ಕರಗಿಸುತ್ತದೆ.



**ಮತ್ಸ್ಯಾಸನ :** 1. ಎಡಗಾಲ ಮಂಡಿಯನ್ನು ಮಡಿಸಿ ಎಡ ಪಾದವನ್ನು ಬಲತೊಡೆಯ ಮೇಲಿಡಬೇಕು. 2. ಬಲಗಾಲ ಮಂಡಿಯನ್ನು ಮಡಿಸಿ ಬಲ ಪಾದವನ್ನು ಎಡಗಾಲ ತೊಡೆಯ ಮೇಲಿಡಬೇಕು. 3. ನಿಧಾನವಾಗಿ ಮೊಳಕೈಗಳ ಸಹಾಯದಿಂದ ಬೆನ್ನನ್ನು ನೆಲಕ್ಕೆ ಒರಗಿಸಿ ಮಲಗಬೇಕು. 4. ಎರಡೂ ಕೈಗಳ ಹಸ್ತವನ್ನು ಭುಜಗಳ ಹಿಂದೆ ಇಟ್ಟು ಬೆನ್ನನ್ನು ಮೇಲಕ್ಕೆ ಬಾಗಿಸಿ ನಡುನೆತ್ತಿಯನ್ನು ನೆಲಕ್ಕಿಡಬೇಕು. 5. ಎರಡೂ ಕೈ ಬೆರಳುಗಳಿಂದ ಕ್ರಮವಾಗಿ ಎರಡು ಕಾಲುಗಳ ಹೆಬ್ಬೆರಳುಗಳನ್ನು ಹಿಡಿದು ಮೊಳಕೈಯನ್ನು ನೆಲಕ್ಕೆ ತಾಗಿಸಬೇಕು. ಸ್ವಲ್ಪ ಸಮಯ ನೆಲೆಸಿದ್ದು, ಕ್ರಮವಾಗಿ ಹಿಂದಿರುಗಿ ಸ್ಥಿತಿಗೆ ಬರಬೇಕು. (ವಿ.ಸೂ. ಹಿಂದಿನ ಸಂಚಿಕೆಗಳಲ್ಲಿ ತಿಳಿಸಿದಂತೆ ಪ್ರತಿಯೊಂದು ಎಣಿಕೆಯ ಪ್ರಾರಂಭದಲ್ಲಿ ಪೂರಕವನ್ನು ನಂತರ ರೇಚಕವನ್ನು ಅನುಸರಿಸಬೇಕು.)

**ಪರಿಣಾಮಗಳು :** ಕಾಲುಗಳಲ್ಲಿನ ಉಳುಕು, ಸೊಂಟದ ನೋವು, ಕುತ್ತಿಗೆ ನೋವಿನಿಂದ ಬಿಡುಗಡೆನೀಡಿ ಎದೆ ವಿಶಾಲವಾಗಿ ಹೃದಯದ ಬಡಿತ ಸಮ ಪ್ರಮಾಣದಲ್ಲಿ ನಡೆಯುವಂತೆ ಸಹಾಯ ಮಾಡುತ್ತದೆ.

**ಅಷ್ಟಾಂಗಯೋಗದ ಯಮದಲ್ಲಿರುವುವು ಅಹಿಂಸೆ, ಸತ್ಯ, ಅಸ್ತೇಯ ಅಪರಿಗ್ರಹ ಹಾಗೂ ಬ್ರಹ್ಮಚರ್ಯ ಸೂತ್ರಗಳು.**

## ಅಪರಿಗ್ರಹ

ಯಮದ ನಾಲ್ಕನೆಯ ಅಂಗ ಅಪರಿಗ್ರಹ. ಪರಿಗ್ರಹ ಎಂದರೆ ಸಂಗ್ರಹ ಮಾಡು. ಅಪರಿಗ್ರಹ ಎಂದರೆ ಬೇಡವಾದುದ್ದನ್ನು ಹೇಗೆ ತೆಗೆದು ಕೊಳ್ಳಬಾರದೋ ಹಾಗೆಯೇ ಅ ಸಮಯಕ್ಕೆ ಬೇಡವಾದ ವಸ್ತುಗಳನ್ನು ಸಂಗ್ರಹಿಸಬಾರದು ಎಂದರ್ಥ. ಸಾಮಾನ್ಯವಾಗಿ ಮಾನವನ ಜೀವನ ಯಾವಾಗಲೂ ಅನೇಕ ಆಸೆ, ತೊಂದರೆ, ನಿರಾಸೆ, ಚಂಚಲತೆ ಹಾಗು ಅಡಚಣೆಗಳಿಂದ ಕೂಡಿದ್ದು ಮುಂದಿನ ದಿನಗಳಿಗೆಂದು ವಸ್ತುಗಳನ್ನು ಸಂಗ್ರಹಿಸುವ ಮನೋಭಾವದಲ್ಲಿ ತೊಡಗಿರುತ್ತಾನೆ. ಪರರ ವಸ್ತುಗಳನ್ನು ತನ್ನದಾಗಿಸಿಕೊಳ್ಳಲು ಅವರಂತೆ ತನ್ನ ಸಾಮರ್ಥ್ಯವನ್ನು ಬಹುಬೇಗ ಬೆಳೆಸಿಕೊಳ್ಳಲು ಜೀವನದಲ್ಲಿ ತೃಪ್ತಿ ಇಲ್ಲದೆ ಅಸಮತೋಲನ ಹೊಂದುತ್ತಾನೆ.

ಆದರೆ ದೇವರು ಕಾಲಕಾಲಕ್ಕೆ ತನಗೆ ಬೇಕಾದ ಅಗತ್ಯಗಳನ್ನು ಒದಗಿಸುತ್ತಾನೆ ಎಂಬ ನಂಬಿಕೆಯಿಂದ ಯೋಗಿಯು ತನ್ನ ಜೀವನವನ್ನು ಸರಳಗೊಳಿಸುತ್ತಾನೆ. ಅಭಾವದ ಚಿಂತೆಯನ್ನು ದೂರವಿಡುವಂತೆ ಮನಸ್ಸಿಗೆ ತರಬೇತಿ ನೀಡುತ್ತಾನೆ. ಇರುವುದರಲ್ಲೆ ತೃಪ್ತಿ ಪಡುತ್ತಾನೆ. ನಿಶ್ಚಿಂತೆಯಿಂದ ಜೀವನ ನಡೆಸುತ್ತಾನೆ.



# ಶಿಕ್ಷಕರಿಗೆ ವಿಟಮಿನ್ಸ್

**ಡಾ.ಎಸ್. ಶ್ರೀಕಂಠಸ್ವಾಮಿ**
ಪ್ರಾಧ್ಯಾಪಕರು. ಐ.ಎ.ಎಸ್.ಇ.,
ರಾಷ್ಟ್ರೀಯ ವಿದ್ಯಾಲಯ ಅಧ್ಯಾಪಕರ ಕಾಲೇಜು
ಬೆಂಗಳೂರು – 11

**ಪ್ರಶ್ನೆ : ನಾನು ಕನ್ನಡ ಮತ್ತು ಇತಿಹಾಸ ಇವೆರಡನ್ನು ಬೋಧಿಸುವ ಅಧ್ಯಾಪಕ, ನನ್ನ ವಿದ್ಯಾರ್ಥಿಗಳು ನಾನು ಮಾಡುವ ಕನ್ನಡ ಪಾಠವನ್ನು ಮೆಚ್ಚುತ್ತಾರೆ ಆದರೆ ಇತಿಹಾಸ ಪಾಠವನ್ನಲ್ಲ, ಇದಕ್ಕೆ ಕಾರಣವೇನು? ಮತ್ತು ಇತಿಹಾಸ ಪಾಠವನ್ನುಇನ್ನೂ ಹೇಗೆ ಆಕರ್ಷಕವಾಗಿ ಮಾಡಬಹುದು** ?

ಶಂಕರಲಿಂಗಯ್ಯ, ತರಬೇತಿ ಶಿಕ್ಷಕ,
ಟಿ.ವಿ.ವಿ. ಶಿಕ್ಷಕ ಮಹಾವಿದ್ಯಾಲಯ, ಮಧುಗಿರಿ

ಉತ್ತರ : ಪ್ರತಿಯೊಂದು ವಿಷಯವು ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿರುತ್ತದೆ. ಹಾಗೆಯೇ ಶಿಕ್ಷಕರಲ್ಲಿಯೂ ಸಹ ಕೆಲವು ಬೋಧನಾ ವಿಷಯಗಳ ಬಗ್ಗೆ ಅಭಿರುಚಿ ಹೆಚ್ಚಿರುತ್ತದೆ. ಕನ್ನಡ ಪಾಠವನ್ನು ಮಾಡುವ ನಿಮ್ಮ ಬೋಧನಾ ವಿಧಾನ ಉತ್ತಮವಾಗಿರಬಹುದು. ಅಥವಾ ನೀವು ಬೋಧಿಸುವ ಕೆಲವು ಪಾಠಗಳು ವಿದ್ಯಾರ್ಥಿಗಳಿಗೆ ಆಸಕ್ತಿಯನ್ನು ಮೂಡಿಸಿರಬಹುದು. ಇದರ ಜೊತೆಗೆ ಕನ್ನಡ ಬೋಧನೆಯ ಬಗ್ಗೆ ನಿಮ್ಮಲ್ಲಿ ಹೆಚ್ಚಿನ ಸಾಮರ್ಥ್ಯ ಮತ್ತು ಆತ್ಮ ವಿಶ್ವಾಸವಿರಬಹುದು. ಇತಿಹಾಸದ ವಿಷಯವು, ಇತರ ವಿಜ್ಞಾನ ಮತ್ತು ಗಣಿತ ವಿಷಯಗಳಿಗೆ ಹೋಲಿಸಿದರೆ ಕೆಲವು ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಕೆರಳಿಸದೇ ಇರಬಹುದು. ಹಿಂದೆ ನಡೆದಿರುವ ವಿಷಯ/ಘಟನೆಗಳು ನಮ್ಮ ಮುಂದಿನ ಭವಿಷ್ಯಕ್ಕೆ ಹೇಗೆ ಸಹಾಯವಾಗಬಲ್ಲದು ಎಂಬ ಸಂದೇಹ ಮೂಡಬಹುದು. ಇತಿಹಾಸ ಅಧ್ಯಾಪಕರಿಂದ ಇನ್ನೂ ಹೆಚ್ಚಿನ ಮಾಹಿತಿಯನ್ನು ಹಾಗೂ ಮಾರ್ಗದರ್ಶನವನ್ನು ಪಡೆದು ಬೋಧನೆ ಮಾಡಿದರೆ ನಿಮ್ಮ ಪಾಠವನ್ನು ಮೆಚ್ಚುತ್ತಾರೆ. ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಹಾಗೂ ಅಭಿಪ್ರೇರಣೆಯನ್ನು ಹೆಚ್ಚಿಸಿ, ವಿಮರ್ಶಾತ್ಮಕ ಚಿಂತನೆಯ ಪ್ರಶ್ನೆಗಳನ್ನು ಪಾಠದಲ್ಲಿ ಬರುವ ಪ್ರಮುಖ ಸಂಗತಿಗಳ ಬಗ್ಗೆ ಕೇಳುತ್ತಾ ಬನ್ನಿ. ಇತಿಹಾಸದಲ್ಲಿ ಬರುವ ಕೆಲವು ಮುಖ್ಯ ಘಟನೆಗಳು, ಹೋರಾಟಗಳು, ಆಳ್ವಿಕೆಗಳು, ದಿಗ್ವಿಜಯಗಳು, ಸುಧಾರಣೆಗಳು, ಮಹಾತ್ಮರ ಬೋಧನೆಗಳು ಉತ್ತಮ ಜೀವನವನ್ನು ನಡೆಸಲು, ಮುಂದೆ ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳಲು ಸಹಾಯಕವಾಗುತ್ತವೆ.

**ಪ್ರಶ್ನೆ : ಇತ್ತೀಚೆಗೆ ಸರ್ಕಾರವು ಸೆಮಿಸ್ಟರ್ ಪದ್ಧತಿಯ ಬಗ್ಗೆ ಕೈಗೊಂಡಿರುವ ತೀರ್ಮಾನವು ಗುಣಾತ್ಮಕ ಬೋಧನೆ ಮಾಡಲು ಹೇಗೆ ಸಹಾಯವಾಗಬಲ್ಲದು? ತ್ರೈಮಾಸಿಕ ಪದ್ಧತಿಗಿಂತ ಹೇಗೆ ವಿಭಿನ್ನವಾಗಬಹುದು** ?

ಸಂಗಮೇಶ, ಪ್ರಾಥಮಿಕ ಶಿಕ್ಷಕ, ಬಳ್ಳಾರಿ ಜಿಲ್ಲೆ

ಉತ್ತರ: ಪ್ರಸ್ತುತ ಶೈಕ್ಷಣಿಕ ವರ್ಷದ ಹಿಂದೆ ಇದ್ದ ತ್ರೈಮಾಸಿಕ ಪದ್ಧತಿಯ ಕಲಿಕೆಯ ನಿರಂತರತೆಯನ್ನು ಹೆಚ್ಚಿಸುವಲ್ಲಿ ಸಾಕಷ್ಟು ಸಹಾಯಮಾಡಿದೆ. ಯಾವುದೇ ಪದ್ಧತಿಯನ್ನು ಅಳವಡಿಸಿದಾಗ ಅದರಲ್ಲಿ ಸಾಧಕ ಬಾಧಕಗಳೆರಡು ಇರುತ್ತವೆ. ಆ ಪದ್ಧತಿಯ ಅನಾನುಕೂಲತೆಗಳನ್ನು ತಿಳಿಯಬೇಕಾದರೆ ಸಾಕಷ್ಟು ಸಮಯ ಬೇಕು. ಹಾಗೂ ಈ ಪದ್ಧತಿಯ ಬಗ್ಗೆ ವಸ್ತು ನಿಷ್ಠವಾಗಿ ಮುಖ್ಯೋಪಾಧ್ಯಾಯರಿಂದ, ಅಧ್ಯಾಪಕರಿಂದ, ವಿದ್ಯಾರ್ಥಿಗಳಿಂದ, ಪೋಷಕರಿಂದ ಪಠ್ಯ ಹಾಗೂ ಪಠ್ಯೇತರ ವಿಷಯಗಳಿಗೆ ಸಂಬಂಧಿಸಿದಂತೆ ಸ್ಪಷ್ಟ ಅಭಿಪ್ರಾಯವನ್ನು ಪಡೆಯಬೇಕು. ಈ ರೀತಿಯ ಅಭಿಪ್ರಾಯ ಸಂಗ್ರಹಣೆ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಹಂತ ಎರಡಕ್ಕೂ ಸೇರಿರಬೇಕು. ಹಾಗೂ ಸರ್ಕಾರಿ ಶಾಲೆ, ಅನುದಾನ ಶಾಲೆ, ಅನುದಾನ ರಹಿತ ಶಾಲೆ ಇವುಗಳಿಂದಲೂ ಮಾಹಿತಿ ಸಂಗ್ರಹಿಸಿ, ವೈಜ್ಞಾನಿಕ ವಿಶ್ಲೇಷಣೆಯ ಆಧಾರದ ಮೇಲೆ ಬರುವ ಫಲಿತಾಂಶದಿಂದ ಸೂಕ್ತ ತೀರ್ಮಾನವನ್ನು ಕೈಗೊಳ್ಳಬೇಕು.

ಸರ್ಕಾರಕ್ಕೆ ಈ ಬಗ್ಗೆ ಸ್ಪಷ್ಟ ಮಾಹಿತಿ ಸಿಕ್ಕಿದೆ. ತ್ರೈಮಾಸಿಕ ಪದ್ಧತಿಯು ಉತ್ತಮ ಅಂಶಗಳನ್ನು ಹೊಂದಿದ್ದರೂ ಸಹ, ಅಧ್ಯಾಪಕರಿಗೆ ಬೋಧನೆಗಿಂತ ಹೆಚ್ಚು ಸಮಯ ಪರೀಕ್ಷೆಗಳನ್ನು ನಡೆಸಲು ಹಾಗೂ ವಿದ್ಯಾರ್ಥಿಗಳ ಪಠ್ಯ ಹಾಗೂ ಪಠ್ಯೇತರ ವಿಷಯಗಳಿಗೆ ಸಂಬಂಧಿಸಿದ ಉತ್ತರ ಪತ್ರಿಕೆಗಳು ಹಾಗೂ ಚಟುವಟಿಕೆಗಳ ಮಾಪನಕ್ರಿಯೆಗೆ ವ್ಯಯವಾಗುತ್ತಿತ್ತು ಎಂಬುದು ಹೆಚ್ಚಿನ ಅಭಿಪ್ರಾಯವಾಗಿತ್ತು.

ಪ್ರಸ್ತುತ ವರ್ಷದಿಂದ ಸೆಮಿಸ್ಟರ್ ಪದ್ಧತಿಯನ್ನು ಅಳವಡಿಸಿರುವುದರಿಂದ ಧಿಡೀರನೆ ಶೈಕ್ಷಣಿಕ ಗುಣಮಟ್ಟ ಬಹಳಷ್ಟು ಬದಲಾಗುತ್ತದೆ ಎಂದು ಹೇಳುವುದು ಕಷ್ಟ. ಕಾರಣ ಅದೇ ಪಠ್ಯಪುಸ್ತಕಗಳನ್ನು ಅದೇ ಅಧ್ಯಾಪಕರೆ ಹೆಚ್ಚು ಕಡಿಮೆ ಅದೇ ರೀತಿಯ ಬೌದ್ಧಿಕ ಸಾಮರ್ಥ್ಯ ಹೊಂದಿರುವ ವಿದ್ಯಾರ್ಥಿಗಳಿಗೆ, ಅದೇ ರೀತಿಯ ಶಾಲೆಯ ಮೂಲಭೂತ ಸೌಲಭ್ಯಗಳೊಂದಿಗೆ ಪಾಠಮಾಡುತ್ತಾರೆ.

ಆದರೆ, ಸೆಮಿಸ್ಟರ್ ಪದ್ಧತಿಯು ಹಿಂದಿನ ಪದ್ಧತಿಗಿಂತ ಅಧ್ಯಾಪಕರಿಗೆ ಬೋಧನೆಗೆ ಹೆಚ್ಚು ಅವಕಾಶ ಕಲ್ಪಿಸುವುದರಿಂದ ಹಾಗೂ ಮಾಪನ ಕ್ರಿಯೆಗೆ ಹೆಚ್ಚು ತೆಗೆದುಕೊಳ್ಳುತ್ತಿದ್ದ ಸಮಯವನ್ನು ಬೋಧನೆಯ ಯೋಜನೆ ಮತ್ತು ಸಿದ್ಧತೆಗೆ ಉಪಯೋಗಿಸಿಕೊಳ್ಳಲು ಸಾಧ್ಯತೆ ಇರುವುದರಿಂದ, ಅಧ್ಯಾಪಕರ ಕೆಲಸದ ಒತ್ತಡ ಕಡಿಮೆಯಾಗಿ ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡಬಹುದು.

ಈ ಬದಲಾವಣೆಗೆ ಎಲ್ಲರೂ ಧನಾತ್ಮಕವಾಗಿ ಸ್ಪಂದಿಸಿ ಈ ಸ್ಪರ್ಧಾತ್ಮಕ ಪ್ರಪಂಚದಲ್ಲಿ ವಿದ್ಯಾರ್ಥಿಗಳ ಸಾಮರ್ಥ್ಯ ದಕ್ಷತೆ ಮತ್ತು ಕೌಶಲಗಳನ್ನು ಹೆಚ್ಚಿಸಲು ಪಣತೊಡಬೇಕು. ಶೈಕ್ಷಣಿಕ ಆಯೋಗಗಳ ಶಿಫಾರಸ್ಸುಗಳು ಏನೇ ಇದ್ದರು ಅದನ್ನು ಈಡೇರಿಸುವವರು ಶಿಕ್ಷಕರು ಮಾತ್ರ.

**ಪ್ರಶ್ನೆ : ಹಿರಿಯ ಪ್ರಾಥಮಿಕ ಹಂತದಲ್ಲಿ 8ನೇ ತರಗತಿಯನ್ನು ಪ್ರಾರಂಭಿಸಲಾಗಿದೆ. ವಿಜ್ಞಾನಕ್ಕೆ ಸಂಬಂಧಿಸಿದಂತೆ ಪ್ರಯೋಗಾಲಯದ ಕೊರತೆ ಇದೆ. ಇದರಿಂದ ವಿಜ್ಞಾನ ಬೋಧನೆಯನ್ನು ಅಷ್ಟು ಪರಿಣಾಮಕಾರಿಯಾಗಿ ಮಾಡಲಾಗುತ್ತಿಲ್ಲ. ಇದಕ್ಕೆ ನಿಮ್ಮ ಸಲಹೆ ಏನು** ?

ನಿಂಗಪ್ಪ, ಶಿಕ್ಷಕ ಹಿ.ಪ್ರಾ. ಶಾ. ಚಿಂಚೊಳಿ ತಾಲ್ಲೂಕು

ಉತ್ತರ : 8ನೇ ತರಗತಿಯನ್ನು ಪ್ರಾರಂಭಿಸಿರುವ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸರ್ಕಾರ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಹಾಗೂ ಈ ದಿಕ್ಕಿನಲ್ಲಿ ಹಲವಾರು ಶಾಲೆಗಳಿಗೆ ಸೌಲಭ್ಯವನ್ನು ಕಲ್ಪಿಸಿದೆ.

ಸರ್ವಶಿಕ್ಷಣ ಅಭಿಯಾನವು 8ನೇ ತರಗತಿಯನ್ನು ಶಾಲೆಗಳಲ್ಲಿ ಪ್ರಾರಂಭಿಸಲಾದ ಆಯ್ದ 10 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿಜ್ಞಾನ ಕಲಿಕೆಗೆ ಸಹಾಯವಾಗುವಂತೆ ರೂ. 5.00 ಲಕ್ಷ ಹಣವನ್ನು ಬಿಡುಗಡೆ ಮಾಡಿದೆ. ಈ ಹಣದಿಂದ ಶಾಲೆಯವರು ವಿಜ್ಞಾನ ಬೋಧನೆಗೆ ಸಂಬಂಧಪಟ್ಟ ಚಾರ್ಟ್‌ಗಳನ್ನು, ಪಾರದರ್ಶಕ ಹಾಳೆಗಳನ್ನು, ವಿಜ್ಞಾನ ಪ್ರಯೋಗಾಲಯಕ್ಕೆ ಬೇಕಾದ ಉಪಕರಣಗಳನ್ನು, ಟೇಬಲ್ ಮತ್ತು ಉಪಕರಣಗಳನ್ನು ಇಡಲು ಬೇಕಾದ ಅಲ್ಮೇರಾಗಳನ್ನು ಖರೀದಿಸಲು ಅನುಮತಿ ನೀಡಿದೆ. ವಿಜ್ಞಾನದ ಅಧ್ಯಾಪಕರು ಈ ಯೋಜನೆಗೆ ಅಭಿಯಾನವನ್ನು ವಂದಿಸಲೇಬೇಕು. ಹಾಗೂ ಇದರ ಪ್ರಯೋಜನವು ವಿದ್ಯಾರ್ಥಿಗಳಿಗೆ ಲಭಿಸುವಂತೆ ಶ್ರದ್ಧೆಯಿಂದ ಪ್ರಯೋಗ ಮತ್ತು ಪಾಠಗಳನ್ನು ಮಾಡಿ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಚಿಂತನೆ ಮತ್ತು ಮನೋಭಾವನೆಯನ್ನು ಬೆಳೆಸಬೇಕು.

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ (1986) ತಿಳಿಸಿರುವಂತೆ ವಿಜ್ಞಾನದ ಅಧ್ಯಾಪಕರು ಶಾಲೆಯ ಸುತ್ತಮುತ್ತಲಿನ ಪರಿಸರದಲ್ಲಿ ಸಿಗುವ ವಸ್ತುಗಳನ್ನು ಉಪಯೋಗಿಸಿ ಕಡಿಮೆ ಖರ್ಚಿನ ಅಥವಾ ಖರ್ಚಿಲ್ಲದ (Low cost and no cost teaching materials) ಬೋಧನಾ ಸಾಮಗ್ರಿಗಳನ್ನೂ ತಯಾರಿಸಿ ವಿಜ್ಞಾನದ ಪರಿಕಲ್ಪನೆ, ನಿಯಮಗಳ ಮತ್ತು ತತ್ವಗಳನ್ನು ಮಕ್ಕಳಿಗೆ ಮನದಟ್ಟಾಗುವಂತೆ ಮಾಡಬೇಕು.

ವಿಜ್ಞಾನದ ಅಧ್ಯಾಪಕರುಗಳು, ವಿಜ್ಞಾನಕ್ಕೆ ಸಂಬಂಧಿಸಿದ ಮನಶ್ಚೇತನ ಕಾರ್ಯಕ್ರಮಗಳು, ಕಾರ್ಯಾಗಾರಗಳು, ವಿಚಾರಗೋಷ್ಠಿಗಳು ಮತ್ತು ಸಮ್ಮೇಳನದಲ್ಲಿ ಭಾಗವಹಿಸಿ ತಮ್ಮ ವೃತ್ತಿಕೌಶಲಗಳನ್ನು ಹೆಚ್ಚಿಸಿಕೊಳ್ಳಬೇಕು.



# ಮರವೇ ಶಿರದ ಮೇಲೆ ಒರಗಿದರೆ...

– ಡಾ॥ ವಿಜಯಾ ಜೋಷಿ
ಮಕ್ಕಳ ಮನಶ್ಶಾಸ್ತ್ರಜ್ಞೆ, ಸ್ಯಾನ್‌ಹೋಸೆ, ಕ್ಯಾಲಿಫೋರ್ನಿಯಾ.

**ಮಕ್ಕಳು ಮಾಡುವ ಕಳ್ಳತನ, ಓದಿನಲ್ಲಿ ನಿರಾಸಕ್ತಿ, ಸುಳ್ಳು ಹೇಳುವುದು, ಅವಿಧೇಯತನ, ಜತೆಯವರೊಡನೆ ಜಗಳ ಇವುಗಳ ಹಿಂದೆ ಪ್ರಬಲವಾದ ಕಾರಣ ಇದ್ದೇ ಇರುತ್ತದೆ. ಈ ಕಾರಣವನ್ನು ಪತ್ತೆ ಹಚ್ಚಿದಲ್ಲಿ ಚಿಕಿತ್ಸೆ ಸುಲಭ, ಶಿಕ್ಷಣ ಫಲಪ್ರದ ಇಂತಹ ಒಂದು ಘಟನೆಯನ್ನು ಕುರಿತು ಡಾ. ವಿಜಯಾ ಜೋಷಿ ಇಲ್ಲಿ ವಿವರನೀಡಿದ್ದಾರೆ.**

ಖೇಲ್ಸೆ 15 ವರ್ಷದ ಆಫ್ರಿಕನ್ ಅಮೆರಿಕನ್ ಹುಡುಗಿ. ಆರು ತಿಂಗಳ ಮಗುವಾಗಿದ್ದಾಗಲೇ ತಾಯಿ ಮಗುವನ್ನು ತ್ಯಜಿಸಿದ್ದಳು. ತಂದೆ ಡ್ರಗ್ ವ್ಯಸನಿಯಾಗಿದ್ದ ಪರಿಣಾಮವಾಗಿ ತೀರಿಕೊಂಡಿದ್ದ. ಖೇಲ್ಸೆ ಆಶ್ರಯಧಾಮಕ್ಕೆ ಸೇರಿಸಲ್ಪಟ್ಟಳು. ಅಮೇರಿಕದಲ್ಲಿ ಅನಾಥಮಕ್ಕಳಿಗಾಗಿ ಸರ್ಕಾರ ಫಾಸ್ಟರ್ ಹೋಮ್‌ಗಳಿಗೆ ಅನುಮತಿ ನೀಡಿ ಪ್ರತಿಯೊಂದು ಮಗುವಿನ ಖರ್ಚು–ವೆಚ್ಚಗಳಿಗಾಗಿ ಪ್ರತಿ ತಿಂಗಳು 500 – 600 ಡಾಲರ್‌ಗಳನ್ನು ಫಾಸ್ಟರ್ ಹೋಂ ನಡೆಸುವ ಪೋಷಕರಿಗೆ ನೀಡುವ ವ್ಯವಸ್ಥೆ ಇದೆ. ಈ ಪೋಷಕರನ್ನು ಫಾಸ್ಟರ್ ಪೇರೆಂಟ್ಸ್ ಎಂದು ಕರೆಯುತ್ತಾರೆ ಅನೇಕ ಮಕ್ಕಳೊಂದಿಗೆ ಆಶ್ರಯಧಾಮದಲ್ಲಿ ಬೆಳೆಯುತ್ತಿದ್ದಂತೆ, ಅವಳ ಸಾಕು ತಾಯಿ–ತಂದೆಯರು ಅವಳು ಅನಾಥಾಶ್ರಮದ ಬೇರೆ ಮಕ್ಕಳಿಗಿಂತ ವಿಭಿನ್ನವಾಗಿರುವುದನ್ನು ಗಮನಿಸಿದರು. ಸುತ್ತ ಮಂದಿಯಿದ್ದಾಗ ಅವಳು ಯಾವಾಗಲೂ ಚಿತ್ತ ಕ್ಷೋಭೆಯಿಂದ, ವ್ಯಾಕುಲತೆಯಿಂದ ಇರುತ್ತಿದ್ದಳು. ಇದು ಅವಳ ಸಾಕು ತಾಯಿ–ತಂದೆಗೆ ಸಮಸ್ಯೆಯಾಗತೊಡಗಿತು. ಇದರ ಜೊತೆಗೆ ಶಾಲೆಯಲ್ಲಿನ ಖೇಲ್ಸೆಯ ನಡವಳಿಕೆ ಅನೇಕ ವೇಳೆ ಸಮಸ್ಯಾತ್ಮಕವಾಗಿತ್ತು. ಅವಳ ತರಗತಿ ಶಿಕ್ಷಕಿ ಖೇಲ್ಸೆ ಯಾವಾಗಲೂ ತನ್ನ ಜೊತೆಯ ಮಕ್ಕಳೊಂದಿಗೆ ದೈಹಿಕ ಮತ್ತು ಮೌಖಿಕ ಜಗಳದಲ್ಲಿರುತ್ತಾಳೆಂದು ದೂರು ನೀಡಿದ್ದರು. ಇತ್ತೀಚಿನ ತಿಂಗಳುಗಳಲ್ಲಿ ಶಾಲಾ ಪ್ರಿನ್ಸಿಪಾಲ್ ಖೇಲ್ಸೆ ಲೈಂಗಿಕವಾಗಿ ಅಸಮರ್ಪಕ ನಡತೆಯನ್ನು ಪ್ರದರ್ಶಿಸುತ್ತಿದ್ದಾಳೆಂದು ಆಕ್ಷೇಪಿಸಿದರು. ಖೇಲ್ಸೆಯ ಸಾಕು ತಂದೆ–ತಾಯಿಯವರಿಗೆ ಇದರಿಂದ ಆಶಾಭಂಗವಾಯಿತು.

ಅವಳನ್ನು ನಂತರವೂ ಪೋಷಿಸುವ ತಮ್ಮ ನಿರ್ಧಾರವನ್ನು ಬದಲಿಸುವ ಆಲೋಚನೆ ಮಾಡಿದರು. ಅವರು ಖೇಲ್ಸೆಯ ಸಾಮಾಜಿಕ ಕಾರ್ಯಕರ್ತರನ್ನು ಸಂಪರ್ಕಿಸಿ, ಖೇಲ್ಸೆಗೆ 21 ದಿನಗಳ ಗಡುವು ಕೊಡುತ್ತಿರುವುದಾಗಿಯೂ, ಆ ಅವಧಿ ಮುಗಿಯುವುದರೊಳಗೆ ಅವಳನ್ನು ತಮ್ಮ ಮನೆಯಿಂದ ದೂರಗೊಳಿಸಬೇಕೆಂದು ತಿಳಿಸಿದರು. ಇದರಿಂದ ಖೇಲ್ಸೆ ವ್ಯಗ್ರಳಾದಳು, ದುಃಖಿತಳಾದಳು ಮತ್ತು ತನ್ನ ಸಾಕು ತಾಯಿತಂದೆಯರು ತನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲವೆಂದು ಭಾವಿಸಿದಳು.

ಆದಾಗ್ಯೂ, ಮುಂಬರುವ ದಿನಗಳಲ್ಲಿ ಖೇಲ್ಸೆಯ ವರ್ತನೆ ಇನ್ನಷ್ಟು ದುಸ್ತರವಾಗ ತೊಡಗಿತು. ಹಿಡಿತ ಮೀರಿತು. ಕದಿಯುವುದನ್ನು, ಸಾಕು–ತಂದೆಯವರಿಗೆ ಸುಳ್ಳು ಹೇಳುವುದನ್ನು ಪ್ರಾರಂಭಿಸಿದಳು. ಸಹಾಯ ಪಡೆಯುವುದನ್ನು ಕಡಿಮೆ ಮಾಡಿದಳು, ತನ್ನ ಸಾಕು ತಂದೆತಾಯಿಗಳ ಬಗ್ಗೆ ಕೆಟ್ಟ ಭಾಷೆಯಲ್ಲಿ ಬಯ್ಯುತ್ತಿದ್ದಳು. ಒಂದು ಸಂದರ್ಭದಲ್ಲಿಯಂತೂ ಆಶ್ರಯ ಗೃಹದಿಂದ ಓಡಿ ಹೋಗಲು ಪ್ರಯತ್ನಿಸಿದಳು.

ರಾಜ್ಯ ಸಮಾಜಸೇವಾಧಿಕಾರಿಗಳು ಅವಳಿಗೆ ಸಹಾಯ ಮಾಡಲು ಅನೇಕ ಬಾರಿ ಯತ್ನಿಸಿದರಾದರೂ, ಖೇಲ್ಸೆ ನಿರಾಕರಿಸಿದಳು. ಸಮಾಜ ಸೇವಕರ ಬಗ್ಗೆ, ತನ್ನನ್ನು ಈ ಪ್ರಪಂಚಕ್ಕೆ ತಂದ ತನ್ನ ಅಜ್ಞಾತ ತಂದೆ ತಾಯಿಗಳ ಬಗ್ಗೆ ಅವಳಿಗೆ ಕೋಪ, ಆದಾಗ್ಯೂ ಸಮಾಜ ಸೇವಕರು ಮನಶ್ಶಾಸ್ತ್ರಜ್ಞರಲ್ಲಿ ಭೇಟಿಯನ್ನು ಗೊತ್ತುಪಡಿಸಿ ಸಾಕು ತಂದೆ ತಾಯಿಗಳೊಂದಿಗೆ ಉಳಿಸಿಕೊಳ್ಳುವ ಸಲುವಾಗಿಯಾದರೂ, ಭೇಟಿ ಮಾಡುವಂತೆ ಖೇಲ್ಸೆಗೆ ತಿಳಿಸಿದರು. ಆದರೆ ಖೇಲ್ಸೆ ಒಪ್ಪಲಿಲ್ಲ. ಆದರೆ ಗೊತ್ತುಪಡಿಸಿದ ದಿನದಂದು ಸಮಾಜಸೇವಕರು ಅವಳನ್ನು ಕರೆದೊಯ್ಯಲು ಬಂದಾಗ, ಖೇಲ್ಸೆ ಶಾಂತವಾಗಿದ್ದಳು ಅಷ್ಟೇ ಅಲ್ಲ, ಮನಶ್ಶಾಸ್ತ್ರಜ್ಞರನ್ನು ನೋಡಲು ತವಕದಿಂದಿರುವಂತೆ ಭಾಸವಾಯಿತು.

ಖೇಲ್ಸೆ ಹಾಗೂ ಮನಶ್ಶಾಸ್ತ್ರಜ್ಞರು ಮೊದಲನೆ ಭೇಟಿ ತೃಪ್ತಿಕರವಾಗಿತ್ತು. ಖೇಲ್ಸೆ ಸಹಕರಿಸಿದಳು ಹಾಗೂ ಅವರೊಡನೆ



ಮಾತನಾಡಲು ಕಾತುರದಿಂದಿದ್ದಳು. ಆದರೆ ವಾರಗಳು ಕಳೆದಂತೆ, ಖೇಲ್ಸೆ ಬಹಳ ದುಃಖಿತಳಾದಳು, ನಿರಾಸೆ ಹೊಂದಿದಳು, ಮನಶ್ಶಾಸ್ತ್ರಜ್ಞರೊಂದಿಗೆ ಮಾತನಾಡಲು ನಿರಾಕರಿಸಿದಳು. ಅವರ ಮುಂದೆ ಸುಮ್ಮನೆ ಗೋಡೆಯನ್ನು ದಿಟ್ಟಿಸುತ್ತಾ ಕುಳಿತಿರುತ್ತಿದ್ದಳು. ಅನೇಕ ವಾರಗಳು ಕಳೆದವು. ಒಂದು ದಿನ ಖೇಲ್ಸೆಯ ದುಃಖ ಸ್ಫೋಟಿಸಿತು. ಅಳುತ್ತಾ, ಮನಶ್ಶಾಸ್ತ್ರಜ್ಞೆಯನ್ನು ತನಗೆ ಸಹಾಯ ಮಾಡಬೇಕೆಂದು ಕೋರಿದಳು. ತನಗೆ ಆತ್ಮಹತ್ಯೆಯ ಯೋಚನೆ ಬರುತ್ತಿದ್ದು, ಅನೇಕ ಪ್ರಯತ್ನಗಳನ್ನು ಮಾಡಿರುವುದಾಗಿಯೂ ತಿಳಿಸಿದಳು. ತನ್ನ ನಾಡಿಯನ್ನು ಕತ್ತರಿಸಿಕೊಂಡು, ತನಗೆ ತಾನೇ ನೋವನ್ನುಂಟು ಮಾಡಿಕೊಂಡ ಬಗ್ಗೆ ತಿಳಿಸಿದಳು. ಮನಶ್ಶಾಸ್ತ್ರಜ್ಞೆ ಅವಳ ಮನಸ್ಸನ್ನರಿತು, ಆ ದಿನ ವಿವರಗಳಿಗಾಗಿ ಮುಂದೆ ಪ್ರಶ್ನಿಸಲಿಲ್ಲ. ಆಕೆ ಖೇಲ್ಸೆಗೆ ಬೆಂಬಲ ನೀಡಿ, ಸಾಕು ತಂದೆಯರಿಗೆ ಎಚ್ಚರಿಸಿ, ಅವಳನ್ನು ಹೆಚ್ಚು ಗಮನಿಸುವಂತೆ ತಿಳಿಸಿದಳು.

ಮುಂದಿನ ವಾರ ಸಾಕು ತಾಯಿ ಖೇಲ್ಸೆಯನ್ನು ಕ್ಲಿನಿಕ್‌ಗೆ ಕರೆತಂದಳು. ತಾಯಿ ಬಹಳ ಉಗ್ರಳಾಗಿರುವಂತೆ ಹಾಗೂ ಅಸಂತುಷ್ಟಳಾಗಿರುವಂತಿತ್ತು. ಖೇಲ್ಸೆ ಗೊಂದಲದಲ್ಲಿದ್ದರೂ, ದೃಢತೆ ಮತ್ತು ಭರವಸೆಯಿಂದಿದ್ದಳು. ಮನಶ್ಶಾಸ್ತ್ರಜ್ಞೆಯೊಡನೆ ಸಂಭಾಷಣೆಯಲ್ಲಿದ್ದಾಗ ಖೇಲ್ಸೆ ತಾನು ಕಳೆದ ನಾಲ್ಕು ವರ್ಷಗಳಿಂದ ಸಾಕುತಂದೆಯೊಡನೆ ಲೈಂಗಿಕ ಸಂಬಂಧ ಹೊಂದಿರುವುದಾಗಿ ಖಚಿತವಾಗಿ ಹೇಳಿದಳು; ನಾಲ್ಕು ವರ್ಷಗಳ ಹಿಂದೆ ಸಾಕು ತಂದೆ ಅವಳ ಮೇಲೆ ಅತ್ಯಾಚಾರವೆಸಗಿದ್ದ, ಅವಳು ಕೋಪ, ನಿರಾಸೆ ಮತ್ತು ಅಸಹಾಯಕತನದಿಂದ ಕಂಪಿಸುತ್ತಿದ್ದಳು. ಈ ಬಗ್ಗೆ ಬಾಯಿಬಿಟ್ಟರೆ ಕೊಲ್ಲುವುದಾಗಿ ಆತ ಹೆದರಿಸಿದ್ದರಿಂದ ಏನು ಮಾಡಲೂ ಆಕೆಗೆ ತೋಚಲಿಲ್ಲ. ಇದನ್ನು ರಹಸ್ಯವಾಗಿಟ್ಟಲ್ಲಿ, ಅವಳ ಮುಂದಿನ ಬದುಕಿನ ಬಗ್ಗೆ ಜವಾಬ್ದಾರಿ ವಹಿಸುವುದಾಗಿ ತಿಳಿಸಿದ್ದ. ಅವನೆಲ್ಲಿ ಕೊಂದು ಬಿಡುತ್ತಾನೋ ಎಂಬ ಭಯದಿಂದ ಈ ಘಟನೆಯನ್ನು ತನ್ನ ಸಾಕುತಾಯಿಯ ಬಳಿ ಹೇಳಿಕೊಳ್ಳಲೂ ಹಿಂಜರಿದುದಾಗಿ ಖೇಲ್ಸೆ ತಿಳಿಸಿದಳು. ತನ್ನನ್ನು ಬೇರೆ ಮನೆಗೆ ಕಳಿಸಬಹುದೆಂಬ ಭಯ ಅವಳಿಗೆ. ಅವಳಿಗೆ ಜನ್ಮ ನೀಡಿದ ತಂದೆ ತಾಯಿಗಳು ತೊರೆದ ನಂತರ ಇದೊಂದೇ ಕುಟುಂಬ ಅವಳಿಗೆ ಗೊತ್ತಿರುವುದು. ಆದ್ದರಿಂದ ಬೇರೆ ಮನೆಯನ್ನು ಊಹಿಸಲೂ ಅವಳಿಗೆ ಸಾಧ್ಯವಿರಲಿಲ್ಲ.

ಮನಶ್ಶಾಸ್ತ್ರಜ್ಞೆಯು ಸಾಕುತಾಯಿಗೆ ಖೇಲ್ಸೆ ಇನ್ನು ಅದೇ ಮನೆಯಲ್ಲಿರುವುದು ಸೂಕ್ತವಲ್ಲವೆಂದು ತಿಳಿಸಿದಳು. ಆ ಸಾಕುತಾಯಿ ಖೇಲ್ಸೆಯನ್ನು ಬಹುವಾಗಿ ಪ್ರೀತಿಸುತ್ತಿದ್ದಳು. ಖೇಲ್ಸೆಗಾಗಿ ಪ್ರತ್ಯೇಕ ಮನೆ ಮಾಡುವುದಾಗಿ ಆಕೆ ತಿಳಿಸಿದಳು. ಖೇಲ್ಸೆಯೂ ಒಪ್ಪಿದಳು. ಖೇಲ್ಸೆಗೆ ಕಾಮಿಯಾದ ಸಾಕು ತಂದೆಯಿಂದ ದೂರವಿದ್ದು, ಎಲ್ಲ 15 ವರ್ಷದ ಬಾಲಕಿಯರಂತೆ ಇರುವುದು ಬೇಕಾಗಿತ್ತು. ಸಾಕು ತಾಯಿಯ ಬೆಂಬಲ ಅವಳ ಬದುಕಿಗೆ ಚೈತನ್ಯ ನೀಡಿತ್ತು. ತಾನು "ಮಾಮ್" ಎಂದು ಕರೆಯುತ್ತಿದ್ದ ಸಾಕುತಾಯಿಯನ್ನು ಖೇಲ್ಸೆ ಕೃತಜ್ಞತೆಯಿಂದ ನೋಡಿದಳು.

ಕೆಲವು ವಾರಗಳ ನಂತರ ಖೇಲ್ಸೆ ಮನಶಾಸ್ತ್ರಜ್ಞೆಗೆ ತನ್ನ ಸಮಸ್ಯೆಗಳಿಂದ ಮುಕ್ತಳಾಗಿರುವುದಾಗಿಯೂ, ಇದೀಗ ತನ್ನ ಭವಿಷ್ಯದ ಬಗ್ಗೆ ದೃಢ ಹೆಜ್ಜೆ ಇಡುತ್ತಿರುವುದಾಗಿಯೂ ತಿಳಿಸಿದಳು. ಅವಳೀಗ ನಿರಾಸೆ, ದುಃಖಗಳಿಂದ ಬಿಡುಗಡೆ ಪಡೆದು, ಹೊಸ ದಾರಿಯಲ್ಲಿ ಸಾಗಲು ಸಂಕಲ್ಪ ಮಾಡಿದಳು.

ಹೊರ ಜಗತ್ತಿನಿಂದ ರಕ್ಷಣೆ ಪಡೆಯುವ ಸಲುವಾಗಿ ಖೇಲ್ಸೆ ಆಶ್ರಯ ಗೃಹವನ್ನು ಸೇರಿದರೂ, ದುರದೃಷ್ಟವಶಾತ್ ಅವಳು ರಕ್ಷಣಾಹೀನಳಾಗಿದ್ದಳು. ಅವಳಿಗೆ ಜನ್ಮ ನೀಡಿದ ತಂದೆತಾಯಿಗಳು ಅವಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೊತ್ತಿದ್ದರೆ, ಅವಳಿಗೆ ಈ ಸ್ಥಿತಿ ಬರುತ್ತಿರಲಿಲ್ಲ. ಮನಶ್ಶಾಸ್ತ್ರಜ್ಞೆಯ ಭೇಟಿ ಕಮರಿದ್ದ ಅವಳ ಬದುಕಿಗೆ ಚೈತನ್ಯ ನೀಡಿತು.

ಇಂಗ್ಲೀಷ್‌ನಿಂದ ಕನ್ನಡಕ್ಕೆ : **ಕೆ.ಜಿ.ಕಲಾವತಿ**

---

## ಆತ್ಮೀಯ ಬೀಳ್ಕೊಡುಗೆ



ಪ್ರಾಥಮಿಕ ಶಿಕ್ಷಣ ನಿರ್ದೇಶಕರಾಗಿದ್ದ ಶ್ರೀ.ಜಿ.ಚಂದ್ರ ಶೇಖರ್‌ರವರು ಇದೇ ಜೂನ್ 30 ರಂದು ಸೇವೆಯಿಂದ ನಿವೃತ್ತರಾದ ಸಂದರ್ಭದಲ್ಲಿ ಇಲಾಖೆಯಿಂದ ಅವರನ್ನು ಆತ್ಮೀಯವಾಗಿ ಬೀಳ್ಕೊಡಲಾಯಿತು. ಶ್ರೀ ಎ.ಎ.ಕುಟಿನ್ಹೋ, ನಿರ್ದೇಶಕರು, ಅಲ್ಪಸಂಖ್ಯಾತ ಭಾಷೆಗಳು ಇವರು ಅಧ್ಯಕ್ಷತೆವಹಿಸಿದ್ದರು. ಇದೇ ಸಂದರ್ಭದಲ್ಲಿ ನಿವೃತ್ತರಾದ ಶ್ರೀ ಜಲಗೇರಿಮಠ್, ಹಿರಿಯ ಸಹಾಯಕ ನಿರ್ದೇಶಕರು, ಚಿತ್ರಕಲಾವಿಭಾಗ ಇವರನ್ನೂ ಬೀಳ್ಕೊಡಲಾಯಿತು. ಈಸಂದರ್ಭದಲ್ಲಿ ಸನ್ಮಾನಿತರು ಇಲಾಖೆಗೆ ಸಲ್ಲಿಸಿದ ಸೇವೆಯನ್ನು ಸ್ಮರಿಸಲಾಯಿತು.

ಆಯುಕ್ತರ ಕಚೇರಿಯ ಲಿಪಿಕ ನೌಕರರ ಸಂಘ ಹಾಗೂ ಅಧಿಕಾರಿಗಳ ಸಂಘ ಜಂಟಿಯಾಗಿ ಈ ಸಮಾರಂಭವನ್ನು ಏರ್ಪಡಿಸಿದ್ದವು.



**ಹಾವೇರಿ** ಜಿಲ್ಲೆಯ ಶಿಂಗಾವ ತಾಲ್ಲೂಕಿನ ಸ.ಹಿ.ಪ್ರಾ. ಶಾಲೆಯಲ್ಲಿ ಚಿಣ್ಣರ ಅಂಗಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಅಕ್ಷರ ಮರಗಳನ್ನು ತಯಾರಿಸಿ ಅದರಲ್ಲಿ ಅಕ್ಷರಗಳು, ಒತ್ತಕ್ಷರಗಳು, ಸಂಖ್ಯೆಗಳನ್ನು ಬಣ್ಣ ಬಣ್ಣದಲ್ಲಿ ಬರೆದು ಬೇರೆ ಬೇರೆ ಕಡೆ ಅಂಟಿಸಲಾಗಿತ್ತು. ಮಕ್ಕಳಿಗೆ ಯಾವುದಾದರೂ ಒಂದು ಪದವನ್ನು ಹೇಳಿ ಅದಕ್ಕೆ ಬೇಕಾಗುವ ಅಕ್ಷರಗಳನ್ನು ಹುಡುಕಿ ಜೋಡಿಸಿ ಎಂದಾಗ ಪ್ರಯತ್ನಿಸುತ್ತಾರೆ. ಆಟದ ಮೂಲಕ ವಿದ್ಯಾರ್ಥಿಗಳು ಕಲಿಯುತ್ತಾರೆ. ಈ ಕಾರ್ಯಕ್ರಮದಲ್ಲಿ ಇಲಾಖೆಯ ಅಧಿಕಾರಿಗಳು, ಗ್ರಾಮಸ್ಥರು ಎಲ್ಲರೂ ಭಾಗವಹಿಸಿ ಕಾರ್ಯಕ್ರಮವನ್ನು ವೀಕ್ಷಿಸಿ ಆನಂದಿಸಿದರು.

ಈ ಅಕ್ಷರ ಮರಗಳಲ್ಲಿ ಕನ್ನಡ ಅಕ್ಷರಗಳು, ಪದಗಳು, ಇಂಗ್ಲಿಷ್ ಅಕ್ಷರಗಳು, ಆಕಾಶಕಾಯಗಳು, ಸಂಖ್ಯೆಗಳು, ಒತ್ತಕ್ಷರಗಳು, ಗುಣಿತಾಕ್ಷರಗಳು ಹೀಗೆ ವಿವಿಧ ರೀತಿಯಲ್ಲಿ ಪಟಗಳನ್ನು ತೂಗುಹಾಕಿ ಅಕ್ಷರಗಳನ್ನು ಆಕರ್ಷಣೀಯವಾಗಿ ಸೃಜಿಸಲಾಗಿತ್ತು.

**ಎಂ. ಎ. ಕಾಡನೂರ**

ಮಾರ್ಗದರ್ಶಿ ಶಿಕ್ಷಕರು ಚಿಣ್ಣರ ಕೇಂದ್ರ, ಕೋಣನಕೇರಿ

---

**ದಾವಣಗೆರೆ** ದಕ್ಷಿಣ ವಲಯದ ನಲ್ಕುಂದ ಗ್ರಾಮದ ಸ.ಪ್ರಾ. ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಕಲಿಕೆಗೆ ಸಹಾಯಕವಾಗಿರುವ ಕಲಿಕೋಪಕರಣಗಳ ಪ್ರದರ್ಶನದ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಇದೇ ಸಮಯದಲ್ಲಿ ಜಿಲ್ಲಾಧಿಕಾರಿಗಳ ಗ್ರಾಮ ವಾಸ್ತವ್ಯ ಸಹ ಇತ್ತು.



ಈ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ಎಸ್.ವಿ. ರವೀಂದ್ರನಾಥ್‌ರವರು ಉದ್ಘಾಟಿಸಿದರು. ಲೋಕಸಭಾ ಸದಸ್ಯ ರಾದ ಮಾನ್ಯ ಸಿದ್ದೇಶ್‌ರವರು ಹಾಗೂ ಜಿಲ್ಲಾಧಿಕಾರಿಗಳಾದ ದ್ಯಾಬೇರಿ, ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು, ಉಪ ನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿ ಗಳು, ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಕಲಿಕೋಪಕರಣಗಳನ್ನು ವೀಕ್ಷಿಸಿದರು.

**– ಜೆ.ಹೆಚ್.ಆಂಜಿನಪ್ಪ**

ಹದಡಿಕೇಂದ್ರ ದಾವಣಗೆರೆ ದಕ್ಷಿಣ ವಲಯ

---



**ಬಾಗಲಕೋಟೆ ಜಿಲ್ಲೆ,** ಜಮಖಂಡಿ ಸರ್ಕಾರಿ ಮರಾಠಿ ಗಂಡು ಮಕ್ಕಳು ಶಾಲೆಯಲ್ಲಿ ಉಪಾಧ್ಯಾಯರ ಕೊರತೆ ಇದ್ದು, ವಿದ್ಯಾರ್ಥಿಗಳ ಕಲಿಕೆ ಕುಂಠಿತವಾಗುತ್ತಿದೆ ಎಂದು ಮನಗಂಡ ಊರಿನ ಕಲಿತ ತರುಣ–ತರುಣಿಯರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸ್ವಯಂ ಸೇವಕರಾಗಿ ಬೋಧನೆ ಮಾಡಲು ಪ್ರಾರಂಭಿಸಿದ್ದಾರೆ.

**– ಎಸ್.ಬಿ.ಡಂಗಿ**

ಮುಖ್ಯೋಪಾಧ್ಯಾಯರು, ಸರ್ಕಾರಿ ಮರಾಠಿ ಶಾಲೆ ಜಮಖಂಡಿ

**ಬೀದರ್ :** ಭಾಲ್ಕಿ ತಾಲ್ಲೂಕಿನ ಸಿ.ಆರ್.ಸಿ.ಯಲ್ಲಿ 60 ದಿವಸಗಳ ಚಿಣ್ಣರ ಅಂಗಳದ ಸಮಾರೋಪ ಸಮಾರಂಭ ಆಯೋಜಿಸಲಾಗಿತ್ತು. ಮಾದರಿ ಪ್ರಾ. ಶಾಲೆಯ ಪ್ರಭಾರಿ ಮುಖ್ಯ ಗುರುಗಳಾದ ತುಕಾರಾಮ್, ಸಂಪನ್ಮೂಲ ವ್ಯಕ್ತಿ ವೆಂಕಟ ಬಿ. ಮೇತ್ರೆ ಭಾಗವಹಿಸಿದ್ದರು. ಸಮಾರಂಭದ ವಿಶೇಷವೆಂದರೆ : ಕೀರ್ತಿಯ ಸಂಕೇತವಾಗಿ ಮಕ್ಕಳಿಗೆ ಟೊಪ್ಪಿಗೆ ಹಾಕಿದ್ದಾರೆ. ವಿಜಯದ ಸಂಕೇತವಾಗಿ ಮುಖ್ಯ ವಾಹಿನಿಗೆ ಸೇರುವ ತರಗತಿ ಧ್ವಜ ಮತ್ತು ತರಗತಿ ಪ್ರಮಾಣ ಪತ್ರ ಕೊಟ್ಟು ಮುಖ್ಯ ವಾಹಿನಿಗೆ ಕಳುಹಿಸಿತ್ತಿದ್ದ ದೃಶ್ಯ ಮೋಹಕವಾಗಿತ್ತು. ಕಾರ್ಯಕ್ರಮದಲ್ಲಿ ಎಸ್. ಡಿ.ಎಂ.ಸಿ. ಸದಸ್ಯರು ಗಣ್ಯರು ಉಪಸ್ಥಿತರಿದ್ದರು. ಕಾಶಿನಾಥ ಕೊಳ್ಳೆ. ಸ.ಶಿ. ಸ್ವಾಗತಿಸಿದರು. ಪುಂಡಲಿಕರಾವ ಸ.ಶಿ. ನಿರೂಪಿಸಿದರು. ಶಿವಕುಮಾರ ಸ್ವಯಂಶಿಕ್ಷಕರು ವಂದಿಸಿದರು.

**ವೆಂಕಟ ಬಿ. ಮೇತ್ರೆ**
ಸಂಪನ್ಮೂಲ ವ್ಯಕ್ತಿ, ಖಟಕ ಚಿಂಚೋಳಿ ತಾ. ಭಾಲ್ಕಿ





**ಮಧುಗಿರಿ ಜಿಲ್ಲೆ :** ಸಾಂಸ್ಕೃತಿಕ ತಾಲ್ಲೂಕಿನ ಬಿಜವರ ಕ್ಲಸ್ಟರ್‌ನ ಸ.ಕಿ.ಪ್ರಾ. ಶಾಲೆಯಲ್ಲಿ ನಮ್ಮ ದೇಶದ ಸಂಸ್ಕೃತಿ ಮತ್ತು ನಾಗರಿಕತೆಯನ್ನು ಬಿಂಬಿಸುವ ಕಾರ್ಯಕ್ರಮಗಳನ್ನು ಶಾಲೆಯ ಪುಟಾಣಿ ಮಕ್ಕಳು ಪ್ರದರ್ಶಿಸಿದರು. ಕಾರ್ಯಕ್ರಮಕ್ಕೆ ಶಾಲೆಯ ಮುಖ್ಯೋಪಾಧ್ಯಾಯರು ಎಲ್ಲರನ್ನು ಸ್ವಾಗತಿಸಿದರು.

**ಸಿದ್ದಲಿಂಗಪ್ಪ**
ಕ್ಷೇತ್ರ ಸಂಪನ್ಮೂಲ ಸಮೂಹ ಸಂಯೋಜಕರು
ಸರ್ವಶಿಕ್ಷಣ ಅಭಿಯಾನ ಬಿಜವರ ಕೇಂದ್ರ,

**ಬೆಂಗಳೂರು ದಕ್ಷಿಣ** ಜಿಲ್ಲೆಯ ವಲಯ 3ರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಇಬ್ಬಲೂರು, ಸರ್ಜಾಪುರ ರಸ್ತೆ, ಇಲ್ಲಿ ದಿನಾಂಕ 29.6.07 ರಂದು ನೂತನ ಕಟ್ಟಡದ "ಶಂಕುಸ್ಥಾಪನೆ" ಕಾರ್ಯಕ್ರಮ ನರಸಿಂಹಮೂರ್ತಿ ಅಗರ ಹಾಗೂ ಲಯನ್ಸ್ ಕ್ಲಬ್ ಎಚ್. ಎಸ್. ಆರ್. ಲೇ ಔಟ್ ಮತ್ತು ಇಬ್ಬಲೂರಿನ ಎಕ್ಸ್ ಕೌನ್ಸಿಲರ್ ಮುನಿರಾಜು, ಎಸ್. ಡಿ.ಎಂ.ಸಿ. ಸದಸ್ಯರು ಅಧ್ಯಕ್ಷರರೊಂದಿಗೆ ನೇರವೇರಿತು. ಈ ನೂತನ ಕಟ್ಟಡದ ದಾನಿಗಳಾದ ನರಸಿಂಹಮೂರ್ತಿ ಕಟ್ಟಡವನ್ನು ಎಕ್ಸ್ ಕೌನ್ಸಿಲರ್ ಮುನಿರಾಜು ಮತ್ತು ಲಯನ್ಸ್‌ಕ್ಲಬ್ ಸಹಕಾರದೊಂದಿಗೆ ನರಸಿಂಹಮೂರ್ತಿರವರು ಕಟ್ಟಿಸಲಿದ್ದಾರೆ. ಲಯನ್ಸ್ ಕ್ಲಬ್ ವತಿಯಿಂದ ಡೈರೆಕ್ಟರ್, ಪ್ರೊ. ಸದಾಶಿವ ಹಾಗೂ ಸದಸ್ಯರ ವತಿಯಿಂದ ಎಲ್ಲಾ ಮಕ್ಕಳಿಗೆ ಉಚಿತ ನೋಟ್ ಪುಸ್ತಕ ಹಾಗೂ ಜಾಮೆಟ್ರಿ ಬಾಕ್ಸ್ ವಿತರಿಸಲಾಗಿತ್ತು. ಈ ಶುಭ ಸಂದರ್ಭದಲ್ಲಿ ಇಬ್ಬಲೂರ ಶಾಲೆಯನ್ನು ಲಯನ್ಸ್ ಕ್ಲಬ್ ಎಚ್. ಎಸ್. ಆರ್. ಲೇ ಔಟ್ ಇವರು ದತ್ತು ತೆಗೆದುಕೊಂಡಿರುವುದಾಗಿ ತಿಳಿಸಿದರು.

– **ಗೀತಾ ಪಲ್ಲೇದ** ಮು.ಶಿ.



## ಉಚಿತ ನೋಟ್ ಪುಸ್ತಕ ವಿತರಣೆ



**ಬೆಂಗಳೂರು ದಕ್ಷಿಣ ಜಿಲ್ಲೆ** ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ವರ್ತೂರು, ಇಲ್ಲಿ ಶಾಲಾ ಮಕ್ಕಳಿಗೆ ಉಚಿತವಾಗಿ, ಸೆಪಿಯೆಂಟ್ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್, ವೈಟ್ ಫೀಲ್ಡ್ ರಸ್ತೆ, ಸಂಸ್ಥೆಯ ಶ್ರೀಯುತರಾದಂತಹ, ಅಭಿಷೇಕ್, ಆನಂದ, ಶಶಿ, ಮತ್ತು ಕಾಂಚನಗುಪ್ತ ಇವರುಗಳು ಪುಸ್ತಕಗಳನ್ನು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಎಂ. ಲಚ್ಚಪ್ಪನವರು, ಸಮಿತಿ ಸದಸ್ಯರಾದ ಎಂ. ವೆಂಕಟಸ್ವಾಮಿ, ಶಿಕ್ಷಣ ಇಲಾಖೆಯ ಸಿ.ಆರ್.ಪಿ. ಎಂ. ಗೋವಿಂದಪ್ಪ, ಮುಖ್ಯ ಶಿಕ್ಷಕರಾದ ಎಸ್.ಎಂ. ಮುನಿನಾರಾಯಣ ಹಾಗೂ ಸಹ ಶಿಕ್ಷಕರ ಸಮ್ಮುಖದಲ್ಲಿ ಹಂಚಿದರು. ಇದನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನುಡಿದರು.

– **ಎಸ್.ಎಂ. ಮುನಿನಾರಾಯಣ,** ಮು.ಶಿ.

---



**ಬೆಂಗಳೂರು ಗ್ರಾಮಾಂತರ ಜಿಲ್ಲೆಯ** ಕನಕಪುರ ತಾಲ್ಲೂಕಿನ ಸ.ಕಿ.ಪ್ರಾ. ಶಾಲೆ ಗಂಗನಹಳ್ಳಿಯ ಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಅಕ್ಷರದಾಸೋಹ ಕಾರ್ಯಕ್ರಮದಡಿ ಶ್ರೀನಿವಾಸ್‌ರವರು ಊಟದ ತಟ್ಟೆಗಳು, ವಾಟರ್ ಫಿಲ್ಟರ್ ಅನ್ನು ಶಾಲೆಗೆ ದಾನ ಮಾಡುವುದರ ಮೂಲಕ ವಿದ್ಯಾರ್ಥಿಗಳ ಕಲಿಕೆಗೆ ಸಹಾಯಕರಾಗಿದ್ದಾರೆ. ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಶ್ರೀ ಬಸಪ್ಪನವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಗ್ರಾಮಸ್ಥರಾದ ರಮೇಶ್, ಪುಟ್ಟಸ್ವಾಮಿ, ಕುಮಾರಸ್ವಾಮಿ ಮತ್ತಿತರರು ಭಾಗವಹಿಸಿದ್ದರು. ಶಾಲೆಯ ಮುಖ್ಯೋಪಾಧ್ಯಾಯರಾದ ಶಿವಾನಂದರವರು ಎಲ್ಲರನ್ನೂ ವಂದಿಸಿದರು.

**ಬಿ. ಶಿವಾನಂದ** ಮು.ಶಿ.

---

**ಬೆಂಗಳೂರು ದಕ್ಷಿಣ ಜಿಲ್ಲೆ** ವಲಯ 2ರ, ಸರ್ಕಾರಿ ಹಿರಿಯ ಪ್ರಾ. ಶಾಲೆ, ಗೋವಿಂದರಾಜನಗರ ಬೆಂಗಳೂರು ಈ ಶಾಲೆಗೆ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಈ ಕೆಳಗೆ ನಮೂದಿಸಿರುವ ದಾನಿಗಳು ಅಪಾರವಾದ ಕೊಡುಗೆ ನೀಡಿದ್ದಾರೆ. ದಿನಾಂಕ 27.6.07ರಂದು ಪುಸ್ತಕಗಳ ವಿತರಣಾ ಸಮಾರಂಭ ನಡೆಯಿತು. ಸಮಾರಂಭದಲ್ಲಿ ಶ್ರೀ ಮಾರುತಿ ಧರ್ಮದರ್ಶಿ ಮಂಡಳಿರವರ ವತಿಯಿಂದ ಅಧ್ಯಕ್ಷರಾದ ಪುಟ್ಟಸ್ವಾಮಿರವರು, ಪ್ರಧಾನ ಕಾರ್ಯದರ್ಶಿಗಳಾದ ನಂಜುಂಡಪ್ಪರವರು ಹಾಗೂ ಖಜಾಂಚಿಗಳಾದ ರಾಮಕೃಷ್ಣಯ್ಯ ಇವರ ನೇತೃತ್ವದಲ್ಲಿ ನಮ್ಮ ಶಾಲೆಯ 600 ಬಡ ವಿದ್ಯಾರ್ಥಿಗಳಿಗೆ 5000 ಉಚಿತ ನೋಟ್ ಪುಸ್ತಕಗಳನ್ನು ವಿತರಿಸಿರುತ್ತಾರೆ.

ಎಂ. ಚನ್ನಪ್ಪ ಮಾಜಿ ಮಹಾನಗರ ಪಾಲಿಕೆಯ ಸದಸ್ಯರು 600 ತಟ್ಟೆಗಳನ್ನು ಮಕ್ಕಳಿಗೆ ದಾನವಾಗಿ ನೀಡಿದರು. ವಿಜಯನಗರ ರೋಟರಿ ಕ್ಲಬ್ ವತಿಯಿಂದ 1000 ನೋಟ್ ಪುಸ್ತಕಗಳನ್ನು ಹಾಗೂ 200 ವಿದ್ಯಾರ್ಥಿಗಳಿಗೆ ಷೂಗಳನ್ನು ವಿತರಿಸಿದರು. ಕೆನರಾ ಬ್ಯಾಂಕ್ ಸಮಾಜ ಸೇವಾ ವಿಭಾಗದಿಂದ 2000 ನೋಟ್ ಪುಸ್ತಕಗಳನ್ನು ವಿತರಿಸಿದರು. ಸಮಾರಂಭಕ್ಕೆ ಎಲ್ಲ ದಾನಿಗಳನ್ನು ಶಾಲೆಯ ಮುಖ್ಯೋಪಾಧ್ಯಾಯರಾದ, ಜಿ. ಚಂದ್ರಶೇಖರಯ್ಯನವರು ಸ್ವಾಗತಿಸಿದರು. ಸುಮಾರು ಎರಡು ಲಕ್ಷಕ್ಕೂ ಹೆಚ್ಚು ದಾನ ಮಾಡಿರುವ ಎಲ್ಲಾ ದಾನಿಗಳನ್ನು ವಂದಿಸಿ, ವಿದ್ಯಾರ್ಥಿಗಳು, ದಾನಿಗಳ ಸಹಕಾರವನ್ನು ಉಪಯೋಗಿಸಿಕೊಂಡು ಕಲಿಕೆಯಲ್ಲಿ ಎಲ್ಲರೂ ಮುಂದೆ ಬರಬೇಕೆಂದು ನುಡಿದರು.

**ಜಿ. ಚಂದ್ರಶೇಖರಯ್ಯ,** ಮು.ಶಿ.





# ಪತಿಯ ಪ್ರೇರಣೆ, ಪತ್ನಿಗೆ ಸ್ಫೂರ್ತಿ

ಬಳ್ಳಾರಿ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ (DIET) ಯಲ್ಲಿ ಸಹಾಯಕಿ ಕೆಲಸ ಮಾಡುತ್ತಿರುವ **ಶ್ರೀಮತಿ ಹಿಮಾಚಲಮ್ಮ ತಿಪ್ಪಯ್ಯ** ಇವರು ಶಿಕ್ಷಣ ಪ್ರೇಮ, ದಾನಗುಣದಿಂದ ಎಲ್ಲರ ಗಮನ ಸೆಳೆದ ಸುದ್ದಿ ಇಲ್ಲಿದೆ :

ಹಿಮಾಚಲಮ್ಮನವರ ಪತಿ ತಿಪ್ಪಯ್ಯನವರು ಬಳ್ಳಾರಿ ತಾಲ್ಲೂಕಿನಲ್ಲಿ ಪ್ರೌಢಶಾಲಾ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಈ ದಂಪತಿಗಳಿಗೆ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಬೇಕೆಂಬ ಹಂಬಲ ಯಾವಾಗಲೂ ತುಡಿಯುತ್ತಿತ್ತು. ಬಳ್ಳಾರಿಯಲ್ಲಿ ತಮ್ಮ ಮನೆಯ ಪಕ್ಕದ ಪಟೇಲ್ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ದಿನಾಲು ನೋಡುತ್ತಿದ್ದ ಇವರು ಆ ಶಾಲೆಯ ಕೊಠಡಿಗಳು ಶಿಥಿಲಗೊಂಡಿರುವುದನ್ನು ಗಮನಿಸಿದಾಗ ಅದಕ್ಕೆ ಏನಾದರೂ ಮಾಡಬೇಕೆಂದು ಯೋಚಿಸಿದರು. ಯಾರಿಂದಲೂ ಹೇಳಿಸಿಕೊಳ್ಳದೆ ಶಾಲಾ ಕೊಠಡಿ ನಿರ್ಮಾಣಕ್ಕೆ 75,000 ರೂ.ಗಳನ್ನು ನೀಡುವ ಸಂಕಲ್ಪ ಮಾಡಿದರು. ಕೇಳಿದರೇ ಕೊಡುವುದು ಕಷ್ಟವಿರುವ ಕಾಲದಲ್ಲಿ ಕೇಳದೆಯೇ ಒಬ್ಬ ಶಿಕ್ಷಕ ಶಾಲೆ ಕೊಠಡಿ ನಿರ್ಮಾಣಕ್ಕೆ ಹಣ ಕೊಡಲು ಮುಂದೆ ಬಂದಿದ್ದು SDMC ಯವರಿಗೆ ಆನಂದ ಹಾಗೂ ಆಶ್ಚರ್ಯ ಒಮ್ಮೆಲೆ ಆದವು. ಹಣ ಪಡೆದು ಕಟ್ಟಡ ಪ್ರಾರಂಭಿಸಬೇಕು ಎಂದು ಸಿದ್ಧವಾದಾಗ ವಿಧಿಯ ಆಟವೇ ಬೇರೆಯಾಗಿತ್ತು. ಅನಿರೀಕ್ಷಿತವಾಗಿ 1999ರಲ್ಲಿ ತಿಪ್ಪಯ್ಯನವರು ವಿಧಿವಶರಾದರು. ಇವರ ಅಕಾಲಿಕ ಅಗಲಿಕೆಯಿಂದ ಹಿಮಾಚಲಮ್ಮನಾದಿಯಾಗಿ ಎಲ್ಲರಿಗೂ ದಿಕ್ಕು ತೋಚದಂತಾಯಿತು.

ಪತಿಯ ಮರಣದ ಅನುಕಂಪದ ಆಧಾರದ ಮೇಲೆ ಡಯಟ್ ನಲ್ಲಿ ಹಿಮಾಚಲಮ್ಮ 'D' ಗ್ರೂಪ್ ನೌಕರಳಾಗಿ ನೇಮಕಗೊಂಡಳು. ಪತಿಯ ಪ್ರತಿ ಚಲನ ವಲನದಲ್ಲೂ ಜೊತೆಯಾಗಿದ್ದ ಈ ಮಹತಾಯಿ ಹಿಂದು ಮುಂದು ನೋಡದೆ ಪತಿ ಕೊಟ್ಟ ಮಾತಿನಂತೆ ನೇರವಾಗಿ ಹೋಗಿ ಶಾಲೆಗೆ 75,000 ರೂ. ಹಣ ದೇಣಿಗೆ ನೀಡಿದ್ದಾರೆ. ಪತಿಗೆ ಎಂತಹ ಸಂಗಾತಿ! ತಿಪ್ಪಯ್ಯನವರ ಆತ್ಮಕ್ಕೆ ಸಂತೃಪ್ತಿಯಾಗಿದ್ದೀತು. ಅಷ್ಟೇ ದಾನಕ್ಕೆ ಹಿಮಾಚಲಮ್ಮನಿಗೆ ತೃಪ್ತಿಯಾಗಿಲ್ಲ. ಬಳ್ಳಾರಿಯ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ಗೆ ಹತ್ತು ಸಾವಿರದಂತೆ ಎರಡು ಬಾರಿ ದಾನ ನೀಡಿ ಎರಡು ಕೃತಿಗಳು ಹೊರಬರಲು ಅತ್ತಿಮಬ್ಬೆಯಂತೆ ನೆರವಾಗಿದ್ದಾಳೆ. ಹಲವಾರು ದೇವಸ್ಥಾನಗಳಿಗೆ ಅವಶ್ಯಕ ಸಾಮಗ್ರಿಗಳನ್ನು ಪತಿಯ ಸ್ಮರಣಾರ್ಥ ದಾನ ನೀಡಿದ್ದಾರೆ.

ಹಿಮಾಚಲಮ್ಮನ ಪ್ರತಿ ಕಾರ್ಯಕ್ಕೂ ಬೆನ್ನೆಲುಬಾಗಿ ನಿಂತು ಮಾರ್ಗದರ್ಶನ ಮಾಡುತ್ತಿರುವರೆಂದರೆ ಪ್ರಾಮಾಣಿಕ ಪ್ರಾಂಶುಪಾಲರೆಂದು ಖ್ಯಾತರಾದ **ಶ್ರೀ ರುದ್ರಪ್ಪ** ಜೊತೆಗೆ ಉಪನ್ಯಾಸಕರಾದ **ಶ್ರೀ ಯು. ಬಸವರಾಜ** ಮತ್ತು **ಜಾಧವ್**‌ರವರು. ಆಕೆಯನ್ನು ಮಾತನಾಡಿಸಿದರೆ, 'ನಾನೇನು ಕೊಟ್ಟಿಲ್ಲ ಬಿಡಿಸ್ವಾಮಿ' ಎನ್ನುತ್ತಾಳೆ. ಎಂತಹ ನಮ್ರತೆ ! ಎಂತಹ ಮಾದರಿ ! ಇದು ಎಲ್ಲರಿಗೂ ಸ್ಫೂರ್ತಿಯಾಗಲಿ.

**– ಪರಮೇಶ್ವರಯ್ಯ ಸೊಪ್ಪಿನಮಠ, ಶಿಕ್ಷಕರು**
ಬೆಂಗಳೂರು

## ಅನಿಸಿಕೆ

ಶಿಕ್ಷಣ ವಾರ್ತೆ ಶೈಕ್ಷಣಿಕ ಪತ್ರಿಕೆಯು ಅತ್ಯುತ್ತಮವಾಗಿ ಮೂಡಿ ಬರುತ್ತಿದೆ. ಶಿಕ್ಷಕ ವರ್ಗಕ್ಕೆ ಅಗತ್ಯವಾದ ಅಂಶಗಳನ್ನು (ಬೌದ್ಧಿಕವಾಗಿಯೂ) ಅರಿವು ಮಾಡಿಕೊಡುತ್ತಿದೆ. ತಮಗೂ ಹಾಗೂ ಸಂಪಾದಕ ಮಂಡಲಿಯವರೆಲ್ಲರಿಗೂ ಅಭಿನಂದನೆಗಳು. ಶೈಕ್ಷಣಿಕವಾದ ವಿಶಿಷ್ಟ ಸಲಹೆ ಸೂಚನೆ ಕಾನೂನು ನಿಯಮಗಳು, ಜತೆಜತೆಯಲ್ಲಿ ಸಾಹಿತ್ಯಾತ್ಮಕ ಸೌರಭವನ್ನು ಹೊತ್ತು ತರುತ್ತಿರುವುದು ಪತ್ರಿಕೆ ಶಿಕ್ಷಕರಿಗೆ ಮಾರ್ಗಸೂಚಿಯೂ ಹೌದು. ಪ್ರತಿ ಸಂಚಿಕೆಯ ಕವನಗಳು ತುಂಬಾ ಅಪ್ಯಾಯಮಾನವಾಗಿರುತ್ತದೆ. ಅರ್ಥಪೂರ್ಣವಾಗಿಯೂ ಕೂಡಿರುತ್ತವೆ.

**ಸುಶೀಲಾಸೋಮಶೇಖರ್**
ಚೇತನಾ ಪ್ರೌಢಶಾಲೆ, ಸಕಲೇಶಪುರ

"ಶಿಕ್ಷಣ ವಾರ್ತೆ" ಪತ್ರಿಕೆ "ರಾಜ್ಯ ಶಿಕ್ಷಕರ ಕೈಗನ್ನಡಿಯಾಗಿದೆ" ನಾನೂ ನನ್ನ ಲೇಖನ ಬರಲಿ ಎಂಬ ಉದ್ದೇಶದಿಂದ ಪ್ರಶಂಸಿಸುತ್ತಿಲ್ಲ ಇದು ನನ್ನ ಮನದಾಳದ ಮಾತು. ಏಕೆಂದರೆ ಇಲಾಖೆಯ ಅನೇಕ ಆದೇಶಗಳು ಶಿಕ್ಷಕರಿಗೆ ನೋಡಲು ತಿಳಿದುಕೊಳ್ಳುವಲ್ಲಿ ಕಾರ್ಯಾಲಯದಿಂದ ತುಂಬಾ ತೊಂದರೆ ಉಂಟಾಗುತ್ತಿತ್ತು. ಈಗ ತುಂಬಾ ಸರಳವಾಗಿದೆ. ಆಡಳಿತಕ್ಕೆ ತಟ್ ಅಂಥ ಉತ್ತರ ಸಿಗುತ್ತೆ.

ಅಧಿಕಾರಿಗಳ ವಿಚಾರಕ್ಕೆ ತಕ್ಕಂತೆ ಕೆಳಹಂತದಿಂದ ಬದಲಾವಣೆಗೆ ಸುಲಭ ಮಾರ್ಗದರ್ಶಿ ಶಿಕ್ಷಣ ವಾರ್ತೆ ಈ ಪತ್ರಿಕೆ ಎಂದಿಗೂ ಸ್ಥಗಿತಗೊಳ್ಳದಿರಲು ವಿನಂತಿಸಿಕೊಳ್ಳುತ್ತೇನೆ.

**ಮಧುಸೂದನ ಮು.ಶಿ**
ಸಹಿಪ್ರಾಶಾಲೆ ಎಂ.ಪಿ. ಪ್ರಕಾಶ್‌ನಗರ, ಹೊಸಕೋಟೆ

**Government of Karnataka**

No. ED. 53 Sl. B 200/

Karnataka Government Secretariat,
M.S. Building,
Bangalore, Date : 17th July 2007

## Notification

The draft of the following rules further to amend the Karnataka Educational Institutions (Recruitment and terms and conditions of service of employees in Private Aided Primary and Secondary Educational Institutions) Rules, 1999 which the Government of Karnataka proposes to make in exercise of the powers conferred by sub-section (I) of section 145 of the Karnatka Education Act. 1983 (Karnataka Act 1 of 1995), is hereby published as required by sub-section(1) of section 145 of the said Act, for the information of the persons likely to be affected thereby and notice is hereby given that the said draft will be taken into consideration after thirty days from the date of its publication in the Official Gazette.

Any objection or suggestion which may be received by the State Government from any person with respect to said draft before the expiry of the period specified above, will be considered by the State Government . Objections and suggestions may be addressed to the Secretary to Government (Primary and Secondary Education) Education Department, M.S. Building, Bangalore-560 001.

## Draft Rules

1. Title and commencement : 1) These rules may be called the Karnataka Educational Institutions (Recruitment and terms and conditions of employees in Private Aided Primary and Secondary Educational Institutions) (Amendment) Rules, 2007.

2. Amendment of rule 20 : In the Karnataka Educational Institutions (Recruitment and terms and conditions of service of employees in Private Aided Primary and Secondary Educational Institutions) Rules 1999 (hereinafter referred to as the said rules) in rule 20, in sub-rule(1) after clause (b), the following shall be inserted, namely :-

''(c) Prior approval of the Competent Authority. After verifying the record of proceedings and satisfying itself about the procedure followed by the disciplinary authority the Competent Authority may communicate.

therein, within thirty days, failing which the approval of the competent Authority shall be deemed to have been granted'.

3. Amendment of rule 21: In rule 21 of the said rules, rule, for sub-rule(2), the following shall be substituted, namely :-

"(2) Wherever the diciplinary authority is of the opinion that there are grounds for inquiring into the truth of any imputation of misconduct or misbehaviour of breach of any provisions of the code of conduct specified in Chapter-IV against an employee, it shall appoint an enquiry committee consisting of more than one person of whom one shall be an officer to be nominated by the jurisdictional Deputy Director, Department of Public Insturction, in which the school where such employee is working, is located. While appointing such an enquiry committee, the disciplinary authority shall send a proposal to the Deputy Director concerned seeking nomination of an officer. It shall be the duty of the officer so nominated to be present whenever the enquiry committee meets to conduct the enquiry/hearing and ensure that the enquiry committee complies with all the requirements prescribed by rules while conducting the enquiry''.

By order and in the name of the Governor of Karnataka

**(M.M. Hiremath)**

Under secretary to Government, Education Department

# ನಮ್ಮೂರ ಶಾಲೆ



ಅಮ್ಮ ನಾನು ಹೋಗತೀನಿ
ನಮ್ಮ ಊರ ಶಾಲೆಗೆ
ತುತ್ತನಿಟ್ಟು, ಮುತ್ತಕೊಟ್ಟು
ಕಳಿಸು ಬಾರೆ ಅಲ್ಲಿಗೆ.

ಊಟ ಬೇಡ ಮಧ್ಯಾಹ್ನಕೆ
ಹೊಲಕೆ ಹೋಗೆ ದುಡಿಯಲು
ಚಿಂತೆಬೇಡ ನನ್ನ ಬಗ್ಗೆ
ಬಿಸಿಯೂಟವಿದೆ ತಿನ್ನಲು


ಕಷ್ಟಬೇಡ ನಿನಗೆ ಅಮ್ಮ
ಬುಕ್, ಬಟ್ಟೆ ಕೊಡಿಸಲು
ಕೊಡುವರಲ್ಲೆ ಎಲ್ಲವನ್ನು
ನಿನ್ನ ಬವಣೆ ಕಳೆಯಲು

ಬೇಸರವು ಬೇಡ ಅಮ್ಮ
ಎ ಬಿ ಸಿ ಡಿ ಕಲಿಯುವೆ
ಕನ್ನಡದ ಜೊತೆಯಲ್ಲಿಯೇ
ಆಂಗ್ಲಭಾಷೆ ತಿಳಿಯುವೆ.

ಏನು ಬೇಕು ಹೇಳು ಇನ್ನು
ನಾನು ಶಾಲೆಗೆ ಹೋಗಲು
ಆಟ, ಪಾಠ ಎಲ್ಲ ಉಂಟು
ಗೆಳೆಯರುಂಟು ಕಲಿಯಲು.

**– ಮಂಜುಳಾ ಹೆಚ್.ಇ.**
ಸಹ ಶಿಕ್ಷಕಿ, ಸ.ಹಿ.ಪ್ರಾ.ಶಾಲೆ ನಿಡೂಡಿ, ಹಾಸನ ಜಿಲ್ಲೆ.


## ಓದಿನ ಮನೆ



**ರಂಗಸಂಸ್ಥಾನ** : ಜಾನಪದ ಕಲೆ, ಗೀತೆಗಳ ತರಬೇತಿ ಸಂಸ್ಥೆಯಾಗಿ ಕೆಲಸ ನಿರ್ವಹಿಸುತ್ತಿರುವ 'ರಂಗಸಂಸ್ಥಾನ' ಸಂಸ್ಥೆ **'ಜಾನಪದ ಸಂಚಾರ–2007'** ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಪ್ರೌಢಶಾಲೆಗಳಲ್ಲಿ ಜನಪದ ಗೀತೆಗಳ ಗಾಯನ, ವಿವರಣೆ, ಪ್ರದರ್ಶನ ಕಲೆಗಳ ತರಬೇತಿಗಾಗಿ ಗಾಯಕ ಬಂಡ್ಲಹಳ್ಳಿ ವಿಜಯಕುಮಾರ ಇವರನ್ನು ಸಂಪರ್ಕಿಸಬಹುದು.

**ವಿಳಾಸ :** 565, 1ನೇ ಮಹಡಿ, 16ನೇ ಮುಖ್ಯ ರಸ್ತೆ,
3ನೇ ಹಂತ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಮಂಜುನಾಥನಗರ,
ಬೆಂಗಳೂರು–10, ದೂರವಾಣಿ : 080–2323512; ಸೆಲ್ 9448331481

– ಸಂ.





# ಗದಗ ಜಿಲ್ಲಾ ಶೈಕ್ಷಣಿಕ ವರದಿ



ಎನ್.ಎಚ್.ಕಟಕ್ ದೋಂಡ್
ಉಪನಿರ್ದೇಶಕರು,ಗದಗ

## ಐತಿಹಾಸಿಕ ಹಿರಿಮೆ :

ವೀರನಾರಾಯಣನ ಭಕ್ತ ಕುಮಾರವ್ಯಾಸ ಗದುಗಿನ ಹೆಮ್ಮೆಯಕವಿ. ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು ಎಂಬ ಪಂಕ್ತಿ ರೂಪಕ ಸಾಮ್ರಾಜ್ಯದ ಚಕ್ರವರ್ತಿ ಹಾಗೂ ಭಾಮಿನಿ ಷಟ್ಪದಿ ಜನಕ ಕವಿ ಕುಮಾರವ್ಯಾಸನ ಬಗ್ಗೆ ಹೇಳಿದ ಅಭಿಮಾನಪೂರಕ ಮಾತು.

ಶ್ರೀ ವೀರನಾರಾಯಣ ದೇವಸ್ಥಾನವು ಗದಗ ನಗರದಲ್ಲಿದೆ. ಜೈನ ಬಸದಿ ಮತ್ತು ಬ್ರಹ್ಮ ದೇವರ ದೇವಸ್ಥಾನಗಳು ಲಕ್ಕುಂಡಿಯಲ್ಲಿ ಉತ್ತಮ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವವಲ್ಲದೆ ವಾಸ್ತುಶಿಲ್ಪದ ವೈಭವವನ್ನು ಮೆರೆದಿವೆ. ಪ್ರತಿವರ್ಷವೂ ಫೆಬ್ರುವರಿ/ಮಾರ್ಚ್‌ನಲ್ಲಿ ಲಕ್ಕುಂಡಿ ಉತ್ಸವವನ್ನು ವಿಜೃಂಭಣೆಯಿಂದ ಜಿಲ್ಲಾ ಆಡಳಿತವು ನಡೆಸುತ್ತದೆ. ಶ್ರೀ ಸದ್ಗುರು ತೋಂಟದಾರ್ಯ ಮಠವು ಜಿಲ್ಲೆಯ ಪ್ರಸಿದ್ಧ ಹಾಗೂ ಪ್ರೇಕ್ಷಣೀಯ ಸ್ಥಳವಾಗಿದೆ. 1905 ರಲ್ಲಿ ದೇಶದಲ್ಲಿಯೇ ಪ್ರಥಮವಾಗಿ ಸಹಕಾರ ಸಂಘದ ಸ್ಥಾಪನೆಯಾದದ್ದು ಗದುಗಿನಲ್ಲಿ. ಶಿಕ್ಷಣ ಕ್ಷೇತ್ರದಲ್ಲಿಯೂ ತನ್ನ ಹಿರಿಮೆಯನ್ನ ಈ ಜಿಲ್ಲೆ ತನ್ನದಾಗಿಸಿಕೊಂಡಿದೆ. ಸಾವಿರದ ಎಂಟನೂರ ಎಪ್ಪತ್ತೊಂದರಲ್ಲಿಯೇ ಪ್ರಾರಂಭಗೊಂಡು ಶತಮಾನ ದಾಟಿದ ಶಾಲೆಗಳಿವೆ.



ವರದಿ : ಎನ್.ಎಚ್. ನಾಗೂರ
ಶಿಕ್ಷಣಾಧಿಕಾರಿಗಳು,
ಉಪನಿರ್ದೇಶಕರ ಕಚೇರಿ, ಬಾಗಲಕೋಟೆ

## ಭೌಗೋಳಿಕ ಪರಿಚಯ :

ಗದಗ ಜಿಲ್ಲೆ ಭೌಗೋಳಿಕವಾಗಿ 4,65,715 ಹೆಕ್ಟೇರ್ ಭೂ ಪ್ರದೇಶವನ್ನು ಹೊಂದಿ 4,08,433 ಹೆಕ್ಟೇರ್ ಜಮೀನು ಸಾಗುವಳಿಗೆ ಯೋಗ್ಯವಾಗಿದೆ. 64,073 ಹೆಕ್ಟೇರ್ ಜಮೀನು ನೀರಾವರಿ ಇರುವುದು. ಜಿಲ್ಲೆಯಲ್ಲಿ ಪ್ರತಿವರ್ಷವೂ ಸರಾಸರಿಯಾಗಿ 785 ಮಿ.ಮಿ. ರಷ್ಟು ಮಳೆ ಬೀಳುತ್ತಿದೆ. ಉತ್ತರ ಭಾಗದಲ್ಲಿ ಮಲಪ್ರಭಾ ನದಿ, ದಕ್ಷಿಣ ಭಾಗದಲ್ಲಿ ತುಂಗಭದ್ರಾ ನದಿಗಳಿವೆ. ಗದಗ ಜಿಲ್ಲೆಯ ಹುಲಕೋಟಿ ಎಂಬ ಸ್ಥಳವು ಔದ್ಯೋಗಿಕ ಕ್ರಾಂತಿಗೆ ಕಾರಣೀಭೂತವಾಗಿದೆ. ಜಿಲ್ಲಾ ಕೇಂದ್ರ ಸ್ಥಳದಲ್ಲಿ ನೂರಕ್ಕಿಂತಲೂ ಹೆಚ್ಚು ಪುಸ್ತಕ ಮುದ್ರಣಾಲಯಗಳಿವೆ. ಉತ್ತರ ಕರ್ನಾಟಕದ ಕವಿಗಳು, ಲೇಖಕರು ತಮ್ಮ ಪುಸ್ತಕಗಳನ್ನು ಮುದ್ರಿಸಲು ಗದಗಿಗೆ ಆಗಮಿಸುವುದು ಸಹಜ ಸತ್ಯವಾಗಿದೆ. ಸುಮಾರು 150 ಔದ್ಯೋಗಿಕ ಘಟಕಗಳನ್ನು ಹೊಂದಿದೆ. ಗದಗ-ಬಿಜಾಪುರ ಬ್ರಾಡ್‌ಗೇಜ್ ಆರಂಭವಾದರೆ ಮತ್ತೆ ಕೈಗಾರಿಕೆಗೆ ಹೊಸಚೇತನ ಬಂದಂತಾಗುತ್ತದೆ.

1997 ನವೆಂಬರ್ ತಿಂಗಳಿನಲ್ಲಿ ಅಖಂಡ ಧಾರವಾಡ ಜಿಲ್ಲೆಯಿಂದ ಬೇರ್ಪಡೆಯಾಗಿ ಗದಗ, ಹಾವೇರಿಗಳು ಸ್ವತಂತ್ರ್ಯ ಜಿಲ್ಲೆಗಳಾಗಿ ಅಸ್ತಿತ್ವಕ್ಕೆ ಬಂದವು. ಅಖಂಡ ಜಿಲ್ಲೆಯಾಗಿದ್ದಾಗಲೂ ಸಹ ಗದಗ-ಬೆಟಗೇರಿ ಎಂಬುದು ದೊಡ್ಡ ನಗರವಾಗಿಯೇ ಇತ್ತು. ಗದಗ ಜಿಲ್ಲೆಯು 5 ಕಂದಾಯ ತಾಲ್ಲೂಕುಗಳನ್ನು, 6 ಶೈಕ್ಷಣಿಕ ತಾಲ್ಲೂಕುಗಳನ್ನು ಹೊಂದಿದೆ. ಅವು ಗದಗ ನಗರ, ಗದಗ ಗ್ರಾಮೀಣ, ರೋಣ, ನರಗುಂದ, ಶಿರಹಟ್ಟಿ, ಮತ್ತು ಮುಂಡರಗಿ. 106 ಗ್ರಾಮ ಪಂಚಾಯತಿಗಳಿವೆ. 187 ವಾರ್ಡ್‌ಗಳು, ಒಟ್ಟು 360 ಜನವಸತಿ ಪ್ರದೇಶಗಳನ್ನು ಹೊಂದಿದೆ. ಜಿಲ್ಲೆಯಲ್ಲಿ 4,93, 795 ಗಂಡು, 4,78,160 ಹೆಣ್ಣು ಒಟ್ಟು 9,71,955 ಜನಸಂಖ್ಯೆಯನ್ನು ಹೊಂದಿದೆ. ಸಾಕ್ಷರತೆ ಪ್ರಮಾಣ : ಗ್ರಾಮೀಣ ಪ್ರದೇಶ ಗಂಡು 7664, ಹೆಣ್ಣು 4636 ಒಟ್ಟು 12300 ನಗರ ಪ್ರದೇಶ ಗಂಡು 8483, ಹೆಣ್ಣು 6394 ಒಟು 14877 ಹಾಗೂ ಜಿಲ್ಲೆಯ ಒಟ್ಟಾರೆ ಸಾಕ್ಷರತೆ ಪ್ರಮಾಣ ಗಂಡು 7955, ಹೆಣ್ಣು 5258 ಒಟ್ಟು 13213 ಇರುತ್ತದೆ. 1000 ಗಂಡು ಮಕ್ಕಳಿಗೆ 968 ಹೆಣ್ಣುಮಕ್ಕಳಿದ್ದು ಜಿಲ್ಲಾ ಲಿಂಗ ತಾರತಮ್ಯವಿದೆ. ರಾಷ್ಟ್ರೀಯ ಹೆದ್ದಾರಿ 63ಯು ಗದಗ-ಅಂಕೋಲಾ ಮಾರ್ಗವನ್ನು ಹೊಂದಿದೆ.

## ಜಿಲ್ಲೆಯ ಸ್ಮರಣೀಯರು :

ಡಾ॥ ಪುಟ್ಟರಾಜ ಗವಾಯಿಗಳು, ಹುಯಲಗೋಳ ನಾರಾಯಣರಾಯರು, ದಾನಚಿಂತಾಮಣಿ ಅತ್ತಿಮಬ್ಬೆ, ಭೀಮಸೇನ ಜೋಶಿ, ಗರುಡ ಸದಾಶಿವರಾಯ, ವಿರುಪಾಕ್ಷಪ್ಪ ಅಬ್ಬಿಗೇರಿ, ಅಂದಾನಪ್ಪ ದೊಡ್ಡಮೇಟಿ, ಮುಂಡರಗಿ ಜಗದ್ಗುರುಗಳು, ಹೊಳಲಮ್ಮದೇವಿ, ಲಕ್ಷ್ಮೇಶ್ವರದ ಸೋಮನಾಥ, ಆದಯ್ಯ ಮುಂತಾದವರು.

## ಶೈಕ್ಷಣಿಕ ಪರಿಚಯ :

ಅಮೋಘ ಕಾವ್ಯ ಕನ್ನಿಕೆಯ ದೃಢಪರಂಪರೆಯನ್ನು ಹೊಂದಿದ ಗದಗ ಜಿಲ್ಲೆಯು ಶೈಕ್ಷಣಿಕವಾಗಿಯೂ ತನ್ನ ವಿಶಿಷ್ಟ ಛಾಪನ್ನು ಒತ್ತಿದೆ. ಕಲಿಕೆ-ಬೋಧನೆ ಚಟುವಟಿಕೆಗಳು ನಿರಂತರವಾಗಿ ನಡೆದ ಶಿಕ್ಷಣದ ಪ್ರಗತಿಯ ಪ್ರತೀಕ ಗದಗ ಜಿಲ್ಲೆ. ಕೆ.ಎಸ್.ಕ್ಯೂ.ಎ.ಪಿ ಫಲಿತಾಂಶದಲ್ಲಿ ಉತ್ತಮ ಸಾಧನೆ ಮಾಡಿದೆ.

## ಶೈಕ್ಷಣಿಕ ಸಂಸ್ಥೆಗಳು :

ಜಿಲ್ಲೆಯಲ್ಲಿ 68-ಅಂಗನವಾಡಿ ಕೇಂದ್ರಗಳು, 272-ಪ್ರಾಥಮಿಕ ಶಾಲೆಗಳು, 462-ಹಿರಿಯ ಪ್ರಾಥಮಿಕ ಶಾಲೆಗಳು, 205-ಪ್ರೌಢ ಶಾಲೆಗಳು, 32-ಪದವಿ ಪೂರ್ವ ಕಾಲೇಜುಗಳು, 17-ಪದವಿ ಮಹಾವಿದ್ಯಾಲಯಗಳು, 02-ಪಾಲಿಟೆಕ್ನಿಕ್‌ಗಳು, 03-ಇಂಜಿನಿಯರಿಂಗ್ ಕಾಲೇಜ್, 04- ಬಿ.ಇಡಿ ಕಾಲೇಜುಗಳು, 09-ಡಿ.ಇಡಿ ಕಾಲೇಜುಗಳು, 06 ತಾಂತ್ರಿಕ ಸಂಸ್ಥೆಗಳು ಹಾಗೂ 1 ಸರಕಾರಿ ಡಯಟ್ ಸಂಸ್ಥೆ, ಬಿ.ಆರ್.ಸಿ-05, ಸಿ.ಆರ್.ಪಿ-42.

## 2007ರ ಮಾರ್ಚ್ ಎಸ್.ಎಸ್.ಎಲ್.ಸಿ. ಫಲಿತಾಂಶದ ವಿವರ

ಜಿಲ್ಲೆಯಲ್ಲಿ 2007ರ ಮಾರ್ಚ್‌ನಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾದ ಮಕ್ಕಳು 13476 ಉತ್ತೀರ್ಣರಾದವರು 11137 ಶೇಕಡಾ ಫಲಿತಾಂಶ 82.64 ಅತ್ಯುನ್ನತ ಶ್ರೇಣಿ 464, ಪ್ರಥಮ 5354, ದ್ವಿತೀಯ 3144 ಹಾಗೂ ತೃತೀಯ 2175 ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

## ಶೇ. 100 ರಷ್ಟು ಫಲಿತಾಂಶ ಪಡೆದ ಶಾಲೆಗಳು

### ತಾಲ್ಲೂಕಿನ ಹೆಸರು ಶಾಲೆಯ ಹೆಸರು

1 ಗದಗ ನಗರ ಸಿ.ಡಿ.ಓ. ಜೈನ ಪ್ರೌಢ ಶಾಲೆ, ಗದಗ ಶಹರ, 2 ಗದಗ ನಗರ ಗಣೇಶ ಲಯನ್ಸ್ ಪ್ರೌಢ ಶಾಲೆ, ಗದಗ ಶಹರ, 3 ಗದಗ ನಗರ ಸೇಂಟ್ ಜಾನ್ ಪ್ರೌಢ ಶಾಲೆ ಗದಗ ಶಹರ,4 ಗದಗ ನಗರ ಬಿ.ಸಿ. ಆಂಗ್ಲ ಪ್ರೌಢ ಶಾಲೆ, ಗದಗ ಶಹರ, 5 ಗದಗ ನಗರ ಸರಕಾರಿ ಪ್ರೌಢ ಶಾಲೆ, ಕೃಷ್ಣಾನಗರ, ಆಶ್ರಯ ಕಾಲೋನಿ ಗದಗ ಶಹರ, 6 ಗದಗ ನಗರ ಕೇಂಬ್ರಿಡ್ಜ್ ಪ್ರೌಢ ಶಾಲೆ, ಗದಗ ಶಹರ, 7 ಗದಗ ನಗರ ನೆಹರು ಪ್ರೌಢ ಶಾಲೆ, ಗದಗ ಶಹರ, 8 ಗದಗ ಗ್ರಾಮೀಣ ಎಚ್.ಸಿ.ಇ. ಎಸ್. ಪ್ರೌಢ ಶಾಲೆ, ಹರ್ತಿ, 9 ಮುಂಡರಗಿ ಕೆ.ಕೆ.ಎನ್. ಪ್ರೌಢ ಶಾಲೆ, ಹಿರೆವಡ್ಡಟ್ಟಿ, 10 ಮುಂಡರಗಿ ಜೆ.ಎ.(ಆಂಗ್ಲ) ಪ್ರೌಢ ಶಾಲೆ, ಮುಂಡರಗಿ, 11 ಮುಂಡರಗಿ ಸರಕಾರಿ ಪ್ರೌಢ ಶಾಲೆ, ಬಿದರಳ್ಳಿ, 12 ರೋಣ ಸರಕಾರಿ ಪ್ರೌಢ ಶಾಲೆ, ಗೋಗೇರಿ, 13 ರೋಣ ವಿ.ಟಿ. ರಾಯಬಾಗಿ ಪ್ರೌಢ ಶಾಲೆ, ಗಜೇಂದ್ರಗಡ, 14 ರೋಣ ಪಿ.ಎಸ್.ಎಸ್. ಪ್ರೌಢ ಶಾಲೆ, ನಗೇಗಲ್ಲ, 15 ರೋಣ ಎಚ್ಚರೇಶ್ವರ ಪ್ರೌಢ ಶಾಲೆ, ಹೊಳೆಆಲೂರು, 16 ರೋಣ ನ್ಯೂ ಲಿಟಲ್ ಫ್ಲಾವರ್ ಪ್ರೌಢ ಶಾಲೆ, ರೋಣ, 17 ಶಿರಹಟ್ಟಿ ಎಸ್.ಜೆ.ಬಿ. ಪ್ರೌಢ ಶಾಲೆ, ಹೊಳೆ–ಇಟಗಿ, 18 ಶಿರಹಟ್ಟಿ ಕೆ.ಜೆ.ಎಂ. ಪ್ರೌಢಶಾಲೆ, ಶಿಗ್ಲಿ, 19 ಶಿರಹಟ್ಟಿ ಬಿ.ಸಿ.ಎನ್. ರೋಟರಿ (ಆಂಗ್ಲ) ಪ್ರೌಢ ಶಾಲೆ, ಲಕ್ಷ್ಮೇಶ್ವರ, 20 ಶಿರಹಟ್ಟಿ ಸರಕಾರಿ ಪ್ರೌಢ ಶಾಲೆ ಕೋಗನೂರ,

### * ಜಿಲ್ಲೆಯಲ್ಲಿ ಶತಮಾನ ಕಂಡ ಸರಕಾರಿ/ ಅನುದಾನಿತ ಪ್ರಾಥಮಿಕ ಶಾಲೆಗಳು

1) ಗದಗ ಶಹರ : ಬಿ.ಎಂ.ಟಿ.ಸಿ. ಹಿಪ್ರಾಶಾ ಬೆಟಗೇರಿ ತೋಂಟದಾರ್ಯ ಪ್ರಾ.ಶಾ. ಗದಗ, ಉಹಿಪ್ರಾಶಾ ನಂ. 1 ಬೆಟಗೇರಿ ಮುನ್ಸಿಪಲ್ ಪಿ.ಯು. ಕಾಲೇಜು ಗದಗ, ಅಮನ್ ಶಾಲೆ, ಗದಗ, ಸಿಡಿಓ ಜೈನ ಆ ಮಾ ಶಾಲೆ, ಗದಗ. 2) ಗದಗ ಗ್ರಾಮೀಣ : ಹಿಪ್ರಾಶಾಲೆ–ನಾಗಾವಿ,ಬಳಗಾನೂರ, ದುಂಡೂರ, ಕನಗಿಹಾಳ, ಹರ್ತಿ, ನಾಗಾವಿ(ಎನ್.ಸಿ.) ಎಸ್.ಸಿ.ಸಿ.ವ್ಹಿ.ಸಿ ಬಳಗಾನೂರ, ಹಿರೇಹಂಡಿಗೋಳ, ಕಳಸಾಪುರ, ಚಿಕ್ಕಹಂಡಿಗೋಳ, ನರಸಾಪುರ (ಎ.ಸಿ.) ಕಣವಿ,
ಲಿಂಗದಾಳ, ಉರ್ದು ಕಳಸಾಪುರ, ಪಾಂಡುರಂಗಪುರ, ಶಾಗೋಟಿ, ಕೆ.ಜಿ.ವಿ. ಕಣವಿ, ಬ್ರಹ್ಮಾನಂದಪುರ (ಬಿಟಿ), ಜನತಾ ಕಾಲೋನಿ, ಹುಲಕೋಟಿ, ಹರ್ಲಾಪುರ, ನೀಲಗುಂದ, ಬೆಳಧಡಿ, ಹುಲಕೋಟಿ(ಮಿಲ್), ತಿಮ್ಮಾಪುರ, ಚಿಂಚಲಿ, ಹೊಸೂರ, ಹುಯಿಲಗೋಳ, ಎಂಪಿಎಸ್ ಹುಲಕೋಟಿ, ಅಡವಿಸೋಮಾಪುರ(ಎಸ್.ಟಿ.), ಕಲ್ಲೂರ, ಶಿರುಂಜಾ(ಜೆ.ಸಿ.) ಬಿಂಕದಕಟ್ಟಿ, ಜಲಶಂಕರ ನಗರ ( ಎ.ಡಿ.ಟಿ), ಮುಳಗುಂದ, ಹೊಂಬಳ, ಯಲಿಶಿರೂರ, ಆಸುಂಡಿ, ಲಕ್ಕುಂಡಿ, ನಂ. 2 ಮುಳಗುಂದ, ಎಮ್.ಪಿ.ಎಸ್. ಲಕ್ಕುಂಡಿ, ಸೊರಟೂರ, ಹಿರೇಕೊಪ್ಪ, ಕುರ್ತಕೋಟಿ, ಎಸ್. ಎಸ್.ವ್ಹಿ. ವಿವೇಕಾನಂದ ಶಾಲೆ, ಲಕ್ಕುಂಡಿ, ಬಿಸಿಬಿಪಿಎಸ್. ಮುಳಗುಂದ, ಎಮ್.ಪಿ.ಎಸ್. ಕೊಟುಮಚಗಿ, ಬೆಂಟೂರ.
ಮುಂಡರಗಿ : ಹಿಪ್ರಾಶಾಲೆ ಕಲಕೇರಿ, ಮುಂಡರಗಿ, ಶಿಂಗಟಾಲೂರು, ಪೇಟಾಲೂರ, ಬಾಗೇವಾಡಿ, ಹಿರೇವಡ್ಡಟ್ಟಿ, ಕೊರ್ಲಹಳ್ಳಿ, ಶಿರೂರ, ಮಾರುತಿನಗರ ( ಮುರಡಿ ಟಿ), ಚುರ್ಚಿಹಾಳ, ಡಂಬಳ.
4. ನರಗುಂದ : ಕನಕಿಕೊಪ್ಪ, ಚಿಕ್ಕನರಗುಂದ, ಸುರಕೋಡ, ಕೊಣ್ಣೂರ, ನರಗುಂದ, ಶಿರೋಳ, ಜಗಪೂರ, ನಂ. 6, ನಂ. 3, ನಂ. 4 ನಂ. 5 ನರಗುಂದ, ಕಲ್ಲಾಪುರ, ಬುದಿಹಾಳ, ಹಿರೇಕೊಪ್ಪ, ಜಗಪೂರ ಪ್ಲಾಟ್, ಅರಿಷಿನಗೋಡಿ, ಸಿದ್ದಾಪುರ, ಆರ್.ಕೆ.ಹಿಪ್ರಾಶಾ ನರಗುಂದ ಹದಲಿ, ಹುನಸಿಕಟ್ಟಿ, ಜಿಎಲ್‌ಪಿಯುಎಸ್. ನರಗುಂದ.
5. ರೋಣ : ಹಿಪ್ರಾಶಾ ಮಲ್ಲಾಪುರ, ವಿಜಯ ಮಹಾಮಹಾಂತೇಶ ಕನ್ನಡ ಶಾಲೆ, ರೋಣ, ಹೊಳೆಹಡಗಲಿ, ನರೇಗಲ್ ಕೊದಗಾನೂರ, ಹೆಮಹಿಪ್ರಾಶಾ ರೋಣ, ಸೂಡಿ, ಅರಹುಣಸಿ, ವೀರಾಪುರ, ಎಮ್.ಪಿ.ಎಸ್. ರೋಣ, ಮಾರನಬಸರಿ, ವೆಳವೆಣಕಿ, ಗಜೇಂದ್ರ, ಹೊಸಹಳ್ಳಿ, ಬೂದಿಹಾಳ, ಕೌಜಗೇರಿ, ನಂ. 6 ಗಜೇಂದ್ರಗಡ, ಪುರಥಹಗೇರಿ,ಗುಜಮಾಗಡಿ, ಜಿಗಲೂರ, ಜಕ್ಕಲಿ, ಯಾವಗಲ್, ಹೆ ಮ ಮಾ ಪ್ರಾಶಾ ಗಜೇಂದ್ರಗಡ, ಜಿಎಂಸಿಎಸ್ ಹೊಳೆಆಲೂರು, ಬೈರಾಪುರ ತಂಡೆ, ಸವಡಿ, ತಳಿಹಾಳ, ಗುಲಗಲಿ, ನಂ. 3 ಗಜೇಂದ್ರಗಡ, ಎಸ್.ವೈ.ಹಿಪ್ರಾಶಾ ಹೊಳೆಆಲೂರ, ಗೊಗೇರಿ, ಕುರಹಟ್ಟಿ, ಇಟಗಿ, ಉಣಚಗೇರಿ, ಕೊಡಿಕೊಪ್ಪ, ನಾಗರಸಿಕೊಪ್ಪ, ಮುದ್ದೇನಗುಡಿ, ಅಬ್ಬಿಗೇರಿ, ಮುಳವಾಡ, ಗಜೇಂದ್ರಗಡ, ಗಡಗೋಳಿ, ಹೆಳಗೇರಿ, ರಾಜೂರ, ಚಿಕ್ಕಮಣ್ಣೂರ, ಬಲಗೋಡ, ಮಶಿಗೇರಿ, ಕಾಲಕಾಲೇಶ್ವರ, ಸವದಿ, ಯರಿಕುರುಬನಾಳ, ನಂ.4 ಗಜೇಂದ್ರಗಡ, ಹೊನ್ನಿಗನೂರ, ಚಿಕ್ಕಾಲಗುಂಡಿ, ಕರಮುಡಿ, ಕುಂಟೋಜಿ, ಮೆಣಸಗಿ, ನಿಡಗುಂದಿ, ಹಿರೇಮಣ್ಣೂರ, ಹಿರೇಹಳ, ನೆಲ್ಲೂರ, ಯರಿಬೆಲೇರಿ, ಮೇಲ್ಮಟ, ಮ್ಯಾಕಲ್ಜೇರಿ, ಸಂದಿಗವಾಡ, ಮದಲಗೇರಿ, ಶಾಂತಗೇರಿ.6. ಶಿರಹಟ್ಟಿ : ತೆಗ್ಗಿನಭಾವನೂರ, ಉಲ್ಲಟ್ಟಿ, ಕೆರಿಹಳ್ಳ, ಮಾದಳ್ಳಿ, ವಡ್ಡರ ಪಾಳ್ಯ, ರಣತೂರ, ಶಿಗ್ಲಿ, ವಡವಿ–ಹೊಸೂರು, ಯಳವತ್ತಿ, ಬಟ್ಟೂರ, ಬೆಳ್ಳಟ್ಟಿ, ಕೊಗನೂರ, ಮಾಗಡಿ, ಮಜ್ಜೂರ, ನಡಗತ್ತಿ, ಹೊಸಳ್ಳಿ( ಕಡಕೋಳ), ಬಡ್ನಿ, ಶ್ಯಾಬಳ, ಹೆಬ್ಬಾಳ, ಗೋಜನೂರ, ಛಬ್ಬಿ, ದೊಡ್ಡೂರ, ಅಕ್ಕಿಗುಂಡ, ಛಬ್ಬಿ ತಾಂಡೆ, ನಂ. 1 ಲಕ್ಷ್ಮೇಶ್ವರ, ಕೊಂಚಿಗೇರಿ, ನಂ. 2 ಲಕ್ಷ್ಮೇಶ್ವರ, ನಂ. 3 ಲಕ್ಷ್ಮೇಶ್ವರ, ಬಾಳೇಹೊಸೂರ, ಸುರಟಗಿ ತಾಂಡಾ, ಶಿರಹಟ್ಟಿ, ಸುರನಗಿ, ಬನ್ನಿಕೊಪ್ಪ, ಹೊಳೆಇಟಗಿ, ಎಪಿಎಂಪಿಸಿ ಯಾರ್ಡ ಲಕ್ಷ್ಮೇಶ್ವರ, ಖಾನಾಪುರ, ಹಳ್ಳೂರ, ಜನತಾ ಪ್ಲಾಟ, ಶಿರಹಟ್ಟಿ, ನಾಗರ ಮಡುವ.

### ಗದಗ ಜಿಲ್ಲೆಯ ಕ್ಷೇತ್ರಶಿಕ್ಷಣಾಧಿಕಾರಿಗಳು


ವಿ.ಟಿ.ಬೆನಕೊಪ್ಪ
ಕ್ಷೇತ್ರಶಿಕ್ಷಣಾಧಿಕಾರಿಗಳು
ಗದಗ ನಗರ


ಆರ್.ಎಚ್.ಶಿರಳ್ಳಿ
ಕ್ಷೇತ್ರಶಿಕ್ಷಣಾಧಿಕಾರಿಗಳು
ಶಿರಹಟ್ಟಿ


ಆರ್.ಎಸ್.ಬುರಡಿ
ಕ್ಷೇತ್ರಶಿಕ್ಷಣಾಧಿಕಾರಿಗಳು
ಮುಂಡರಗಿ


ಎಂ.ಎಂ.ಅಂಗಡಿ
ಕ್ಷೇತ್ರಶಿಕ್ಷಣಾಧಿಕಾರಿಗಳು
ರೋಣ


ಎಂ.ಎ.ರಡ್ಡೇರ
ಕ್ಷೇತ್ರಶಿಕ್ಷಣಾಧಿಕಾರಿಗಳು
ಗದಗ ಗ್ರಾಮೀಣ


ಮಂಗಳಾ ಬಿ.ಪಾಟೀಲ್
ಕ್ಷೇತ್ರಶಿಕ್ಷಣಾಧಿಕಾರಿಗಳು
ನರಗುಂದ



ತೋಂಟದಾರ್ಯ ಸರ್ಕಾರಿ ಮಾದರಿಶಾಲೆ

ಕ್ರಿ.ಶ.1871ರಲ್ಲಿ ಸರ್ಕಾರಿ ಮಾದರಿ ಕೇಂದ್ರ ಶಾಲೆ ಎಂದು ಪ್ರಾರಂಭಗೊಂಡ ಈ ಶಾಲೆ ಮೊದಲು ಊರಿನ ದೇವಸ್ಥಾನ ನಂತರ ಮಠ ಮುಂತಾದ ಕಡೆ ನಡೆಯುತ್ತಿತ್ತು. 1975ರಲ್ಲಿ ಗದಗಿನ ತೋಂಟದಾರ್ಯ ಶ್ರೀಗಳು ದಾನವಾಗಿ ನೀಡಿದ ಒಂದು ಎಕರೆ ಭೂಮಿಯಲ್ಲಿ ಈ ಶಾಲೆ 17 ಕೊಠಡಿಗಳೊಂದಿಗೆ ತಲೆ ಎತ್ತಿತು. 2-1-2005ರಂದು ತೋಂಟದಾರ್ಯ ಸರ್ಕಾರಿ ಮಾದರಿ ಕೇಂದ್ರ ಶಾಲೆ ಎಂದು ಪುನರ್ನಾಮಕರಣ ಗೊಂಡಿತ್ತು. ಈ ಶಾಲೆಯಲ್ಲಿ ಕಲಿತ ಹಳೆಯ ವಿದ್ಯಾರ್ಥಿಗಳು ರಾಜ್ಯ ಹಾಗೂ ರಾಷ್ಟ್ರಮಟ್ಟದ ಉನ್ನತ ಹುದ್ದೆಗಳಲ್ಲಿದ್ದಾರೆ.



ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸುರಕೋಡ

ಕ್ರಿ.ಶ.1885ರಲ್ಲಿ ಆರಂಭಗೊಂಡ ಈ ಶಾಲೆ ನರಗುಂದ ತಾಲ್ಲೂಕಿನ ಹಳೆಯ ಶಾಲೆಗಳಲ್ಲೊಂದು. ಈ ಶಾಲೆಯಲ್ಲಿ ಕಲಿತ ಅನೇಕ ಗಣ್ಯರಲ್ಲಿ ಸ್ವಾತಂತ್ರ ಹೋರಾಟಗಾರರು ಕರ್ನಾಟಕದ ಏಕೀಕರಣ ಹೋರಾಟದಲ್ಲಿ ಸಕ್ರಿಯ ಪಾತ್ರವಹಿಸಿದ್ದ ದಿ.ಅಂದಾನಪ್ಪ ದೊಡ್ಡಮೇಟಿಯವರು ಈ ಶಾಲೆಯ ಹಳೆಯ ವಿದ್ಯಾರ್ಥಿ ಎಂಬುದು ಈ ಶಾಲೆಯ ಹೆಮ್ಮೆ. ಮಾನ್ಯರು ಕರ್ನಾಟಕ ಸರ್ಕಾರದ ಸಣ್ಣ ನೀರಾವರಿ ಸಚಿವರೂ ಆಗಿದ್ದರು.

**ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮ :**

ಶಿಕ್ಷಕರ ಸಾಮರ್ಥ್ಯ ಬಲವರ್ಧನೆ, ಶಿಕ್ಷಕರ ನೇಮಕಾತಿ, ಮಕ್ಕಳನ್ನು ಶಾಲೆಗೆ ಕರೆತರುವುದು, ಶಿಕ್ಷಕರಿಗೆ, ಜನಪ್ರತಿನಿಧಿಗಳಿಗೆ ತರಬೇತಿಗಳು, ಜನಜಾಗೃತಿ ಕಾರ್ಯಕ್ರಮಗಳು, ಸರಕಾರಿ, ಅನುದಾನಿತ ಶಾಲೆಗಳಿಗೆ ಮತ್ತು ಶಿಕ್ಷಕರಿಗೆ ಅನುದಾನ ನೀಡಿ ಉತ್ತೇಜಿಸುವುದು. ಮಕ್ಕಳು ಶಾಲೆಗೆ ನಿಗದಿತವಾಗಿ ಹಾಜರಾಗಲು ಉಚಿತ ಪ್ರೋತ್ಸಾಹದಾಯಕ ಕಾರ್ಯಕ್ರಮಗಳಿವೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪರಿಹಾರ ಬೋಧನೆ ಮಾಡಲಾಗುತ್ತಿದೆ. ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಗುರುತಿಸಿ ವೈದ್ಯಕೀಯ ತಪಾಸಣೆ ನಡೆಸಿ ಅವರಿಗೆ ಸಾಮಗ್ರಿಗಳನ್ನು ನೀಡುವುದು. ಗೃಹ ಆಧಾರಿತ ಶಿಕ್ಷಣ ನೀಡುವುದು. ಹೆಣ್ಣುಮಕ್ಕಳ ಸಲುವಾಗಿಯೇ ವಿಶೇಷವಾಗಿ ಎನ್.ಪಿ.ಜಿ.ಇ.ಎಲ್. ಯೋಜನೆಯನ್ನು ಜಾರಿಗೆ ತಂದು ಮಹಿಳಾ ಸಬಲೀಕರಣ ಮಾಡುವ ಮಹತ್ವವಾದ ಕಾರ್ಯಕ್ರಮವೊಂದಿದೆ. ರಾಜ್ಯ ಹಾಗೂ ರಾಷ್ಟ್ರದ ಮಹಿಳಾ ಸಾಕ್ಷರತಾ ಪ್ರಮಾಣಕ್ಕಿಂತ ಕಡಿಮೆ ಶೇ. ಸಾಕ್ಷರತೆಯನ್ನು ಹೊಂದಿದ ತಾಲ್ಲೂಕುಗಳನ್ನು ಗುರುತಿಸಿ ಅಂತಹ ತಾಲ್ಲೂಕುಗಳಲ್ಲಿ ಕೆ.ಜಿ.ಬಿ.ವ್ಹಿ. ಶಾಲೆಯನ್ನು ತೆರೆಯಲಾಗಿದೆ. ಶಾಲೆಯು ಆಕರ್ಷಣೀಯವಾಗಿರಲೆಂದು ಪರಿಸರ ವಾಹಿನಿ ತೋಟ, ಮಕ್ಕಳ ವನ ಸಿ.ಎಫ್.ಇ. ನಲ್ಲಿ ಜಾರು ಬಂಡೆ, ನಿರ್ಮಿಸಲಾಗುತ್ತಿದೆ. ಹೊಸ ಶಾಲೆಗಳನ್ನು ಪ್ರಾರಂಭಿಸುವುದು. ಉನ್ನತೀಕರಿಸುವುದು ಅವುಗಳಿಗೆ ಬೇಕಾಗುವ ಶಿಕ್ಷಕರ ನೇಮಕಾತಿ ಮಾಡುವುದು ಶಾಲೆಗೆ ಅಗತ್ಯ ಇರುವ ಎಲ್ಲ ಹಂತದ ಸಿವಿಲ್ ಕಾಮಗಾರಿಗಳನ್ನು ಪೂರೈಸಿದೆ.

ಕಳೆದ ಮೂರು ವರ್ಷಗಳಿಂದ ಗದಗ ಜಿಲ್ಲೆಗೆ ಎಸ್.ಎಸ್.ಎ. ಯೋಜನೆಯಿಂದ ಅನುಮೋದಿತ ವಾರ್ಷಿಕ ಅನುದಾನ ಹಾಗೂ ಖರ್ಚಾದ ಅನುದಾನವು ಮತ್ತು ವಿವಿಧ ಸಿವಿಲ್ ಕಾಮಗಾರಿಗಳು ಮಂಜೂರಾಗಿದ್ದು ಶೇ. 95ರಷ್ಟು ಪೂರ್ಣಗೊಂಡಿವೆ. 2004-05ಕ್ಕೆ 687.79 ಲಕ್ಷ ಮಂಜೂರಾಗಿದ್ದು 676.49 ಖರ್ಚಾಗಿದೆ. 2005-06ಕ್ಕೆ 769.03 ಲಕ್ಷ ಮಂಜೂರಾಗಿದ್ದು 745.38 ಲಕ್ಷ ಖರ್ಚಾಗಿದೆ. 2006-07ಕ್ಕೆ 940.35 ಲಕ್ಷ ಮಂಜೂರಾಗಿದ್ದು 816.46 ಲಕ್ಷ ಖರ್ಚಾಗಿದೆ. 2004-05ರಲ್ಲಿ ಹೆಚ್ಚುವರಿ ಕೊಠಡಿಗಳು : 86, ಶೌಚಾಲಯಗಳು : 50, ಕುಡಿಯುವ ನೀರಿನ ಸೌಲಭ್ಯಕ್ಕಾಗಿ 80, ಕಂಪೌಂಡ್-60, ವಿದ್ಯುತ್ ಸೌಲಭ್ಯಕ್ಕಾಗಿ 60 ನೀಡಿದ್ದು ಈಗ ಎಲ್ಲವೂ ಪೂರ್ಣಗೊಂಡಿವೆ. 2005-06ರಲ್ಲಿ ಹೊಸ ಶಾಲಾ ಕಟ್ಟಡಗಳು 05, ಹೆಚ್ಚುವರಿ ಕೊಠಡಿಗಳು 134, ಶೌಚಾಲಯಗಳು 85, ಕಂಪೌಂಡ್ 80, ಬಾಲಾ 50 ವಿದ್ಯುತ್ ಸೌಲಭ್ಯಕ್ಕಾಗಿ 60 ನೀಡಿದ್ದು ಈಗ ಎಲ್ಲವೂ ಪೂರ್ಣಗೊಂಡಿವೆ. 2006-07ರಲ್ಲಿ ಹೊಸ ಶಾಲಾ ಕಟ್ಟಡಗಳು 12 ಹೆಚ್ಚುವರಿ ಕೊಠಡಿಗಳು 103, ನೀಡಿದ್ದು ಈಗ ಶೇ. 95% ಪೂರ್ಣಗೊಂಡಿವೆ.

ಒಟ್ಟಾರೆ ಗದಗ ಜಿಲ್ಲೆಯು ಶೈಕ್ಷಣಿಕವಾಗಿ ಪ್ರಗತಿ ಹಂತದಲ್ಲಿ ಮುಂದುವರೆಯುತ್ತಿರುವ ಜಿಲ್ಲೆಯಾಗಿದೆ.

## ಜಿಲ್ಲೆಯ ಶೈಕ್ಷಣಿಕ ಅಂಕಿ ಅಂಶಗಳು

| ಅ. ನಂ. | ವಿವರ | ಸರಕಾರಿ | | | ಅನುದಾನಿತ | | | ಅನುದಾನರಹಿತ | | |
|---|---|---|---|---|---|---|---|---|---|---|
| | | ಕಿಪ್ರಾ | ಹಿಪ್ರಾ | ಒಟ್ಟು | ಕಿಪ್ರಾ | ಹಿಪ್ರಾ | ಒಟ್ಟು | ಕಿಪ್ರಾ | ಹಿಪ್ರಾ | ಒಟ್ಟು |
| 1 | ಪ್ರಾಥಮಿಕ : | 279 | 404 | 683 | 003 | 013 | 016 | 040 | 070 | 110 |
| | ಒಟ್ಟು : | 322 | 487 | 809 | | | | | | |
| 2 | ಪ್ರೌಢ ಶಾಲೆ | | 76 | | | 71 | | 65 | | 212 |
| 3 | ಪ್ರಾಥಮಿಕ ಶಾಲೆ ಮಕ್ಕಳು | | 117287 | | | 6019 | | 21611 | | 144917 |
| 4 | ಪ್ರೌಢ ಶಾಲೆಮಕ್ಕಳು | | 16167 | | | 23916 | | 6239 | | 46322 |
| 5 | ಪ್ರಾಶಾ ಶಿಕ್ಷಕರು | | 3856 | | | 102 | | 468 | | 4426 |
| 6 | ಪ್ರೌಶಾ ಶಿಕ್ಷಕರು | | 582 | | | 803 | | 263 | | 1648 |

7 ಅಕ್ಷರದಾಸೋಹ ಕೇಂದ್ರಗಳು 516 ಫಲಾನುಭವಿಗಳು 123306

8 ಉಚಿತ ವಿತರಣೆಯಾದ ಸೈಕಲ್ಲುಗಳು 7047

## ಬಿ. ನಾರಾಯಣಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ದಾನಿಗಳು



ದಿನಾಂಕ 06–6–2007 ರಂದು ಬೆಳಿಗ್ಗೆ 11–00 ಘಂಟೆಗೆ ಸರ್ಕಾರಿ ಪ್ರೌಢಶಾಲೆ ಬಿ. ನಾರಾಯಣ ಪುರದಲ್ಲಿ ರೋಟರಿ ಸಂಸ್ಥೆ, ಇಂದಿರಾನಗರದವರ ನೂತನವಾಗಿ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾಗಿ ಸುಮಾರು ಎರಡು ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿಕೊಟ್ಟಿರುವ ಶೌಚಾಲಯ ಗಳನ್ನು ರೋಟರಿಯನ್ ಶ್ರೀಕಾಂತ್ ಚಕ್ರಪತಿ ಡಿಸ್ಟ್ರಿಕ್ಟ್ ಗೌರ್‍ನರ್‌ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಹಾಜರಿದ್ದ ರೋಟರಿಯನ್ ಟಿ.ಎನ್. ಸುರೇಶ್‌ಹರಿ, ಪ್ರಸಿಡೆಂಟ್‌ರವರು ಶಾಲೆಯ ಸರ್ವಾಂಗೀಣ ಪ್ರಗತಿಯ ಬಗ್ಗೆ ಪ್ರಶಂಸಿಸಿದರು. ಈ ಸಮಾರಂಭ ದಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಮುನಿಯಪ್ಪ ನವರು ನಾಗರಾಜ್ ಹಾಗೂ ಇತರ ಎಲ್ಲಾ ಸದಸ್ಯರು ಹಾಜರಿದ್ದರು. ಇದೇ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕರಾದ ಸಿ.ನಾರಾಯಣಸ್ವಾಮಿ ಯವರುಸಭೆಯನ್ನು ಸ್ವಾಗತಿಸುತ್ತ, ಈ ಶಾಲೆಯ ಪ್ರಗತಿಗಾಗಿ ಕೈಗೊಳ್ಳಲಾಗಿರುವ ಮಧ್ಯಾಹ್ನದ ಬಿಸಿ ಊಟಕ್ಕಾಗಿ ಇಸ್ಕಾನ್ ವತಿಯಿಂದ ಆಹಾರ ಸರಬರಾಜು, ಉತ್ತಮ ಫಲಿತಾಂಶಕ್ಕಾಗಿ ಸಹ ಶಿಕ್ಷಕರಿಂದ ವಿಶೇಷ ತರಗತಿಯಿಂದ

ಗಣಕಯಂತ್ರ ವ್ಯವಸ್ಥೆ ತರಬೇತಿ, ಗ್ರಂಥಾಲಯ ವ್ಯವಸ್ಥೆ ಮತ್ತು ಉತ್ತಮ ಪ್ರಯೋಗಾಲಯಗಳ ಬಗ್ಗೆ ವಿವರಿಸುತ್ತಾ ಈ ಸರ್ಕಾರಿ ಶಾಲೆಯನ್ನು ಇಡೀ ತಾಲ್ಲೂಕಿನಲ್ಲಿಯೇ ಮಾದರಿ ಶಾಲೆಯಾಗಿ ಮಾರ್ಪಡಿಸುವ ಗುರಿಯನ್ನು ಹೊಂದಿದೆ ಎಂದು ತಿಳಿಸಿದರು.

ದಿನಾಂಕ 02–07–2007 ರಂದು ಮಧ್ಯಾಹ್ನ 1–30ಕ್ಕೆ ಸರ್ಕಾರಿ ಪ್ರೌಢಶಾಲೆ, ಬಿ. ನಾರಾಯಣಪುರದಲ್ಲಿ ಇಸ್ಕಾನ್ ದೇವಾಲಯದ ವತಿಯಿಂದ ನೀಡಲಾಗುತ್ತಿರುವ ಆಹಾರದ ಶೇಖರಣೆಗಾಗಿ ಸುಮಾರು ರೂ. 15,000/– ಮೌಲ್ಯದ ಪಾತ್ರೆಗಳನ್ನು ದಾನಿಗಳಾದ ಎಂ. ಮುನಿಯಪ್ಪ ಮತ್ತು ವಿವೇಕಾನಂದನ್‌ರವರು ಹಾಗೂ ಸುಮಾರು ರೂ. 12,000/–ಗಳ ಮೌಲ್ಯದ 400 ಊಟದ ತಟ್ಟೆಗಳನ್ನು ವಿದ್ಯಾರ್ಥಿಗಳಿಗಾಗಿ ದಾನಿಗಳಾದ ಎನ್. ಚಂದ್ರೇಗೌಡ, ಸರೋಜ (ಪುಷ್ಪಕ್ ಎಲೆಕ್ಟ್ರಾನಿಕ್ಸ್), ವಿನ್ಸೆಂಟ್, ಅರ್ಚಕರಾದ ಶ್ರೀಧರಮೂರ್ತಿ ಮತ್ತು ಹಳೆಯ ವಿದ್ಯಾರ್ಥಿಗಳಾದ ಶೇಖ್ ಹಾಗೂ ಪಾರ್ವತಮ್ಮರವರು ನೀಡಿದ್ದು ಅವುಗಳನ್ನು ಮುಖ್ಯೋಪಾಧ್ಯಾಯರಾದ ಸಿ. ನಾರಾಯಣಸ್ವಾಮಿಯವರ ನೇತೃತ್ವದಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಎಂ. ಮುನಿಯಪ್ಪ, ಸದಸ್ಯರುಗಳು ಹಾಗೂ ಮಾಜಿ ನಗರಸಭಾ ಸದಸ್ಯರುಗಳಾದ ಗೋವಿಂದಪ್ಪ ಮತ್ತು ಮಂಜುಳಾ ನಾಗರಾಜ್‌ರವರ ಸಮಕ್ಷಮದಲ್ಲಿ ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ಇಲಾಖೆಯಿಂದ ನೀಡಲಾಗಿರುವ ಸಮವಸ್ತ್ರಗಳನ್ನು ವಿತರಿಸಲಾಯಿತು.

– ಸಿ. ನಾರಾಯಣಸ್ವಾಮಿ
ಮುಖ್ಯೋಪಾಧ್ಯಾಯರು







## ಬಳೆಗಾರ ಚೆನ್ನಯ್ಯ ಬಾಗಿಲಿಗೆ ಬಂದಿಹನು...

ಬೆಂಗಳೂರು ಉತ್ತರವಲಯ 2ರ ಶ್ರೀರಾಮಪುರದ ಸರ್ಕಾರಿ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ಜಯಲಕ್ಷ್ಮಿಯವರು ಪಠ್ಯವಲ್ಲದೆ, ಪಠ್ಯೇತರ ಚಟುವಟಿಕೆಗಳಲ್ಲೂ ಸಿದ್ಧ ಹಸ್ತರು. ರಂಗ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಕಲಿಕೆ ಆಸಕ್ತಿಯನ್ನು ಹೆಚ್ಚಿಸಬಹುದು ಎಂಬುದರಲ್ಲಿ ನಂಬಿಕೆಯಿಟ್ಟ ಇವರು, ಸದಾ ಕ್ರಿಯಾಶೀಲರಾಗಿರುತ್ತಾರೆ. ಚಿತ್ರದಲ್ಲಿರುವ ಬಳೆಗಾರನ ವೇಷತೊಟ್ಟ ಜಯಲಕ್ಷ್ಮಿ ಅಪ್ಪಟ ಬಳೆಗಾರನಂತೆ ಕಾಣುತ್ತಾರೆ. ಬಳೆಗಾರ ಚೆನ್ನಯ್ಯ ಬಾಗಿಲಿಗೆ ಬಂದಿಹನು... ಮುಂತಾದ ಭಾವಗೀತೆಗಳಿಗೆ ರಂಗರೂಪಕೊಟ್ಟು ಪ್ರಯೋಗಿಸಿದಲ್ಲಿ ಮಕ್ಕಳ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ. ಈ ನಿಟ್ಟಿನಲ್ಲಿ ಇತರ ಶಿಕ್ಷಕರಿಗೆ ಜಯಲಕ್ಷ್ಮಿಯವರು ಮಾದರಿಯಾಗಿದ್ದಾರೆ.

– ವರದಿ : ಸಂ

## 2007–08ನೆಯ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಸೆಮಿಸ್ಟರ್ ಪದ್ಧತಿಯನ್ನು ಅಳವಡಿಸುವ ಬಗ್ಗೆ

# "ಮಾರ್ಗದರ್ಶಿ ಸೂತ್ರಗಳು"

**ವಿಷಯ : ತ್ರೈಮಾಸಿಕ ಪರೀಕ್ಷೆ ಪದ್ಧತಿ ನಡೆಸುವುದರ ಬದಲು ಸೆಮಿಸ್ಟರ್ ಪದ್ಧತಿ ಜಾರಿಗೆ ತರುವ ಬಗ್ಗೆ**

ಉಲ್ಲೇಖ : ಸರ್ಕಾರಿ ಆದೇಶ ಸಂಖ್ಯೆ ಇಡಿ8 ಡಿಜಿಓ 2007, ಬೆಂಗಳೂರು ದಿನಾಂಕ 30.06.2007

**ಹಿನ್ನೆಲೆ :**

ಶಾಲಾ ಮಕ್ಕಳಿಗೆ ಮಾನಸಿಕ ಹಾಗೂ ಬೌದ್ಧಿಕ ಹೊರೆ, ಪರೀಕ್ಷೆಯ ಬಗೆಗಿನ ಭಯ ಇವುಗಳನ್ನು ನಿವಾರಿಸಲು ಮತ್ತು ಪರೀಕ್ಷಾ ಪದ್ಧತಿಯಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ರಾಜ್ಯಾದ್ಯಂತ ಎಲ್ಲ ಸರ್ಕಾರಿ, ಅನುದಾನಿತ, ಮತ್ತು ಅನುದಾನರಹಿತ ಶಾಲೆಗಳಲ್ಲಿ 5 ರಿಂದ 9ನೇ ತರಗತಿಯವರೆಗೆ ತ್ರೈಮಾಸಿಕ ಅವಧಿಯ ಪದ್ಧತಿಯನ್ನು 2004–05ನೇ ಸಾಲಿನಿಂದ ಜಾರಿಗೆ ತರಲಾಗಿತ್ತು. ಈ ಪದ್ಧತಿಯಲ್ಲಿ ಶೈಕ್ಷಣಿಕ ವರ್ಷವನ್ನು ಮೂರು ಅವಧಿಗಾಗಿ ವಿಂಗಡಿಸಲಾಗಿತ್ತು. ಮೇಲ್ಕಂಡ ಸರ್ಕಾರಿ ಆದೇಶದ ಮೇರೆಗೆ ತ್ರೈಮಾಸಿಕ ಪದ್ಧತಿಯ ಬದಲು 2007–08ನೇ ಸಾಲಿನಿಂದ ಸೆಮಿಸ್ಟರ್ ಪದ್ಧತಿಯನ್ನು ಅಳವಡಿಸಲಾಗಿದ್ದು ಈ ಕೆಳಕಂಡ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸಲು ತಿಳಿಸಿದೆ.



*** ಸೆಮಿಸ್ಟರ್ ಅವಧಿಗಳು :**

01–06–2007 ರಿಂದ 09–10–2007 ರವರೆಗೆ ಮೊದಲ ಸೆಮಿಸ್ಟರ್

30–10–2007 ರಿಂದ 10–04–2008 ರವರೆಗೆ ಎರಡನೆಯ ಸೆಮಿಸ್ಟರ್

*** ರಜಾ ಅವಧಿಗಳು :**

10–10–2007 ರಿಂದ 29–10–2007ರವರೆಗೆ ಮಧ್ಯಾಂತರ ರಜೆ

11–04–2008 ರಿಂದ 29–05–2008ರವರೆಗೆ ಬೇಸಿಗೆ ರಜೆ

ಷರಾ : ತ್ರೈಮಾಸಿಕ ಪದ್ಧತಿಯನ್ನು ಕೈ ಬಿಟ್ಟಿರುವುದರಿಂದ ಡಿಸೆಂಬರ್ ಅಂತ್ಯದ ರಜೆಯನ್ನು ಕೈಬಿಡಲಾಗಿದೆ.

*** ಜೂನ್ ತಿಂಗಳ ಕಾರ್ಯಕ್ರಮ :**

ಶಾಲಾ ಪ್ರಾರಂಭೋತ್ಸವದ ನಂತರ ಜೂನ್ ತಿಂಗಳ ಮೊದಲ ಎರಡು ವಾರಗಳವರೆಗೆ ಪ್ರವೇಶ ಕಾರ್ಯದ ಜೊತೆಗೆ ಕಾರ್ಯಕ್ರಮವನ್ನು ಮಾಡಬೇಕು. (ವಿವರಗಳಿಗೆ ಸೇತುಬಂಧ ಕೈಪಿಡಿಯನ್ನು ನೋಡಿ). ಈ ಅವಧಿಯಲ್ಲಿ ಪೂರ್ವ ಸಾಮರ್ಥ್ಯ ಪರೀಕ್ಷೆ (Pre test) ನಡೆಸಿ ಕಲಿಕೆಯ ಅಭಾವ (Learning gap) ಮತ್ತು ತಪ್ಪುಕಲಿಕೆ (learning distortion) ಗಳನ್ನು ಪತ್ತೆ ಹಚ್ಚಿ, ಪರಿಹಾರ ಬೋಧನೆ (Remedial teaching) ಯನ್ನು ಕೈಗೊಂಡು ಸಾಧನಾ ಪರೀಕ್ಷೆ (Post test) ಯನ್ನು ಕೈಗೊಳ್ಳಬೇಕು. ವಿದ್ಯಾರ್ಥಿಗಳ ಸಾಮರ್ಥ್ಯ ಉತ್ತಮವಾಗಿದ್ದಲ್ಲಿ ಕೌಶಲಗಳ ಬಳಕೆ ಹಾಗೂ ಅನ್ವಯಿಸುವಿಕೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ನಡೆಸಬಹುದು.

*** ಪಾಠ ಯೋಜನೆ :**

ಅ) ಪ್ರಾಥಮಿಕ ಶಾಲೆಗಳಲ್ಲಿ ಪಾಠ ಯೋಜನೆಯನ್ನು ಪ್ರತಿದಿನವೂ ಬರೆಯುವ ಅಗತ್ಯವಿಲ್ಲ. ಒಂದು ಸಾಮರ್ಥ್ಯ ಅಥವಾ ಘಟಕಕ್ಕೆ ಒಂದು ಸಮಗ್ರ ಯೋಜನೆಯನ್ನು ತಯಾರಿಸಿಕೊಂಡು ಅದರಲ್ಲಿ ದಿನಾಂಕಗಳನ್ನು ನಮೂದಿಸುವುದು. ಚೈತನ್ಯ ತರಬೇತಿಯಲ್ಲಿ ಚರ್ಚಿಸಲಾದ ಪಾಠಯೋಜನೆಯ ವಿಧಾನವನ್ನೇ ಮುಂದುವರಿಸುವುದು.

ಆ) ಪ್ರೌಢಶಾಲೆಗಳಲ್ಲಿ ಪ್ರತಿ ಘಟಕಕ್ಕೆ ಪಾಠ ಯೋಜನೆಯನ್ನು ಸಿದ್ಧಪಡಿಸಬೇಕು.

ಇ) 5ರಿಂದ 9ನೇ ತರಗತಿಯವರೆಗಿನ ಪಾಠ ಹಂಚಿಕೆಯನ್ನು ಈ ರೀತಿ ಮಾಡಿಕೊಳ್ಳಬೇಕು.

1) ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಜೂನ್ ಮೊದಲ ಎರಡುವಾರ ಸೇತುಬಂಧ ಸಹಿತ ಪರಿಹಾರ ಬೋಧನೆ ಮಾಡಬೇಕು. ಅನಂತರ ಪ್ರಥಮ ಸೆಮಿಸ್ಟರ್ ಪಾಠ ಬೋಧನೆಯನ್ನು ಪ್ರಾರಂಭಿಸಬೇಕು.

2) ಮೊದಲ ಸೆಮಿಸ್ಟರ್‌ಗೆ ಶೇ. 50, ಎರಡನೆಯ ಸೆಮಿಸ್ಟರ್‌ಗೆ 50 ರಂತೆ ಪಠ್ಯವಸ್ತುವನ್ನು ವಿಂಗಡಿಸಿಕೊಂಡು ಪಾಠ ಬೋಧನೆಯನ್ನು ಮಾಡಬೇಕು.

3) ಪಾಠಗಳ ಹಂಚಿಕೆ ವಿಚಾರದಲ್ಲಿ ಅವಶ್ಯಕತೆಗಳಿಗನುಗುಣವಾಗಿ ಸೂಕ್ತ ಬದಲಾವಣೆ ಮಾಡಿಕೊಳ್ಳುವುದನ್ನು ಆಯಾ ಶಾಲೆಗಳ ಮುಖ್ಯೋಪಾಧ್ಯಾಯರ ಹಾಗೂ ಶಿಕ್ಷಕರ ವಿವೇಚನೆಗೆ ಬಿಡಲಾಗಿದೆ.

4) ಅನಿರೀಕ್ಷಿತ ಕಾರಣಗಳಿಂದಾಗಿ ಹಂಚಿಕೆಯಾದ ಪಠ್ಯವಸ್ತು ಮೊದ ಸೆಮಿಸ್ಟರಿನಲ್ಲಿ ಪೂರ್ಣಗೊಳ್ಳದೇ ಹೋದರೆ, ಎರಡನೇ ಸೆಮಿಸ್ಟರಿನ ಪ್ರಾರಂಭದಲ್ಲಿ ಪೂರ್ಣಗೊಳಿಸಿದ ನಂತರವೇ ಎರಡನೆಯ ಸೆಮಿಸ್ಟರಿನ ಪಾಠ ಬೋಧನೆಯನ್ನು ಪ್ರಾರಂಭಿಸಬೇಕು.

5) ಪ್ರತಿ ಘಟಕದ ಪಾಠ ಯೋಜನೆ ಈ ಕೆಳಕಂಡ ಅಂಶಗಳನ್ನು ಒಳಗೊಂಡಿರಬೇಕು.

I. ಘಟಕ ವಿಶ್ಲೇಷಣೆ

II. ನಿರೀಕ್ಷಿತ ಕಲಿಕೆಯ ಫಲಗಳು

III. ಪ್ರತಿ ಘಟಕದ ಕಲಿಕೆಯ ಫಲಕ್ಕೂ ಸೂಕ್ತ ಮೌಲ್ಯಮಾಪನ (ನೈದಾನಿಕ)

IV. ಲಿಖಿತ ಅಥವಾ ಮೌಖಿಕ ಘಟಕ ಮೌಲ್ಯಮಾಪನ

V ಪರಿಹಾರ ಬೋಧನೆ



## * ಮೌಲ್ಯ ಮಾಪನ

1. 1–4ನೇ ತರಗತಿಯವರೆಗೆ ಈಗಿರುವ ಸಾಮರ್ಥ್ಯಾಧಾರಿತ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನವನ್ನು, ಮುಂದುವರಿಸಲಾಗಿದೆ.

2. 5–9ನೇ ತರಗತಿಯವರೆಗೆ ಪ್ರತಿ ಸೆಮಿಸ್ಟರ್ ಅವಧಿಯಲ್ಲಿ ಒಂದೊಂದು ಕಿರುಪರೀಕ್ಷೆ ನಡೆಸಬೇಕು. ಅಂದರೆ 1ನೇ ಕಿರುಪರೀಕ್ಷೆಯನ್ನು ಜುಲೈ ಅಂತ್ಯದಲ್ಲಿ ಹಾಗೂ 2ನೇ ಕಿರುಪರೀಕ್ಷೆಯನ್ನು ಡಿಸೆಂಬರ್‌ನಲ್ಲಿ ನಡೆಸಬೇಕು. ಪ್ರತಿ ವಿಷಯದ ಕಿರುಪರೀಕ್ಷೆಗೆ 40 ಅಥವಾ 45 ನಿಮಿಷಗಳ ಒಂದು ಅವಧಿಯನ್ನು ಬಳಸಿಕೊಳ್ಳಬೇಕು. ಶೇ. 50 ರಷ್ಟು ವಸ್ತು ನಿಷ್ಠ (ಬಹುಆಯ್ಕೆ) ಪ್ರಶ್ನೆಗಳು ಹಾಗೂ ಶೇ. 50 ರಷ್ಟು ಕಿರು ಉತ್ತರದ ಪ್ರಶ್ನೆಗಳು ಇರಬೇಕು.

ಈ ಕಿರುಪರೀಕ್ಷೆಯ ಗರಿಷ್ಠ ಅಂಕಗಳು 25 ಆಗಿದ್ದು, ಈ ಅಂಕಗಳನ್ನು ವಿದ್ಯಾರ್ಥಿಗಳ ತೇರ್ಗಡೆಯ ಮಾನದಂಡಕ್ಕೆ ಪರಿಗಣಿಸುವಂತಿಲ್ಲ. ಆದರೆ, ಈಅಂಕಗಳನ್ನು ಶಿಕ್ಷಕರು ವೈಯಕ್ತಿಕ ಅಂಕ ವಹಿಯಲ್ಲಿ ನಮೂದಿಸಿಕೊಳ್ಳಬೇಕು.

3. ಮೌಲ್ಯಮಾಪನ ಸಾಮರ್ಥ್ಯಾಧಾರಿತವಾಗಿರಬೇಕು.

4. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪರಿಹಾರ ಬೋಧನೆಯನ್ನು ಕ್ರಿಯಾ ಸಂಶೋಧನೆ ಮೂಲಕ ಕೈಗೊಳ್ಳಬೇಕು.

5. ಸೆಮಿಸ್ಟರ್ ಅವಧಿಯ ಅಂತ್ಯದಲ್ಲಿ ಮಾಡುವ ಮೌಲ್ಯಮಾಪನವು 90 ನಿಮಿಷದ್ದಾಗಿರುತ್ತದೆ. ಈ ಮೌಲ್ಯಮಾಪನವು ಆ ಅವಧಿಯಲ್ಲಿ ಕಲಿಸಿದ ಪಾಠಗಳಿಗೆ ಮಾತ್ರ ಸೀಮಿತವಾಗಿರುತ್ತದೆ.

6. ಸೆಮಿಸ್ಟರ್ ಪದ್ಧತಿಯು ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳುವ ಪ್ರಕ್ರಿಯೆಯಾಗಿದೆ. ಆದುದರಿಂದ,

ವಿದ್ಯಾರ್ಥಿಯು ಆತಂಕವಿಲ್ಲದೆ ತನ್ನ ಸಾಮರ್ಥ್ಯಗಳನ್ನು ಕಲಿಕೆ, ಮೌಲ್ಯಮಾಪನ ಹಾಗೂ ಪರಿಹಾರ ಬೋಧನೆಯ ಮೂಲಕ ಅಭಿವೃದ್ಧಿಪಡಿಸಿಕೊಳ್ಳಬಹುದು.

7. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಗುಂಪುಗಳಲ್ಲಿ ಪರಿಹಾರ ಬೋಧನೆ ಮಾಡಿ ಅವರನ್ನು ಮುಂದಿನ ಶ್ರೇಣಿ(ಗ್ರೇಡ್)ಗೆ ಕೊಂಡೊಯ್ಯಲು ಪ್ರಯತ್ನಿಸಬೇಕು.

8. ಸೆಮಿಸ್ಟರ್ ಅವಧಿಯ ಮಧ್ಯದಲ್ಲಿ ವಿದ್ಯಾರ್ಥಿಯು ಬೇರೆ ಶಾಲೆಗೆ ವರ್ಗಾವಣೆಯಾದರೆ ಪ್ರವೇಶ ಪಡೆದ ಶಾಲೆಯಲ್ಲಿ ಸೆಮಿಸ್ಟರ್ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು. ಮೊದಲ ಸೆಮಿಸ್ಟರ್ ಬಳಿಕ ವರ್ಗಾವಣೆಗೊಂಡರೆ ಹಿಂದಿನ ಸೆಮಿಸ್ಟರ್ ಅವಧಿಯ ಶ್ರೇಣಿಗಳನ್ನು ಪ್ರಗತಿ ಪತ್ರದಲ್ಲಿ ನಮೂದಿಸಬೇಕು.

9. ಕಂಠಪಾಠಕ್ಕೆ (ಅವಶ್ಯವಿರುವೆಡೆ ಬಿಟ್ಟು) ಪ್ರಾಮುಖ್ಯತೆ ನೀಡದೆ ಮಕ್ಕಳು ಸ್ವಯಂ ಶಕ್ತಿಯಿಂದ ಬರೆಯುವುದಕ್ಕೆ ಹಾಗೂ ಅಭಿವ್ಯಕ್ತಿಸುವುದಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು.

10. ಭಾಷಾ ವಿಷಯದಲ್ಲಿ ಆಯಾ ತರಗತಿಯ ಮಟ್ಟದ ವಿಷಯವನ್ನು ಒಳಗೊಂಡಿರುವ ಲೇಖನ/ಕಥೆ/ಸಂಭಾಷಣೆ ಇವುಗಳನ್ನು ನೀಡಿ ಅವನ್ನು ವಿದ್ಯಾರ್ಥಿ ಓದಿ, ಅರ್ಥೈಸಿಕೊಂಡು ಉತ್ತರಗಳನ್ನು ಬರೆಯುವಂತಹ ಸಾಮಗ್ರಿಗಳನ್ನು ಮೌಲ್ಯಮಾಪನದಲ್ಲಿ ಬಳಸಬೇಕು.

11. ಒಟ್ಟಿನಲ್ಲಿ ಮೌಲ್ಯಮಾಪನವು ಕಲಿಕೆಯನ್ನು ದೃಢಪಡಿಸುವ ಚಟುವಟಿಕೆಯಾಗಿರಬೇಕೇ ಹೊರತು ಮೌಲ್ಯಮಾಪನಕ್ಕಾಗಿ ಕಲಿಕೆ ಆಗಿರಬಾರದು.

12. ಶಿಕ್ಷಕರ ಕೊರತೆಯಾದಲ್ಲಿ ನಿವೃತ್ತ ಶಿಕ್ಷಕರ ಸೇವೆಯನ್ನು ಬಳಸಿಕೊಳ್ಳುವ ಸರ್ಕಾರದ ಆದೇಶವನ್ನು ಮನ್ನಿಸುವುದು.

13. ಸೆಮಿಸ್ಟರ್ ಪರೀಕ್ಷೆಯನ್ನು ಶಾಲಾ ಹಂತದಲ್ಲಿ ನಡೆಸಿ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ ವಿದ್ಯಾರ್ಥಿಗಳು ಗಳಿಸಿದ ಅಂಕಗಳನ್ನು ಪರಿವರ್ತಿಸಿ, ಪ್ರಗತಿಪತ್ರದಲ್ಲಿ ಶ್ರೇಣಿಗಳನ್ನು ಮಾತ್ರ ನಮೂದಿಸಬೇಕು. ಅಂಕಗಳನ್ನು ಶಿಕ್ಷಕರು ತಮ್ಮ ವೈಯಕ್ತಿಕ ಅಂಕ ವಹಿಯಲ್ಲಿ ನಮೂದಿಸಿಕೊಳ್ಳಬೇಕು.

14. ಸೆಮಿಸ್ಟರ್ ಅವಧಿಯ ಪ್ರಶ್ನೆ ಪತ್ರಿಕೆಗಳನ್ನು ಶಾಲಾ ಹಂತದಲ್ಲಿ, ಆಯಾ ವಿಷಯ ಬೋಧಿಸುವ ಶಿಕ್ಷಕರೇ ತಯಾರಿಸಿಕೊಳ್ಳಬೇಕು.

15. ಪ್ರಥಮ ಸೆಮಿಸ್ಟರ್ ಅವಧಿಯಲ್ಲಿ 'ಅ' ಶ್ರೇಣಿ ಪಡೆದ ವಿದ್ಯಾರ್ಥಿಗಳಿಗೆ ಸೂಕ್ತ ಪರಿಹಾರ ಬೋಧನೆಯನ್ನು ಮಾಡಿ ಮುಂದಿನ ಸೆಮಿಸ್ಟರ್ ಅವಧಿಯ ಕಲಿಕೆಗೆ ಸಮರ್ಥರನ್ನಾಗಿಸಬೇಕು.

16. ಈ ಪರಿಹಾರ ಬೋಧನೆಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳ ಸಹಾಯವನ್ನು ಪಡೆಯಬಹುದು.

17. 10ನೇ ತರಗತಿ ಪಬ್ಲಿಕ್ ಪರೀಕ್ಷೆಯಲ್ಲಿ ಮೌಖಿಕ ಪರೀಕ್ಷೆಗೆ ಅವಕಾಶವಿಲ್ಲದಿರುವ ಕಾರಣ 9ನೆಯ ತರಗತಿಯ ದ್ವಿತೀಯ ಸೆಮಿಸ್ಟರ್ ಮೌಲ್ಯಮಾಪನದಲ್ಲಿ ಮೌಖಿಕ ಪರೀಕ್ಷೆಯನ್ನು ಕೈಬಿಡಲಾಗಿದೆ.

### * ಯೋಜನೆ (Project)

ಪ್ರತಿ ಸೆಮಿಸ್ಟರ್ ಅವಧಿಗೆ ಈ ಕೆಳಕಂಡಂತೆ ಯೋಜನೆಯನ್ನು ವಿದ್ಯಾರ್ಥಿಗಳಿಂದ ಮಾಡಿಸಬೇಕು. ಮೊದಲನೆಯ ಸೆಮಿಸ್ಟರ್ ಅವಧಿಯಲ್ಲಿ ಭಾಷೆ ( ಪ್ರಥಮ, ದ್ವಿತೀಯ, ತೃತೀಯ ಭಾಷೆ)

ಎರಡನೆಯ ಸೆಮಿಸ್ಟರ್ ಅವಧಿಯಲ್ಲಿ ಗಣಿತ, ವಿಜ್ಞಾನ, ಸಮಾಜ ವಿಜ್ಞಾನ (ಯೋಜನೆಯು ಗುಂಪು ಚಟುವಟಿಕೆ ಅಥವಾ ವೈಯಕ್ತಿಕ ಚಟುವಟಿಕೆ ಆಗಿರಬೇಕು).



ದ್ವಿತೀಯ ಸೆಮಿಸ್ಟರ್‌ನಲ್ಲಿ ಗಣಿತ, ವಿಜ್ಞಾನ, ಸಮಾಜವಿಜ್ಞಾನವನ್ನು ಒಂದೊಂದು ಗುಂಪಿಗೆ ನೀಡಬೇಕು. ಹೆಚ್ಚಿನ ವಿವರಗಳಿಗೆ "ಯೋಜನಾ" ಸಂಚಿಯನ್ನು ನೋಡಿರಿ.

"ಪ್ರತಿ ಸೆಮಿಸ್ಟರ್ ಅಂತ್ಯದ ಮೌಲ್ಯಮಾಪನ

## ಭಾಗ – ಎ (Part-A)

**ಪ್ರತಿ ವಿಷಯಕ್ಕೆ :**

1. ಲಿಖಿತ ಮೌಲ್ಯಮಾಪನ : 40 ಅಂಕಗಳು, ಅವಧಿ–90 ನಿಮಿಷಗಳು

2. ಮೌಖಿಕ ಮೌಲ್ಯಮಾಪನ : 10 ಅಂಕಗಳು, ಶಿಕ್ಷಕರು ಸಮಯವನ್ನು ನಿರ್ಧರಿಸಿಕೊಳ್ಳುವುದು. ಒಟ್ಟು 50 ಅಂಕಗಳು.

## ಭಾಗ–ಬಿ (Part-B)

1. ಯೋಜನೆ 10 ಅಂಕಗಳು, 2. ಮೌಲ್ಯಗಳು/ಜೀವನ ಕೌಶಲಗಳು 10 ಅಂಕಗಳು, 3. ಜೀವನ ವಿಜ್ಞಾನ (ದೈ.ಶಿ + ಯೋಗ + ಆರೋಗ್ಯ) 20 ಅಂಕಗಳು, 4. ಕಲೆ ಮತ್ತು ಮ.ಉ.ಉ. ಕಾ. 10 ಅಂಕಗಳು, ಒಟ್ಟು 5 ಅಂಕಗಳು

### * ಸೆಮಿಸ್ಟರ್ ಮೌಲ್ಯಮಾಪನದಲ್ಲಿ ಗಮನಿಸಬೇಕಾದ ಅಂಶಗಳು :

**(1) ಉದ್ದಿಷ್ಟಗಳು : (ಅ) ಭಾಷೆಗಳು :** ಜ್ಞಾನ–25%, ಗ್ರಹಿಕೆ – 40%, ಅಭಿವ್ಯಕ್ತಿ – 30%, ಪ್ರಶಂಸೆ – 05%,

**(ಆ) ಕೋರ್ ವಿಷಯಗಳು :** ಜ್ಞಾನ – 25%, ತಿಳುವಳಿಕೆ – 45%, ಅನ್ವಯ – 20%, ಕೌಶಲ – 10%,

**2. ಪ್ರಶ್ನೆಗಳ ಸ್ವರೂಪ :** ವಸ್ತುನಿಷ್ಠ – 30%, ಕಿರು ಉತ್ತರ – 50%, ವಿವರಣಾತ್ಮಕ ಉತ್ತರ – 20%,

**3. ಕಠಿಣತೆಯ ಮಟ್ಟ :** ಸುಲಭ – 30%, ಸಾಧಾರಣ – 40%, ಕಠಿಣ – 30%,

ನೀಲನಕ್ಷೆಯನ್ನು ಸಿದ್ಧಪಡಿಸಿಕೊಂಡು ಅದರ ಆಧಾರದ ಮೇಲೆ ಪ್ರಶ್ನೆಪತ್ರಿಕೆ ಮತ್ತು ಮಾದರಿ ಉತ್ತರ ಪತ್ರಿಕೆಗಳನ್ನು ಶಿಕ್ಷಕರೇ ತಯಾರಿಸಿಕೊಳ್ಳಬೇಕು.

### * ಶ್ರೇಣಿ (ಗ್ರೇಡ್) ನೀಡುವಿಕೆ :


ಭಾಗ–ಎ ಯಲ್ಲಿನ ವಿಷಯಗಳಿಗೆ ಮೌಲ್ಯಮಾಪನದ ಅಂಕಗಳನ್ನು ಶ್ರೇಣಿಯಾಗಿ ಪರಿವರ್ತಿಸುವಿಕೆ.

1. A+ – 90% ರಿಂದ 100% – ಅತಿಶ್ರೇಷ್ಠ, 2. A – 75% ರಿಂದ 89% – ಶ್ರೇಷ್ಠ, 3. B+ – 60% ರಿಂದ 74% – ಉತ್ತಮ , 4. B – 50% ರಿಂದ 59% – ತೃಪ್ತಿಕರ, 5. C+ – 30% ರಿಂದ 49% – ಸಾಧಾರಣ, 6. C – 29% ಕ್ಕಿಂತ ಕಡಿಮೆ – ಕನಿಷ್ಠ

**ಭಾಗ–ಬಿ ಯಲ್ಲಿನ ವಿಷಯಗಳಿಗೆ 'ಶ್ರೇಣಿ' ನೀಡುವಿಕೆ**

1. A – 75% ರಿಂದ 100%,

2. B – 50% ರಿಂದ 74%, 3. C – 49% ಕ್ಕಿಂತ ಕಡಿಮೆ



### * ಖಾಸಗಿ ಅಭ್ಯರ್ಥಿಗಳು :

ಬಾಹ್ಯವಾಗಿ ಪರೀಕ್ಷೆಯನ್ನು ಬರೆಯುವ ವಿದ್ಯಾರ್ಥಿಗಳನ್ನು ಮುಖ್ಯ ಶಿಕ್ಷಣ ವಾಹಿನಿಯಲ್ಲಿ ಸೇರಿಸಿಕೊಳ್ಳುವ ಅವಕಾಶ ಕಲ್ಪಿಸಲು, ಈ ಕೆಳಕಂಡ ಅಂಶಗಳನ್ನು ಪಾಲಿಸಬೇಕು.

* 6,7 ಮತ್ತು 8ನೇ ತರಗತಿಗಳಿಗೆ ಖಾಸಿಗಿ ಅಭ್ಯರ್ಥಿಗಳನ್ನು ಸೇರಿಸಿಕೊಳ್ಳಬಹುದು.


* ತರಗತಿಗಳಿಗೆ ಸೇರುವ ವಿದ್ಯಾರ್ಥಿಗಳ ವಯೋಮಿತಿಯನ್ನು ಈ ರೀತಿ ನಿಗದಿಗೊಳಿಸಲಾಗಿದೆ.

6ನೇ ತರಗತಿಗೆ ಸೇರಲು 22 ವರ್ಷ ಪೂರ್ತಿಯಾಗಿರಬೇಕು.

7ನೇ ತರಗತಿಗೆ ಸೇರಲು 13 ವರ್ಷ ಪೂರ್ತಿಯಾಗಿರಬೇಕು.

8ನೇ ತರಗತಿಗೆ ಸೇರಲು 14 ವರ್ಷ ಪೂರ್ತಿಯಾಗಿರಬೇಕು.

(ವಯೋಮಿತಿಯನ್ನು ನಿಗದಿಗೊಳಿಸಲು ಆಯಾ ವರ್ಷದ ಮೇ 31ನೇ ದಿನಾಂಕವನ್ನು ಆಧಾರವಾಗಿಟ್ಟುಕೊಳ್ಳಬೇಕು).



* ಈ ವಯೋಮಿತಿಯ ವಿದ್ಯಾರ್ಥಿಗಳು ತಮ್ಮ ಸಮೀಪದ ಶಾಲೆಯಲ್ಲಿ ಖಾಸಗಿ ವಿದ್ಯಾರ್ಥಿಯಾಗಿ ಜೂನ್ ತಿಂಗಳಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕು.

* ಪ್ರತಿ ಸೆಮಿಸ್ಟರ್ ಪರೀಕ್ಷೆಗೆ ಶಾಲೆಯ ವೇಳಾಪಟ್ಟಿಗೆ ಅನುಗುಣವಾಗಿ ಹಾಜರಾಗಬೇಕು.

* ಇಂತಹ ವಿದ್ಯಾರ್ಥಿಗಳು ತರಗತಿಗೆ ಹಾಜರಾಗುವುದು ಕಡ್ಡಾಯವಲ್ಲ.

ಆದರೆ ಅವಶ್ಯಕತೆಯಿದ್ದಾಗ ತರಗತಿಗಳಿಗೆ

ಹಾಜರಾಗಿ ಬೋಧನೆ ಕಲಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ.

* ಇವರಿಗೆ 'ಬಿ' ವಿಭಾಗದ ವಿಷಯಗಳ ಪರೀಕ್ಷೆಯಿಂದ ವಿನಾಯ್ತಿಯನ್ನು ನೀಡಲಾಗಿದೆ.

**ಫಲಿತಾಂಶ :**

ಅ) ವಿದ್ಯಾರ್ಥಿಯ ವಾರ್ಷಿಕ ಫಲಿತಾಂಶವು ಅವನ/ಳ ಆ ವರ್ಷದ ಸಾಧನೆಯ ಮೇಲೆ ಅವಲಂಬಿತವಾಗಿರುತ್ತದೆ. ಅಂದರೆ ಎರಡು ಸೆಮಿಸ್ಟರ್ ಅವಧಿಗಳ ಅಂತ್ಯದ ಮೌಲ್ಯಮಾಪನಗಳಲ್ಲಿ ಪಡೆದ ಶ್ರೇಣಿಗಳ ಆಧಾರದಿಂದ ನಿರ್ಧರಿಸಲ್ಪಡುತ್ತದೆ.

ಆ) 'ಎ' ವಿಭಾಗದ ಪ್ರತಿ ವಿಷಯದಲ್ಲಿ ಕನಿಷ್ಠ ಅ+ ಶ್ರೇಣಿಯನ್ನು ಗಳಿಸಿರಬೇಕು.

ಇ) 'ಬಿ' ವಿಭಾಗದ ಪ್ರತಿ ವಿಷಯದಲ್ಲಿ ಕನಿಷ್ಠ ಃ ಶ್ರೇಣಿಯನ್ನು ಪಡೆದಿರಬೇಕು.

ಈ) ವಿದ್ಯಾರ್ಥಿ ಶಾಲೆಗೆ ದಾಖಲಾದ ದಿನದಿಂದ ಶೇ. 75 ಹಾಜರಿ ಕಡ್ಡಾಯ.

ಉ) ಮೊದಲ ಸೆಮಿಸ್ಟರ್ ಮೌಲ್ಯಮಾಪನಕ್ಕೆ ವಿದ್ಯಾರ್ಥಿ ಗೈರುಹಾಜರಾದರೆ ನವಂಬರ್‌ನಲ್ಲೂ ಎರಡನೆಯ ಸೆಮಿಸ್ಟರ್ ಮೌಲ್ಯಮಾಪನಕ್ಕೆ ಗೈರು ಹಾಜರಾದರೆ ಜೂನ್ ತಿಂಗಳಲ್ಲೂ ಮೌಲ್ಯಮಾಪನ ಮಾಡಿ ಪಡೆದಿರುವ ಶ್ರೇಣಿಗಳ ಆಧಾರದಿಂದ ಫಲಿತಾಂಶ ನಿರ್ಧರಿಸಬೇಕು.

ಊ) ತೇರ್ಗಡೆಗೆ ಬೇಕಾದ ಕನಿಷ್ಠ ಶ್ರೇಣಿಯನ್ನು (C+) ಎರಡೂ ಸೆಮಿಸ್ಟರ್‌ಗಳಲ್ಲಿ ಗಳಿಸದಿದ್ದರೆ ಇಡೀ ವರ್ಷದ ಪಠ್ಯವಸ್ತುವಿನ ಮೇಲೆಯೂ, ಯಾವುದಾದರೂ ಒಂದು ಸೆಮಿಸ್ಟರ್‌ನಲ್ಲಿ ಗಳಿಸದಿದ್ದರೆ ಆ ಸೆಮಿಸ್ಟರ್‌ನ ಪಠ್ಯವಸ್ತುವಿನ ಮೇಲೆಯೂ ಜೂನ್ ತಿಂಗಳಲ್ಲಿ ಪರಿಹಾರ ಬೋಧನೆ ಸಹಿತ ಮರುಮೌಲ್ಯಮಾಪನ ಮಾಡಬೇಕು. ಇದರಲ್ಲೂ C+) ಬಾರದೇ ಹೋದರೆ ವಿದ್ಯಾರ್ಥಿಯನ್ನು ಅನುತ್ತೀರ್ಣನೆಂದು ಘೋಷಿಸಬೇಕು.

*** ದಾಖಲೆಗಳು :**

ಅ) 1–4ನೇ ತರಗತಿಯವರೆಗೆ ಪ್ರಸ್ತುತ ಜಾರಿಯಲ್ಲಿರುವಂತೆಯೇ ದಾಖಲೆಗಳನ್ನು ನಿರ್ವಹಿಸಬೇಕು.

ಆ) 5–9ನೇ ತರಗತಿಯವರೆಗೆ ಈ ಕೆಳಗಿನಂತೆ ದಾಖಲೆಗಳನ್ನು ನಿರ್ವಹಿಸಬೇಕು.

A) ಶಿಕ್ಷಕರು ನಿರ್ವಹಿಸಬೇಕಾದ ವಹಿಗಳು : 1. ಮಕ್ಕಳ ಪ್ರಗತಿ ಪತ್ರಗಳು, 2. ವಿದ್ಯಾರ್ಥಿವಾರು ವಿಷಯವಾರು ಪರಿಹಾರ ಬೋಧನಾ ವಹಿ, 3. ಸೆಮಿಸ್ಟರ್ ಅವಧಿಯ ಮೌಲ್ಯಮಾಪನದ ಅಂಕಗಳು ಮತ್ತು ಶ್ರೇಣಿ ವಹಿ.

4. ಕ್ರಿಯಾಸಂಶೋಧನಾ ವರದಿ ವಹಿ, 5. ಭಾಗ–ಬಿ ಗೆ ಸಂಬಂಧಿಸಿದ ವಹಿಗಳು.

**B) ಮುಖ್ಯೋಪಾಧ್ಯಾಯರು ನಿರ್ವಹಿಸಬೇಕಾದ ವಹಿಗಳು:** 1. ಕ್ರೋಢೀಕೃತ ಪ್ರಗತಿ ದಾಖಲೆ ವಹಿ,

2. ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಸಾಧನಾ ಪ್ರಗತಿ ವಹಿ, ವಿ.ಸೂ.: ಹೆಚ್ಚಿನ ಮಾಹಿತಿಗಾಗಿ ಮುಂದೆ

ನೀಡಲಾಗುವ ಪರಿಷ್ಕೃತ 'ಸೌರಭ'ವನ್ನು ಬಳಸಿಕೊಳ್ಳಬಹುದು.

**ಸಹಿ/–**
ಜಿ. ಕುಮಾರನಾಯಕ
ಆಯುಕ್ತರು
(ಸಾರ್ವಜನಿಕ ಶಿಕ್ಷಣ ಇಲಾಖೆ)

ವಿ.ಸೂ.

ಶ್ರೇಣಿಗಳ ವಿವರ, ತೇರ್ಗಡೆಗೆ ಸೂಚನೆಗಳು, ವಿದ್ಯಾರ್ಥಿಗಳ ಮಾದರಿ ಪ್ರಗತಿ ಪತ್ರದ ನಮೂನೆಗಳನ್ನು ಜಿಲ್ಲೆಗಳ ಉಪನಿರ್ದೇಶಕರುಗಳಿಗೆ ಕಳುಹಿಸಿಕೊಡಲಾಗಿದೆ



## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ : ತ್ರೈಮಾಸಿಕ ಪರೀಕ್ಷೆ ನಡೆಸುವುದರ ಬದಲು ಸೆಮಿಸ್ಟರ್ ಪದ್ಧತಿ ಜಾರಿಗೆ ತರುವ ಬಗ್ಗೆ.**

ಓದಲಾಗಿದೆ : 1. ದಿ: 16.2.2004ರ ಆದೇಶ ಸಂಖ್ಯೆ ಇಡಿ 24 ಡಿಜಿಒ 2004.

2. ದಿ: 10.10. 2005ರ ಆದೇಶ ಸಂಖ್ಯೆ ಇಡಿ 61 ಡಿಜಿಒ 2005.

3. ದಿ: 31.5.2007ರ ಆಯುಕ್ತರು, ಸಾ.ಶಿ.ಇ., ಅವರ ಅ.ಸ.ಪ. ಸಂ. ಆ. ಆಶಾ.ತ್ರೈಶಿಪ/ 2007–08

4. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಅವರ ದಿ: 24.5.2007ರ ಪತ್ರ ಸಂಖ್ಯೆ ಡಿ.ಎಸ್.ಇ.ಆರ್.ಟಿ./ತ್ರೈಶಿಸ/2007–08.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ : 1)ರ ದಿನಾಂಕ 16–02–2004ರ ಆದೇಶದಲ್ಲಿ 2004–05ನೇ ಸಾಲಿನ ಶೈಕ್ಷಣಿಕ ವರ್ಷದಿಂದ ತ್ರೈಮಾಸಿಕ ಶಿಕ್ಷಣ ಪದ್ಧತಿಯ ಅನುಷ್ಠಾನ ಜಾರಿಗೆ ಬಂದಿದ್ದು, ಕ್ರಮಸಂಖ್ಯೆ:(2)ರ ದಿನಾಂಕ:10–10–2005ರ ಆದೇಶದಲ್ಲಿ ಸದರಿ ಪದ್ದತಿಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಲಾಗಿತ್ತು. ಕ್ರಮಸಂಖ್ಯೆ : 3)ರಲ್ಲಿನ ದಿನಾಂಕ 31–05–2007ರ ಅರೆ ಸರ್ಕಾರಿ ಪತ್ರದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು, ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 15–11–2006ರಂದು ವಿಧಾನ ಸೌಧದ ಕೊಠಡಿ ಸಂಖ್ಯೆ 313ರಲ್ಲಿ ಶಿಕ್ಷಣ ಕ್ಷೇತ್ರದ ವಿಧಾನ ಪರಿಷತ್ ಸದಸ್ಯರು, ಹಿರಿಯ ಅಧಿಕಾರಿಗಳ ಸಭೆಯಲ್ಲಿ ತ್ರೈಮಾಸಿಕ ಪದ್ಧತಿ ಕುರಿತು ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ತ್ರೈಮಾಸಿಕ ಪದ್ಧತಿಯ ಸಾಧಕ ಬಾಧಕಗಳನ್ನು ಮತ್ತೊಮ್ಮೆ ಪರಿಶೀಲಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಲು ಆಯುಕ್ತರು, ಸಾ.ಶಿ. ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಯಿತು. ಆಯುಕ್ತರು, ಸಾ.ಶಿ. ಇಲಾಖೆ, ಬೆಂಗಳೂರು ಇವರು ಇಲಾಖೆಯ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ತ್ರೈಮಾಸಿ ಕ ಪದ್ಧತಿಯ ಸಾಧಕ ಬಾಧಕಗಳ ಕುರಿತು ವಿಭಾಗ ಮಟ್ಟದಲ್ಲಿ ಚರ್ಚೆ ನಡೆಸಿದ ನಂತರ ರಾಜ್ಯ ಮಟ್ಟದಲ್ಲಿ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳುವಂತೆ ನಿರ್ಣಯಿಸಲಾಯಿತು. ಇದರಂತೆ ದಿನಾಂಕ 21–12–2006 ರಂದು ಗುಲ್ಬರ್ಗಾ, ದಿನಾಂಕ 26–12–2006ರಂದು ಮೈಸೂರು ವಿಭಾಗ, ದಿನಾಂಕ 09–01–2007 ರಂದು ಬೆಳಗಾಂ ವಿಭಾಗ ಮತ್ತು ದಿನಾಂಕ 18–01–2007 ರಂದು ಬೆಂಗಳೂರು ವಿಭಾಗೀಯ ಮಟ್ಟದಲ್ಲಿ ಶಿಕ್ಷಕರು, ಶಿಕ್ಷಣಾಸಕ್ತರು, ಡಯಟ್, ಸಿಬ್ಬಂದಿ, ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಮಕ್ಕಳನ್ನು ಒಳಗೊಂಡಂತೆ ತ್ರೈಮಾಸಿಕ ಪರೀಕ್ಷಾ ಪದ್ಧತಿಯ ಸಾಧಕ ಬಾಧಕಗಳನ್ನು ಕುರಿತಂತೆ ಕಾರ್ಯಾಗಾರಗಳನ್ನು ನಡೆಸಲಾಯಿತು. ಇದರ ಜೊತೆಗೆ ವಿವಿಧ ಮಟ್ಟದವರೆಗೆ ಪ್ರಶ್ನಾವಳಿಗಳನ್ನು ನೀಡಿ ಪ್ರಶ್ನಾವಳಿಯ ಅಂಶಗಳನ್ನು ಕ್ರೋಢೀಕರಿಸಲಾಯಿತು. ಈ ರೀತಿಯಾಗಿ ಕ್ರೋಢೀಕರಿಸಿ ತಯಾರಿಸಿದ ವರದಿಗಳ ಮೇಲೆ ರಾಜ್ಯ ಮಟ್ಟದಲ್ಲಿ ದಿನಾಂಕ 14–02–2007, 07–03–2007, 29–03–2007 ಮತ್ತು 19–05–2007 ರಂದು ಚರ್ಚಿಸಿ ಅಂತಿಮ ವರದಿಯನ್ನು ತಯಾರಿಸಲಾಯಿತು. ಕ್ರಮಸಂಖ್ಯೆ :(4)ರ ದಿನಾಂಕ 24–05–2007ರ ಪತ್ರದೊಂದಿಗೆ ಡಿ.ಎಸ್.ಇ.ಆರ್.ಟಿ. ನಿರ್ದೇಶಕರು ಸಾ.ಶಿ. ಇಲಾಖೆಯ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ 19–05–2007ರಂದು ಶಿಕ್ಷಕರ ಸದನದಲ್ಲಿ ನಡೆದ ತ್ರೈಮಾಸಿಕ ಶಿಕ್ಷಣ ಪದ್ಧತಿಯ ಸಾಧಕ ಬಾಧಕಗಳನ್ನು ಸಮಿತಿ ಸದಸ್ಯರು ಹಾಗೂ ಆಹ್ವಾನಿತರೊಂದಿಗೆ ಚರ್ಚಿಸಿ, ಒಟ್ಟಾರೆ ಅಭಿಪ್ರಾಯವನ್ನು ಪಡೆದು ಶಿಫಾರಸ್ಸು ಮಾಡಿರುವ ವರದಿಯನ್ನು ಸಲ್ಲಿಸಿದ್ದಾರೆ. ವರದಿಯಲ್ಲಿ ತ್ರೈಮಾಸಿಕ ಪದ್ಧತಿಯ ಅನುಷ್ಠಾನ ಕುರಿತಂತೆ ಈ ಕೆಳಕಂಡಂತೆ ಅಭಿಪ್ರಾಯ ನೀಡಿದ್ದಾರೆ.

### ಅ) ತ್ರೈಮಾಸಿಕ ಪರೀಕ್ಷಾ ಪದ್ಧತಿಯ ಅನುಕೂಲಗಳು :

ಸೇತುಬಂಧ ಹಿಂದಿನ ತರಗತಿಯ ಸಾಮರ್ಥ್ಯಗಳ ಕಲಿಕಾ ಪ್ರಗತಿಯನ್ನು ಗುರುತಿಸಿಕೊಳ್ಳಲು ಜೂನ್ ತಿಂಗಳ ಪ್ರಾರಂಭದಲ್ಲಿ ಪೂರ್ವ ಪರೀಕ್ಷೆ (Pre-test) ಆದ ನಂತರ ಗುರುತಿಸಿದ ಹಂತಗಳನ್ನು ಪರಿಹಾರ ಬೋಧನೆ ಮಾಡಿ ಸಾಧನೆ ಪರೀಕ್ಷೆ (Post -test) ನಡೆಸಲಾಗುವುದು. ಈ ಹಂತದಲ್ಲಿ ಹಿಂದಿನ ವರ್ಷದ ತಪ್ಪು ಕಲಿಕೆಯನ್ನು ಸರಿಪಡಿಸಿ ಪುನಃ ಕಲಿಸಿ ಅಂದಿನ ತರಗತಿಗೆ ಸಿದ್ಧರನ್ನಾಗಿ ಮಾಡಲು ಅನುಕೂಲವಾಗಿದೆ.

ಪಠ್ಯಪುಸ್ತಕ ಹೊರೆ ಕಡಿಮೆ ಮಾಡುವುದು.

ನಿರ್ದಿಷ್ಟ ಅವಧಿಯ ಪಾಠಗಳನ್ನು ಪರಿಣಾಮಕಾರಿಯಾಗಿ ಬೋಧನೆ ಮಾಡಲು ಸಾಧ್ಯ.

ಮಗುವಿನ ಕಲಿಕೆಯಲ್ಲಿ ಸೃಜನಶೀಲತೆ ಮತ್ತು ವೈಯಕ್ತಿಕತೆಯನ್ನು ಪುಷ್ಟೀಕರಿಸುವುದು.
ಮಗುವಿನ ಮಾನಸಿಕ ಒತ್ತಡ ಕಡಿಮೆ ಮಾಡುವುದು.
ಕಂಠಪಾಠದ ಹೊರೆ ಮತ್ತು ಪಠ್ಯದ ಹೊರೆ ಕಡಿಮೆ ಮಾಡುವುದು.
ಪರೀಕ್ಷಾ ಭಯವನ್ನು ಹೋಗಲಾಡಿಸುವುದು.
ಮಗುವಿನ ನಿರಂತರ ಮೌಲ್ಯಮಾಪನ.
ಶಾರೀರಿಕ ಶಿಕ್ಷಣ, ಸಂಗೀತ, ಚಿತ್ರಕಲೆ, ಯೋಗ, ಇಂತಹ ಚಟುವಟಿಕೆಗಳಿಗೆ ಅನುವು ಮಾಡಿಕೊಟ್ಟಿರುವುದರಿಂದ ಮಗುವು ಉಲ್ಲಾಸದಿಂದ, ಉತ್ಸಾಹದಿಂದ ಶಾಲೆಗೆ ಬರುವಂತಾಗುತ್ತದೆ.
ಯೋಜನೆ–ಪ್ರಾಜೆಕ್ಟ್ ಮೆಥೆಡ್ ಪರಿಕಲ್ಪನೆಯೊಂದಿಗೆ ಸ್ವಕಲಿಕೆ ವ್ಯಾಪ್ತಿಗೆ ಒಳಪಡುತ್ತದೆ.
ಶಿಕ್ಷಕರು ನಿರ್ದಿಷ್ಟ ಅವಧಿಯಲ್ಲಿ ಬರುವ ಕಲಿಕಾ ಅಂಶಗಳನ್ನು ಆಳವಾಗಿ, ಪರಿಣಾಮಕಾರಿಯಾಗಿ ಬೋಧಿಸಬಹುದು.
ಯೋಜನೆ ಮೌಲ್ಯ, ಜೀವನ ವಿಜ್ಞಾನದಲ್ಲಿ ದೈಹಿಕ ಶಿಕ್ಷಣ, ಯೋಗ, ಆರೋಗ್ಯ, ಕಲೆ, ಸಾಮಾಜಿಕ ಉಪಯುಕ್ತ ಉತ್ಪಾದನಾ ಕಾರ್ಯ (SUPW)ಅಳವಡಿಸುವುದು ಅತ್ಯಂತ ಉತ್ತೇಜನಕಾರಿ.
ಜೀವನ ವಿಜ್ಞಾನವು ಮಗುವಿನ ವ್ಯಕ್ತಿತ್ವ ಪೂರ್ಣ ವಿಕಾಸಕ್ಕೆ ಸಹಕಾರಿ.
ಈ ಪದ್ಧತಿ ಮಗುವಿನ ದೈಹಿಕ, ಮಾನಸಿಕ ಹಾಗೂ ಮಾನವೀಯ ಮೌಲ್ಯಗಳಿಗೆ ಪ್ರಾಶಸ್ತ್ಯವನ್ನು ನೀಡುತ್ತದೆ.
ಮೌಲ್ಯಮಾಪನ ವಿಧಾನವು ಅತ್ಯಂತ ಸರಳ. ಇದರಿಂದ ಶಿಕ್ಷಕರ ಮೌಲ್ಯಮಾಪನ ಸಾಮರ್ಥ್ಯ ಹೆಚ್ಚಿ ಮಗುವು ಪರೀಕ್ಷೆ ಎಂಬ ಭಯದಿಂದ ಮುಕ್ತರಾಗುವುದು.
ಗ್ರೇಡ್ ಪದ್ಧತಿಯನ್ನು ಅಳವಡಿಸಿರುವುದರಿಂದ ಮಕ್ಕಳನ್ನು ಅನಾವಶ್ಯಕ ಹೋಲಿಕೆಗಳಿಂದ ಮುಕ್ತಗೊಳಿಸಬಹುದಾಗಿದೆ.
ಕಲಿಕೆಯಲ್ಲಿ ಹಿಂದುಳಿದ ಮಗುವಿಗೆ ಪರಿಹಾರ ಬೋಧನೆಯನ್ನು ಕ್ರಿಯಾ ಯೋಜನೆ ಮೂಲಕ ಕೈಗೊಂಡ ಸಾಮರ್ಥ್ಯಗೊಳಿಸಲು ಸಹಕಾರಿ.
ಕೆ.ಎಸ್.ಕ್ಯೂ.ಎ.ಓ. ವತಿಯಿಂದ ನಡೆಸುತ್ತಿರುವ ಕಲಿಕಾ ಮೌಲ್ಯಾಂಕನವು ಮಗುವಿಗೆ ಹೆಚ್ಚು ಉತ್ತೇಜಕ ಹಾಗೂ ಪೂರಕ.

**ಆ) ತ್ರೈಮಾಸಿಕ ಪರೀಕ್ಷಾ ಪದ್ಧತಿಯ ಅನಾನುಕೂಲಗಳು :**

1. ತರಬೇತಿಯ ಕೊರತೆ.
2. ಘಟಕ ಪರೀಕ್ಷೆ ಮತ್ತು ಪರಿಹಾರ ಬೋಧನೆ ಮಾಡುವಲ್ಲಿ ಶಿಕ್ಷಕರ ಸಮಸ್ಯೆಗಳು.
3. ನೀಲ ನಕ್ಷೆ ರಚನೆ ಕುರಿತು ಸ್ಪಷ್ಟ ಮಾಹಿತಿ ಇಲ್ಲದಿರುವುದು.
4. 'ಸೌರಭ' ಪರಿಷ್ಕರಣೆ
5. ಶ್ರೇಣೀಕರಣ Merits & Demerits.
6. ಮೇಲ್ವಿಚಾರಣೆಯ ಕೊರತೆ.
7. Part-B ವಿಷಯಗಳ ಬೋಧನೆ ಹಾಗೂ ಮೌಲ್ಯ ಮಾಪನ ಮಾಡುವಲ್ಲಿ ಶಿಕ್ಷಕರಿಗೆ ವಿಶೇಷ ತರಬೇತಿ ನೀಡಿರುವುದಿಲ್ಲ.
8. ಮೌಖಿಕ ಪರೀಕ್ಷೆ ಮಾಡುವಲ್ಲಿ ಎದುರಾದ ಸಮಸ್ಯೆಗಳು.



**ಇ) ಮೌಖಿಕ ಪರೀಕ್ಷೆ ಮಾಡುವಲ್ಲಿ ಎದುರಾದ ಸಮಸ್ಯೆಗಳು**

1. ಮಗು ಹಿಂದಿನ ಪದ್ಧತಿಯಲ್ಲಿ ವರ್ಷದ ಎಲ್ಲಾ ಪಾಠಗಳನ್ನು ಜ್ಞಾಪಿಸಿಕೊಂಡು ಪರೀಕ್ಷೆಯಲ್ಲಿ ಉತ್ತರಗಳನ್ನು ಬರೆಯುತ್ತಿತ್ತು.

ಇದರಿಂದ ಮಗುವಿನ ಜ್ಞಾಪಕ ಶಕ್ತಿ ಬಹಳವಾಗಿ ಬೆಳೆಯುತಿತ್ತು. ಇಲ್ಲಿ ಅದಕ್ಕೆ ಅವಕಾಶವಿಲ್ಲ.

2. ಹಿಂದಿನ ಪದ್ಧತಿಯಲ್ಲಿ ಪಠ್ಯವಸ್ತುವಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುತ್ತಿತ್ತು. ಈಗಿನ ಪದ್ಧತಿಯಲ್ಲಿ ಪಠ್ಯವಸ್ತುವಿನಂತೆ ಆದ್ಯತೆಯನ್ನು ಸಹ ಪಠ್ಯ ಚಟುವಟಿಕೆಗಳಿಗೂ ಕಲ್ಪಿಸಲಾಗಿದೆ. ಇದರಿಂದ ಮಗುವು ಪಠ್ಯ ವಿಷಯದ ಕಡೆ ಹೆಚ್ಚಿನ ಆಸಕ್ತಿಯನ್ನು ತೋರಿಸುವುದಿಲ್ಲ. ಇದರಿಂದ ಮಕ್ಕಳಲ್ಲಿ ಪಠ್ಯ ವಿಷಯದ ಬಗ್ಗೆ ಬೇಜವಾಬ್ದಾರಿತನ ಹೆಚ್ಚಾಗಿದೆ.

3. ತ್ರೈಮಾಸಿಕ ಶಿಕ್ಷಣ ಪದ್ಧತಿಯಲ್ಲಿ ಮಗುವಿಗೆ ಗ್ರೇಡ್ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಇದರಿಂದ ಓದುವ ಬುದ್ಧಿವಂತ ಮಗುವಿಗೆ ಮಾನಸಿಕವಾಗಿ ನಿರಾಸೆಯಾಗಿದೆ. ಪೋಷಕರು ಸಹ ಅಂಕಗಳನ್ನು ನಮೂದಿಸುವ ಬಗ್ಗೆ ಹೆಚ್ಚಿನ ಒಲವನ್ನು ತೋರಿಸಬಹುದು. ಇದು ಕಲಿಕೆಯಲ್ಲಿ ಮುಂದಿರುವ ಮಗುವಿಗೆ ಆಗುತ್ತಿರುವ ಅನ್ಯಾಯವಾಗಬಹುದು.

ಸಮಿತಿಯು ತನ್ನ ವರದಿಯಲ್ಲಿ 5 ರಿಂದ 8ನೇ ತರಗತಿಯವರೆಗೆ ತ್ರೈಮಾಸಿಕ ಪದ್ಧತಿಯನ್ನೇ ಮುಂದುವರೆಸಬಹುದು ಮತ್ತು 9ನೇ ತರಗತಿ ಸೆಮಿಸ್ಟರ್ ಪದ್ಧತಿಯನ್ನು ಅಳವಡಿಸಬಹುದೆಂದು ಶಿಫಾರಸ್ಸು ಮಾಡಿದೆ. ಈ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಓದಲಾದ ದಿ॥ 31.5.2007ರ ಪತ್ರದಲ್ಲಿ ಕೋರಿದ್ದಾರೆ. ಸದರಿ ವಿಷಯದ ಬಗ್ಗೆ ದಿ॥ 5.6.2007ರಂದು ನಡೆದ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು, ಜಿಲ್ಲಾ ನಿರ್ದೇಶಕರುಗಳ ಸಭೆಯಲ್ಲಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಉಪಸ್ಥಿತಿಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು.

ತ್ರೈಮಾಸಿಕ ಪದ್ಧತಿಯ ಪ್ರಮುಖ ಅನಾನುಕೂಲತೆಗಳು ಅಂದರೆ ನಿಧಾನವಾಗಿ ಕಲಿಯುವ ವಿದ್ಯಾರ್ಥಿಗಳ ನಿರ್ಲಕ್ಷ್ಯ, ವಿದ್ಯಾರ್ಥಿಗಳೆಲ್ಲರೂ ಅರ್ಥಪೂರ್ಣವಾಗಿ ಕಲಿಯುತ್ತಿದ್ದಾರೆ ಎಂಬುದಕ್ಕಿಂತ ತ್ರೈಮಾಸಿಕ ಪಠ್ಯ ಕ್ರಮವನ್ನು ಮುಗಿಸುವ ಆತುರ, ಕಲಿಕೆಗಿಂತ ದಾಖಲೀಕರಣ, ಮೌಲ್ಯಮಾಪನ ಪ್ರಕ್ರಿಯೆಗೆ ಹೆಚ್ಚಿನ ಸಮಯದ ವ್ಯಯ. ಇವುಗಳನ್ನು ತಕ್ಕಮಟ್ಟಿಗೆ ಪರಿಹರಿಸಲು ತ್ರೈಮಾಸಿಕ ಪರೀಕ್ಷಾ ಪದ್ಧತಿಯನ್ನು ಮಾರ್ಪಡಿಸಿ, ಅರ್ಧವಾರ್ಷಿಕ ಸೆಮಿಸ್ಟರ್ ಪದ್ಧತಿಯನ್ನು ಜಾರಿಗೆ ತರುವುದು ಸೂಕ್ತವೆಂದು ದಿನಾಂಕ 05-06-2007 ರಂದು ಜರುಗಿದ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಒಟ್ಟಾರೆ ಅಭಿಪ್ರಾಯವಾಗಿತ್ತು. ಇದರಿಂದ ತ್ರೈಮಾಸಿಕ ಪದ್ಧತಿಯ ಅನುಕೂಲತೆಗಳನ್ನು ಪಡೆಯುವುದರೊಂದಿಗೆ ಅದರ ಅನಾನುಕೂಲತೆಗಳನ್ನು ನಿವಾರಿಸಬಹುದು. ಈ ಹಿನ್ನೆಲೆಯಲ್ಲಿ ಸದರಿ ತ್ರೈಮಾಸಿಕ ಪದ್ಧತಿಯನ್ನು ರದ್ದುಪಡಿಸಿ, ಅರ್ಧವಾರ್ಷಿಕ ಸೆಮಿಸ್ಟರ್ ಪರೀಕ್ಷಾ ಪದ್ಧತಿಯನ್ನು ಜಾರಿಗೆ ತರಲು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಇಡಿ 8 ಡಿಜಿಓ 2007, ಬೆಂಗಳೂರು, ದಿನಾಂಕ 30-06-2007**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ತ್ರೈಮಾಸಿಕ ಪದ್ಧತಿಯ ಅನುಕೂಲತೆಗಳನ್ನು ಪಡೆದು ಅದರ ಅನಾನುಕೂಲತೆಗಳನ್ನು ನಿವಾರಿಸಲು 5ನೇ ತರಗತಿಯಿಂದ 9ನೇ ತರಗತಿಯವರೆಗೆ ತ್ರೈಮಾಸಿಕ ಪರೀಕ್ಷಾ ಪದ್ಧತಿಯ ಬದಲು ಅರ್ಧವಾರ್ಷಿಕ ಸೆಮಿಸ್ಟರ್ ಪದ್ಧತಿಯನ್ನು 2007-08ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ತರಲು ಆದೇಶಿಸಿದೆ.

ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ವೇಳಾ ಪಟ್ಟಿಯನ್ನು ಸೂಕ್ತವಾಗಿ ಪರಿಷ್ಕರಿಸಿ ಹೊರಡಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರು ಕ್ರಮ ಕೈಗೊಳ್ಳತಕ್ಕದ್ದು.

ಪಠ್ಯಕ್ರಮದಲ್ಲಿ ಅಗತ್ಯ ಬದಲಾವಣೆ ತರಲು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ನಿರ್ದೇಶಕರು ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು ಹಾಗೂ ಈ ಅರ್ಧವಾರ್ಷಿಕ ಸೆಮಿಸ್ಟರ್ ಪರೀಕ್ಷಾ ಪದ್ಧತಿಯಂತೆ ಪಠ್ಯ ಪುಸ್ತಕಗಳಲ್ಲಿ 2008-09ರಿಂದ ಜಾರಿಗೆ ಬರುವಂತೆ ಬದಲಾವಣೆ ಮಾಡಲು ಸಹ ಕ್ರಮ ಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**ಸಹಿ/-**
**(ಸ್ವರ್ಣಲತ ಎಂ.ಭಂಡಾರೆ)**
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ, ಸೇವೆಗಳು (1-2)



## ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ,

**ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ : ಎಡಿಎಂ 2 ಮಕ್ಕಳ ಸುರಕ್ಷತೆ 20/2007–08 ದಿನಾಂಕ 18–07–2007

# ಸುತ್ತೋಲೆ

**ವಿಷಯ : ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಸುರಕ್ಷತೆ ಬಗ್ಗೆ.**

ಇತ್ತೀಚೆಗೆ ಕೆಲವು ಪ್ರಾಥಮಿಕ ಶಾಲೆಗಳಲ್ಲಿ ಶಾಲೆಯ ಪರಿಸರದಿಂದಾಗಿ ಮಕ್ಕಳ ಸುರಕ್ಷತೆಯ ಬಗ್ಗೆ ಆತಂಕ ಮೂಡಿರುವುದು ಎಲ್ಲರಿಗೂ ವೇದ್ಯವಾಗಿದೆ. ಮಕ್ಕಳು ನಮ್ಮ ನಾಡಿನ ಆಸ್ತಿ. ಅವರ ಸುರಕ್ಷತೆಯ ಬಗ್ಗೆ ಅತ್ಯಂತ ಗಂಭೀರತೆಯಿಂದ ಹಾಗೂ ಜಾಗರೂಕತೆಯಿಂದ ಹಲವು ಮುಂಜಾಗ್ರತ ಕ್ರಮಗಳನ್ನು ಅನುಸರಿಸುವುದು ಅನಿವಾರ್ಯವಾಗಿದೆ. ಆದ್ದರಿಂದ ಈ ಕೆಳಕಂಡ ಸೂಚನೆಗಳನ್ನು ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ ವರ್ಗೀಕರಣ ನಿಯಂತ್ರಣ ಹಾಗೂ ಪಠ್ಯ ಕ್ರಮ ನಿರ್ವಹಣೆ ನಿಯಮಗಳು 1995 ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 116 95 ದಿನಾಂಕ : 04–19–1996ಗೆ ಪೂರಕವಾಗಿ ನೀಡಲಾಗಿದೆ.

1. ಯಾವುದೇ ಶಾಲೆಗೆ ಮಾನ್ಯತೆ ನೀಡುವ ಮುನ್ನ ಶಾಲೆಯು ನಡೆಸುತ್ತಿರುವ ಕಟ್ಟಡ ಎಲ್ಲಾ ದೃಷ್ಟಿಯಿಂದಲೂ ಸುರಕ್ಷತೆಯಿಂದ ಇದೆ ಎಂದು ಖಾತರಿ ಪಡಿಸಿಕೊಳ್ಳಬೇಕು. ನಗರ ಪ್ರದೇಶಗಳಲ್ಲಿ ಹಲವು ಮಜಲಿನ ಕಟ್ಟಡಗಳಲ್ಲಿ ಶಾಲೆಗಳನ್ನು ನಡೆಸುತ್ತಿದ್ದು ಅಂತಹ ಸಂದರ್ಭಗಳಲ್ಲಿ ಕೆಲವು ಸೂಕ್ಷ್ಮ ವಿಚಾರಗಳ ಬಗ್ಗೆ ಆಡಳಿತ ಮಂಡಳಿಗಳು ಗಮನಹರಿಸುವುದು ಸೂಕ್ತ.

ಯಾವುದೇ ಸಂದರ್ಭಗಳಲ್ಲಿ ಕೆಳಸ್ತರದಲ್ಲಿ ವ್ಯಾಸಂಗ ಮಾಡುತ್ತಿರುವ ನರ್ಸರಿ, 1 ಮತ್ತು 2ನೇ ತರಗತಿಯ ಮಕ್ಕಳನ್ನು ನೆಲ ಮಹಡಿಯಲ್ಲಿ ಇರುವ ಕೊಠಡಿಗಳಲ್ಲಿ ವ್ಯಾಸಂಗ ಮಾಡುವಂತೆ ನೋಡಿಕೊಳ್ಳಬೇಕು.

ಶಾಲೆಯ, ಮೇಲಿನ ಮಜಲುಗಳಿಗೆ ಹೋಗಬೇಕಾದ ಮೆಟ್ಟಿಲುಗಳು ಕಿರಿದು ಆಗಿರಬಾರದು. ಒಂದು ವೇಳೆ ಪ್ರತಿ ಮಜಲುಗಳಲ್ಲಿ ಸುರಕ್ಷಿತ ಗೋಡೆಗಳನ್ನು ನಿರ್ಮಿಸದಿದ್ದಲ್ಲಿ ಅಥವಾ ತುಂಬಾ ಚಿಕ್ಕದಾದ ಗೋಡೆಗಳನ್ನು ನಿರ್ಮಾಣ ಮಾಡಿದ್ದಲ್ಲಿ ಈ ಬಗ್ಗೆ ಅತ್ಯಂತ ಜರೂರು ಕ್ರಮ ಕೈಗೊಳ್ಳಬೇಕು. ಕೊನೆಯ ಪಕ್ಷ 5 ಅಡಿ ತಡೆ ಗೋಡೆಗಳು ಇರುವಂತೆ ನೋಡಿಕೊಳ್ಳಬೇಕು. ಗಾಳಿ ಬೆಳಕಿನ ವ್ಯವಸ್ಥೆಗೆ ಅಡ್ಡಿ ಉಂಟಾಗದಂತೆ ಗ್ರಿಲ್‌ಗಳನ್ನು ಅಳವಡಿಸಬೇಕು.

ಪ್ರಾರ್ಥನೆ ಆದಮೇಲೆ ತರಗತಿಗೆ ಮಕ್ಕಳನ್ನು ಕಳುಹಿಸುವಾಗ ಮೇಲಿನ ಅಂತಸ್ತಿಗೆ ಹೋಗುವ ಮಕ್ಕಳು ನೂಕುನುಗ್ಗಲು ಇರದಂತೆ ಹೋಗುವ ವ್ಯವಸ್ಥೆ ಇರಬೇಕು. ಇದೇ ವ್ಯವಸ್ಥೆ ಶಾಲೆ ಬಿಟ್ಟಾಗ ಮತ್ತು ಕೊನೆಯ ಬೆಲ್ ಆದ ಮೇಲೂ ಸಹ ಇರುವಂತೆ ನೋಡಿಕೊಳ್ಳಬೇಕು. ಶಾಲೆಯ ಸೆಕ್ಯುರಿಟಿ ಗಾರ್ಡ್‌ಗಳನ್ನು ಈ ಕೆಲಸಕ್ಕೆ ನಿಯೋಜಿಸಿಕೊಳ್ಳಬೇಕು.

2. ಯಾವುದೇ ಸಂದರ್ಭದಲ್ಲೂ ಶಾಲೆಯ ಮಕ್ಕಳು ಶಾಲೆ ಮುಗಿದ ಮೇಲೆ ರಸ್ತೆಗಳನ್ನು ದಾಟುವ ಸಂದರ್ಭಗಳು ಇದ್ದಲ್ಲಿ ದಾಟಿಸಲು ಶಿಕ್ಷಕರಾಗಲೀ ಅಥವಾ ಆಡಳಿತ ಮಂಡಳಿಗಳ ಸೆಕ್ಯೂರಿಟಿಯಾಗಲೀ ಕಡ್ಡಾಯವಾಗಿ ಹಾಜರಿದ್ದು ಮಕ್ಕಳನ್ನು ದಾಟಿಸಲು ವ್ಯವಸ್ಥೆ ಮಾಡಬೇಕು.

3. ಈಗಾಗಲೇ ಹಲವು ಬಾರಿ ಮಕ್ಕಳನ್ನು ಕರೆ ತರುವ ವಾಹನಗಳಲ್ಲಿ ಸಾರಿಗೆ ನಿಯಮಗಳನ್ನು ಮೀರಿ ನಿಗದಿತ ಸಂಖ್ಯೆಗಿಂತ ಹೆಚ್ಚಿನ ಮಕ್ಕಳನ್ನು ತುಂಬಿಕೊಂಡು ಬರುವುದನ್ನು ನಿಷೇಧಿಸಬೇಕು. ಒಂದು ವೇಳೆ ಆಡಳಿತ ಮಂಡಳಿಯಲ್ಲಿ ಸಾರಿಗೆ ವ್ಯವಸ್ಥೆಯ ಮೇಲೆ ನಿಯಂತ್ರಣ ಇಲ್ಲದಿದ್ದಲ್ಲಿ ನಿಷಿದ್ಧ ಪ್ರಕರಣಗಳ ಬಗ್ಗೆ ಪೋಲಿಸ್ ಇಲಾಖೆಗೆ ದೂರು ನೀಡಬೇಕು.

4. ಮಧ್ಯಂತರ ಅವಧಿಯಲ್ಲಿ ಅಥವಾ ಅನಿರೀಕ್ಷಿತ ಕಾರಣಗಳಿಗಾಗಿ ಶಾಲೆ ಬಿಡುವ ಸಂದರ್ಭಗಳಲ್ಲಿ ಮಕ್ಕಳ ಚಲನವಲನಗಳ ಮೇಲೆ ನಿಗಾ ಇಡುವಲ್ಲಿ ಕ್ರಮ ಕೈಗೊಳ್ಳಬೇಕು. ಯಾವುದೇ ಸಂದರ್ಭದಲ್ಲೂ ಮಕ್ಕಳು ಆಟ ಆಡುವಾಗ ಕಡ್ಡಾಯವಾಗಿ ಉಸ್ತುವಾರಿ ಮಾಡುವ ವ್ಯವಸ್ಥೆ ಶಾಲೆಯಲ್ಲಿ ಇರಬೇಕು.

5. ಈ ಹಿಂದೆ ಇಲಾಖೆಯ ಹಲವು ಸುತ್ತೋಲೆಗಳನ್ನು ಮಕ್ಕಳಿಗೆ ದೈಹಿಕ ದಂಡನೆ ನೀಡಲೇಬಾರದೆಂದು ಸ್ಪಷ್ಟಪಡಿಸಿದೆ. ಇದು ಶೈಕ್ಷಣಿಕವಾಗಿ ಅತ್ಯಂತ ಹೀನ ಕೃತ್ಯ ಎನಿಸಿಕೊಳ್ಳುತ್ತದೆ. ಇದೇ ರೀತಿ ದೈಹಿಕ ಶ್ರಮವಿರುವ ದಂಡನೆಗಳನ್ನು ಯಾವುದೇ ಸಂದರ್ಭಗಳಲ್ಲಿಯೂ ಮಕ್ಕಳಿಗೆ ನೀಡಬಾರದು. ಈ ಹಿಂದೆ ಶಾಲಾ ಆವರಣದಲ್ಲಿ, ದಂಡನೆಗಾಗಿ, ಹಲವು ಸುತ್ತುಗಳನ್ನು ಓಡಿಸಲು ಆದೇಶಿಸಿದ ಪರಿಣಾಮ ಒಬ್ಬ ವಿದ್ಯಾರ್ಥಿನಿ ಮೃತ ಪಟ್ಟ ಪ್ರಸಂಗವನ್ನು ಯಾರು ಮರೆಯಬಾರದು.

6. ಶಿಕ್ಷಣ ಸಂಸ್ಥೆಗಳನ್ನು ನೋಂದಾಯಿಸುವ ಅಧಿಕಾರವಿರುವ ಕ್ಷೇತ್ರ ಶಿಕ್ಷಣಾಧಿಕಾರಿಗಳು ಅಥವಾ ಈ ಬಗ್ಗೆ ಮನವಿಗಳನ್ನು ಸ್ವೀಕರಿಸುವ ಉಪನಿರ್ದೇಶಕರುಗಳು ನೋಂದಣಿ ಮಾಡುವಾಗ ಹಾಗೂ ಶಾಲೆಯ ಮಾನ್ಯತೆ ನೀಡುವಾಗ ಪ್ರತಿ ಮಕ್ಕಳ ಸುರಕ್ಷತೆಯ ಬಗ್ಗೆ ಷರತ್ತುಗಳನ್ನು ವಿಧಿಸುವುದು ಅತ್ಯಂತ ಅವಶ್ಯಕ.

7. ಈಗಾಗಲೇ ಟ್ರಾಫಿಕ್ ಸಮಸ್ಯೆಗಳಿಂದಾಗಿ ಶಾಲಾ ವೇಳಾ ಪಟ್ಟಿ ಬದಲಾಯಿಸಿದೆ. ಇದನ್ನು ಯಾವುದೇ ಸಂದರ್ಭಗಳಲ್ಲೂ ಶಾಲೆ ನಿಗದಿಪಡಿಸಿದ ಅವಧಿಗಳನ್ನು ಉಲ್ಲಂಘಿಸದಂತೆ ಪಾಲಿಸಬೇಕು. ಇಲಾಖೆಯ ಅಧಿಕಾರಿಗಳು ಈ ಬಗ್ಗೆ ಜಾಗರೂಕತೆಯಾಗಿ ಅನುಪಾಲನೆಯ ಕೆಲಸವನ್ನು ನೋಡಿಕೊಳ್ಳಬೇಕು.

8. ಈಗಾಗಲೇ ಮಾನ್ಯತೆ ನೀಡಿರುವ ಸಂದರ್ಭಗಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರುಗಳು ಶಾಲೆಯ ಅರ್ಹತೆ ಬಗ್ಗೆ ಪ್ರಮಾಣೀಕರಿಸಲಾಗಿದ್ದರೂ ಸಹ ಈ ದಿನಾಂಕದಿಂದ ಇನ್ನು ಒಂದು ತಿಂಗಳೊಳಗಾಗಿ ಉಪನಿರ್ದೇಶಕರುಗಳು ಪ್ರತಿಯೊಂದು ಶಾಲೆಯನ್ನು ಒಬ್ಬ ಅಧಿಕಾರಿ ಭೇಟಿ ಮಾಡಿ ಶಾಲೆಯ ಸುರಕ್ಷತೆ ಬಗ್ಗೆ ಖಚಿತಪಡಿಸಿಕೊಂಡು ವರದಿ ಸಲ್ಲಿಸುವಂತೆ ಆದೇಶಿಸಬೇಕು. ಇಂತಹ ವರದಿಗಳನ್ನು ಸಲ್ಲಿಸುವ ಅಧಿಕಾರಿಗಳು ಮೇಲೆ ತಿಳಿಸಿದ ಎಲ್ಲಾ ಅಂಶಗಳ ಬಗ್ಗೆ ಚಾಚು ತಪ್ಪದೆ ಅನುಪಾಲನೆ ಆಗುವಂತೆ ನೋಡಿಕೊಳ್ಳುವುದಲ್ಲದೆ ಮುಂದೆ ಅಹಿತಕರ ಘಟನೆಗಳು ನಡೆಯದಿರಲು ಏನೆಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಸಂಪೂರ್ಣ ಜವಾಬ್ದಾರರಾಗಬೇಕಾಗುತ್ತದೆ.

**ಸಹಿ/–**
**(ಜಿ. ಕುಮಾರನಾಯಕ)**
ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ

## ಕರ್ನಾಟಕ ಸರ್ಕಾರ

ಸಂಖ್ಯೆ : ಇಡಿ 32 ಎಸ್‌ಇಎಸ್ 2005

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 08–03–2007

## ಸುತ್ತೋಲೆ

**ವಿಷಯ : ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಸೆಕ್ಷನ್ : 67ರಡಿ ನೇಮಕವಾದ ವಿಶೇಷಾಧಿಕಾರಿಗಳು ಸಂಬಂಧಿಸಿದ ಶಿಕ್ಷಣ ಸಂಸ್ಥೆಯಲ್ಲಿನ ಖಾಲಿಹುದ್ದೆಗಳನ್ನು ನೇಮಕಾತಿ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸಿ ತುಂಬಲು ಆಸ್ಪದ ಇಲ್ಲದೇ ಇರುವ ಬಗ್ಗೆ ಸ್ಪಷ್ಟೀಕರಣ.**

**ಉಲ್ಲೇಖ :** 1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರ ದಿನಾಂಕ : 06–07–2006ರ ಪತ್ರ ಸಂಖ್ಯೆ : ಜಿ5ಶಾಶಿಅ:ಯಾಶಾದೂ:160;05–06.

1. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿಂದಂತೆ, ಅಂದರೆ, ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಸೆಕ್ಷನ್ : 67ರಡಿ ನೇಮಕವಾದ ವಿಶೇಷಾಧಿಕಾರಿಗಳು ಸಂಬಂಧಿಸಿದ ಶಿಕ್ಷಣ ಸಂಸ್ಥೆಯಲ್ಲಿನ ಖಾಲಿ ಹುದ್ದೆಗಳನ್ನು ನೇಮಕಾತಿ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸಿ ತುಂಬಲು ಆಸ್ಪದ ಇದೆಯೇ? ಅಥವಾ ಇಲ್ಲವೇ ? ಎಂಬ ಬಗ್ಗೆ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಇವರು ಉಲ್ಲೇಖಿತ ದಿನಾಂಕ : 06–07–2006ರ ಪತ್ರದನ್ವಯ ಸ್ಪಷ್ಟೀಕರಣ ಕೋರಿರುತ್ತಾರೆ. ಸದರಿ ಅಂಶವನ್ನು ಪರಿಶೀಲಿಸಿ ಈ ಮೂಲಕ ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿದೆ.

2. ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಸೆಕ್ಷನ್ 67(1)ರ ಪ್ರಕಾರ ಸರ್ಕಾರವು ಯಾವುದೇ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಯ ಆಡಳಿತವನ್ನು ಸಾರ್ವಜನಿಕ ಹಿತದೃಷ್ಟಿಯಿಂದಾಗಲಿ ಅಥವಾ ಆ ಸಂಸ್ಥೆಗೆ ಯುಕ್ತವಾದ ಆಡಳಿತವನ್ನು ಒದಗಿಸಿಕೊಡುವ ದೃಷ್ಟಿಯಿಂದಾಗಲಿ, ತಾನು ವಹಿಸಿಕೊಳ್ಳಬೇಕೆಂದು ಸರ್ಕಾರವು ಅಭಿಪ್ರಾಯಪಡುವಲ್ಲಿ, ಸಂಬಂಧಿಸಿದ ಸಂಸ್ಥೆಗೆ ಒಂದು ತಿಂಗಳ ನೋಟೀಸನ್ನು ಕೊಟ್ಟು ಅದರ ಆಡಳಿತವು ಸರ್ಕಾರದಲ್ಲಿ ನಿಹಿತವಾಗತಕ್ಕದ್ದೆಂದು ನಿರ್ದೇಶಿಸಬಹುದು. ಸದರಿ ಕಾಯ್ದೆಯ ಸೆಕ್ಷನ್ 67(6ರ ಪ್ರಕಾರ, ರಾಜ್ಯ ಸರ್ಕಾರದ ಪರವಾಗಿ ಅಂತಹ ಸಂಸ್ಥೆಯ ಆಡಳಿತವನ್ನು ನಿರ್ವಹಿಸಲು ವಿಶೇಷಾಧಿಕಾರಿಯನ್ನು ನೇಮಿಸಲು ಅವಕಾಶ ಇರುತ್ತದೆ. ಆದರೆ ಅಂತಹ ಶಿಕ್ಷಣ ಸಂಸ್ಥೆಯಲ್ಲಿನ ಖಾಲಿ ಹುದ್ದೆಗಳನ್ನು ತುಂಬಲು ನೇಮಕಾತಿ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸಲು ವಿಶೇಷಾಧಿಕಾರಿಗಳಿಗೆ ಅವಕಾಶ ಕಲ್ಪಿಸಿರುವುದಿಲ್ಲ. ಆದ್ದರಿಂದ ಸೆಕ್ಷನ್ 67(6)ರ ಪ್ರಕಾರ ನೇಮಕವಾದ ವಿಶೇಷಾಧಿಕಾರಿಯವರು ಅಂತಹ ಶಿಕ್ಷಣ ಸಂಸ್ಥೆಯಲ್ಲಿನ ಖಾಲಿ ಹುದ್ದೆಗಳನ್ನು ತುಂಬುವ ಪ್ರಾಧಿಕಾರವಾಗಿರುವುದಿಲ್ಲವೆಂದು ಈ ಮೂಲಕ ಸ್ಪಷ್ಟೀಕರಿಸಿದೆ.

3. ಈ ರೀತಿ, ಸದರಿ ವಿಶೇಷಾಧಿಕಾರಿಗಳು ಆಯಾಯಾ ಸಂಸ್ಥೆಗೆ ಸಂಬಂಧಿಸಿದಂತೆ ನೇಮಕ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸಿ, ಖಾಲಿ ಹುದ್ದೆಗಳನ್ನು ತುಂಬತಕ್ಕದ್ದಲ್ಲ.

4. ಮೇಲಿನ ಕಂಡಿಕೆ 03ರಲ್ಲಿನ ಸೂಚನೆಯನ್ನು ಸೆಕ್ಷನ್ 67ರಡಿ ನೇಮಕವಾದ ಎಲ್ಲಾ ವಿಶೇಷಾಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದೆಂದು, ಈ ಮೂಲಕ ಸ್ಪಷ್ಟೀಕರಿಸಿದೆ.

**ಸಹಿ/–**
(ಸಿದ್ದಲಿಂಗಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ.

## Government of Karnataka

No. ED 41 Sep. 2007

Karnataka Government Secretariat,
M.S. Building,
Bangalore, dated : 7-4-2007

### Notification

In exercise of the powers conferred by the section 143 of the Karntaka Education Act, 1983 (Karnataka Act 1 of 1995), the Government of Karnataka hereby delegates the powers exercisable by it under section 67 of the said Act, to the Commissioner for Public Instruction concerned in respect of institutions within their respective jurisdiction.

Provided that in case of an educational institution imparting education in the Jurisdiction of more than one Commissioner of Public Instruction, the said powers, in so far as such educational institutions are concerned, shall be exercised by the Commissioner for Public Instruction, Bangalore.

By Order and in name of the
Governor of Karnataka.,
(Siddalingaiah)
Under Secretary to Government,
Education Department

---

# Government of Karnataka

No. ED 122 Sep. 2007

Karnataka Government Secretariat,
M.S. Building,
Bangalore, dated : 7-4-2007

## Notification

In exercise of the powers conferred by clause (31) of section 2 of the Karnataka Education Act, 1983 (Karnataka Avt 1 of 1994) and in partial modification of the notification No. ED 68 AAV 96 datd 30-6-1997, the Government of Karnataka hereby authorizes the officers specified in column (3) and (4) of the Table below the perform the functions and discharge the duties of the registering authority for the purpose specified therein, namely:-

# Table

| Sl. No. | Class of Educational Institutions applications for | Registering authority for the purpose of receiving applications for registration | Registering authority of all other Provisions purposes and the of the Act noted below |
|---|---|---|---|
| 1 | 2 | 3 | 4 |

**A For educational institutions seeking fresh registration under Section 31 and for upgradation under Section 32**

| | | | |
|---|---|---|---|
| 1 | Pre-primary schools by whatever name called. | Block Education Officer in the concerned educational block for theblock | Block Education Officer in the concerned educational block |
| 2. | Primary Schools form standards 1 to 7 imparting education in the medium of mother tongue or Kannada medium other than English medium | Blcok Educational Officer in the concerned educational block for the block | Deputy Director of Public Insstruction of the concerned educational district. |
| 3. | Higher Primary Schools from standards 6 to 7 imparting education in English medium | Deputy Director of Public Instruction of the concerned educational district for the destrict | ConcernedCommissioner/ Additional Commissioner for Public Instruction |
| 4. | High schools (standards 8 to 10) (All media of Instruction) | Deputy Director of Public Instruction in the concerned educational district for the destrict | Concerner Commissioner/ Additional Commissioner for public Instruction. |

By Order in the name of the Governor of Karnataka

**(M. Prabhuswamy)**

Under Sectretary to Government (I/c) Education Department.

# ಚಿತ್ರಸುದ್ದಿ



ಸೊರಬ ತಾ|| ಹೆಗ್ಗೋಡು ಸ.ಹಿ.ಪ್ರಾ. ಶಾಲೆಯಲ್ಲಿ ದಿನಾಂಕ 31.05.07 ರಂದು ಶಾಲಾ ಆರಂಭೋತ್ಸವವನ್ನು ಆಚರಿಸಿದ್ದು, ಈ ಸಮಯದಲ್ಲಿ ಶಾಲೆಯ ಎಲ್ಲ ಮಕ್ಕಳಿಗೆ ಉಚಿತ ಸಮವಸ್ತ್ರ ಮತ್ತು ಪಠ್ಯ ಪುಸ್ತಕಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಶಾಲಾ ಶಿಕ್ಷಕ ವೃಂದ ಮತ್ತು ಎಸ್.ಡಿ.ಎಂ.ಸಿ. ಅಧ್ಯಕ್ಷರು ಮತ್ತು ಸದಸ್ಯರು ಹಾಜರಿದ್ದರು.

– ಶ್ರೀಮತಿ ಭಾರತಿ, ಮು.ಶಿ.



ಸರ್ಕಾರಿ ಮಾದರಿ ಶಾಲೆ, ಘಟಸಂದ್ರ. ಈ ಶಾಲೆಯಲ್ಲಿ 2007-08ನೇ ಸಾಲಿನಲ್ಲಿ ಚಿಣ್ಣರ ಅಂಗಳ - 2007 ಕಾರ್ಯಕ್ರಮದಡಿಯಲ್ಲಿ ಚಿಣ್ಣರ ಅಂಗಳ ಕೇಂದ್ರವನ್ನು ಶಾಲೆಯಲ್ಲಿ ಅನುಷ್ಠಾನಗೊಳಿಸಿದ್ದು ಈ ಕೇಂದ್ರದಲ್ಲಿ 6+ರಿಂದ 13+ ವರ್ಷದವರೆಗಿನ 63 ಮಕ್ಕಳು ದಾಖಲಾಗಿ ಯಶಸ್ವಿಯಾಗಿ ಮುಖ್ಯವಾಹಿನಿಗೆ ದಾಖಲಾಗಿರುತ್ತಾರೆ. ಈ ಕೇಂದ್ರದಲ್ಲಿ ಉತ್ತರ ಕರ್ನಾಟಕದ ಕಟ್ಟಡ ಕಾರ್ಮಿಕರ ಮಕ್ಕಳೇ ಶೇ. 95 ಮಕ್ಕಳು ದಾಖಲಾಗಿದ್ದಾರೆ. ಅನಾರೋಗ್ಯದಿಂದ ಬಳಲುತ್ತಿದ್ದ ಮಕ್ಕಳನ್ನು ಕೆ. ನಾರಾಯಣಪುರ ಡಾ|| ವೇಣುಗೋಪಾಲ ಸಾರ್ವಜನಿಕ ಆಸ್ಪತ್ರೆಯ ವೈದ್ಯಾಧಿಕಾರಿಗಳು ತಪಾಸಣೆ ನಡೆಸಿ ಆ ಮಕ್ಕಳಿಗೆ ಉಚಿತ ಔಷಧಿ, ಮಾತ್ರೆ ಸಲಹೆಗಳನ್ನು ನೀಡಿರುತ್ತಾರೆ.

ಸ.ಪ್ರಾ.ಶಾಲಾ ಶಿಕ್ಷಕರ ಸಂಘ, ಘಟಸಂದ್ರ ವೃತ್ತ



ದಿ.14-06-2007ರಂದು 10-30 ಹುಬ್ಬಳ್ಳಿ, ಧಾರವಾಡ ನಗರ ವಲಯಕ್ಕೆ ಪ್ರತ್ಯೇಕವಾಗಿ "ಕ್ಷೇತ್ರ ಸಂಪನ್ಮೂಲ ಕೇಂದ್ರ" (ಬಿಆರ್‌ಸಿ) ಯನ್ನು ಧಾರವಾಡ ಜಿಲ್ಲಾ ಉಪನಿರ್ದೇಶಕರಾದ ಬಿ.ಎಂ. ಪಾಟೀಲ ಇವರು ಟೇಪ ಕತ್ತರಿಸುವುದರ ಮೂಲಕ ಸಾಂಕೇತಿಕವಾಗಿ ಉದ್ಘಾಟಿಸಿದರು. ಅಧ್ಯಕ್ಷ ಸ್ಥಾನವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಜಿ.ಎಂ.ನಾಲತವಾಡ ಇವರು ವಹಿಸಿಕೊಂಡಿದ್ದರು. ಕಾರ್ಯಕ್ರಮದಲ್ಲಿ ಶಿಕ್ಷಣ ಸಂಯೋಜಕರಾದ ಆರ್.ಆರ್. ಹುಣಸಿ  ಸಿ. ಚಿತ್ತೂರ, ಎಸ್.ಜಿ.ನಾಯಕ್ ಹಾಗೂ ಸಿಆರ್‌ಪಿ ಗಳಾದ ಕಾಂಬಳೆ, ಎಸ್. ಎಲ್. ಬಳ್ಳಿ,  ಎಸ್. ಜೆ. ಮುಲ್ಲಾನವರ, ಎಂ.ಜೆ. ಅಂಗಡಿ, ಪಿಡ್ಡನವರ, ಭರಮಗೌಡರ ಎಂ.ಜಿ.ಕಾಡನಗೌಡರ, ಶ್ರೀ ಹರಕರಹಳ್ಳಿ ಇವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

–ಎಂ. ಜಿ. ಕಾಡನಗೌಡರ
ಬಿ.ಆರ್.ಪಿ.ಎಸ್., ಹುಬ್ಬಳ್ಳಿ



ಸರ್ಕಾರಿ ಪ್ರೌಢಶಾಲೆ ನಾಗರಸನಹಳ್ಳಿ ದಾವಣಗೆರೆ ದಕ್ಷಿಣ ವಲಯ ಇಲ್ಲಿ ದಿ|| 11.06.2007 ರಿಂದ 16-06-2007ರವರೆಗೆ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ " English language for young learner"ಎಂಬ ಆಂಗ್ಲ ಕಲಿಕಾ ಶಿಬಿರವನ್ನು ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ದಾವಣಗೆರೆ ಜಿಲ್ಲೆಯ 6 ಜನ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಉಪ ನಿರ್ದೇಶಕರ ಕಛೇರಿ ಶಿಕ್ಷಣಾಧಿಕಾರಿಗಳಾದ ಎನ್. ಜೆ. ಗುರುಪ್ರಸಾದ್ ನೆರವೇರಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಹೆಚ್. ಕೆ. ಲಿಂಗರಾಜು ಅಧ್ಯಕ್ಷತೆ ವಹಿಸಿದರು. ಕಾರ್ಯಕ್ರಮದಲ್ಲಿ ಇಂಗ್ಲಿಷ್ ವಿಷಯ ಸಹ ಶಿಕ್ಷಕರು ಶ್ರೀಮತಿ ಉಮಾದೇವಿ ಹಾಜರಿದ್ದರು.

–ಸಿ. ನಾಗರಾಜು, ಮು.ಶಿ

## ತಿಂಗಳ ಪದ



# ಬಣ್ಣದ ಹಕ್ಕಿಗಳೇ......

ಶಾಲೆಯ ಗೂಡಲಿ ಚಿಲಿಪಿಲಿ ಎನ್ನದೆ
ಬಣ್ಣದ ಹಕ್ಕಿಗಳೇ
ನುಣ್ಣನೆ ಗಲ್ಲದ ಪಿಳಿಪಿಳಿ ಕಣ್ಣಿನ
ರನ್ನದ ಬೊಂಬೆಗಳೇ

ಕಣ್ಣಲಿ ಆಸೆಯ ಕನಸಿದು ಕಮರಿ
ಬಾಡುವ ಹೂವುಗಳೇ
ಮಣ್ಣಲಿ ಹುದುಗಿ ಹೋಗದೆ ಇರಲಿ
ನಾಡಿನ ಸ್ತಂಭಗಳೇ
ನಾಳಿನ ಆಗಸ ತಾರೆಗಳೇ

ನೀರನು ಬಿಟ್ಟ ವಿಲವಿಲ ಎನ್ನುತ
ಬಾಳುವ ಮೀನುಗಳೇ
ಮರಳಿ ಶಾಲೆಗೆ ಬನ್ನಿ ಎಲ್ಲರು
ಕೊರಳಿನ ಮುತ್ತುಗಳೇ
ಭಾರತ ಮಾತೆಯ ರತ್ನಗಳೇ

ಕೂಲಿಯ ಕೆಲಸದಿ ಬಾಲ ಕಾರ್ಮಿಕ
ಪಿಡುಗಿಗೆ ಬಲಿಯಾದೆ
ಏತಕೆ ಗಿಡುಗನ ಗಿಳಿಯಾದೆ
ಅಕ್ಷರ ದಾಸೋಹ ಅನ್ನದ ತಾಳಿ
ಹಸಿವಿಗೆ ಅನ್ನವ ನೀಡುತಿದೆ

ಮಕ್ಕಳ ಹೆತ್ತ ತಂದೆ ತಾಯಿಗಳೇ
ಅಕ್ಕರೆ ನಿಮಗಿರಲಿ
ಶಿಕ್ಷಣವೆಂಬುದು ಮಗುವಿನ ಹಕ್ಕು
ನಿಮಗಿದು ತಿಳಿದಿರಲಿ
ಮಗುವಿನ ಮೊಗದಲಿ ನಗುವಿರಲಿ



ತಿಪ್ಪೇಸ್ವಾಮಿ.ಎಸ್. (ಹೊಸತಿ)
ಶಿಕ್ಷಕರು, ಹಿ.ಕಿ.ಪ್ರಾ.ಶಾಲೆ
ಜು.ಜು.ಗುಡ್ಡ ಗೊಲ್ಲರಹಟ್ಟಿ,ಕೂಡ್ಲಿಗಿತಾ||
ಬಳ್ಳಾರಿ ಜಿಲ್ಲೆ

www.schooleducation.kar.nic.in
Published by : commissioner for Public Instruction and State Project Director, Sarva Shikshana Abhiyana, Karnataka
Nrupatunga Road, Bengaluru-560 001. Ph : 080 - 2224 6976
Printed at : Abhimaani Publication Ltd., Dr. Rajkumar Road, Rajajinagar, Bengaluru - 560 010, Ph : 23123141